ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ
ಎಂ.ಫಿಲ್. ಪದವಿಯ ಸಂಪ್ರಬಂಧ

ಹರಿದಾಸಸಾಹಿತ್ಯದಲ್ಲಿ ವ್ಯಾಜಸ್ತುತಿಗಳು

ಸಂಶೋಧನ ವಿದ್ಯಾರ್ಥಿ

ಇಂದುಮತಿ ಎಸ್.

ಮಾರ್ಗದರ್ಶಕರು

ಪ್ರೊ ಜಿ. ಅಶ್ವತ್ಥನಾರಾಯಣ

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರದ
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ಬೆಂಗಳೂರು.
2007-08

ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ
ಎಂ.ಫಿಲ್. ಪದವಿಯ ಸಂಪ್ರಬಂಧ

ಹರಿದಾಸಸಾಹಿತ್ಯದಲ್ಲಿ ವ್ಯಾಜಸ್ತುತಿಗಳು

ಸಂಶೋಧನ ವಿದ್ಯಾರ್ಥಿ

ಇಂದುಮತಿ ಎಸ್.

ಮಾರ್ಗದರ್ಶಕರು

ಪ್ರೊ. ಜಿ. ಅಶ್ವತ್ಥನಾರಾಯಣ

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರದ
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ಬೆಂಗಳೂರು.
2007–08

ಅಭ್ಯರ್ಥಿಯ ಪ್ರಮಾಣಪತ್ರ

ಬೆಂಗಳೂರಿನ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ 2007–2008ನೇ ಸಾಲಿನ ಎಂ.ಫಿಲ್. ಪದವಿಗಾಗಿ **"ಹರಿದಾಸ ಸಾಹಿತ್ಯದಲ್ಲಿ ವ್ಯಾಜಸ್ತುತಿಗಳು"** ಎಂಬ ಸಂಪ್ರಬಂಧವನ್ನು ಪ್ರೊ ಜಿ. ಅಶ್ವತ್ಥನಾರಾಯಣ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಸಲ್ಲಿಸುತ್ತಿದ್ದೇನೆ.

ಈ ಸಂಪ್ರಬಂಧ ನನ್ನ ಸ್ವಂತ ಬರವಣಿಗೆ ಆಗಿದ್ದು, ಇದರ ಯಾವುದೇ ಭಾಗವನ್ನು ಈವರೆಗೆ ಬೇರಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ: 24/11/08
ಸ್ಥಳ: ಬೆಂಗಳೂರು

ಸಹಿ

Indutis

(ಇಂದುಮತಿ ಎಸ್.)

ಮಾರ್ಗದರ್ಶಕರ ಪ್ರಮಾಣಪತ್ರ

ಬೆಂಗಳೂರಿನ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ 2007–2008ನೇ ಸಾಲಿನ ಎಂ.ಫಿಲ್. ಪದವಿಗಾಗಿ **"ಹರಿದಾಸ ಸಾಹಿತ್ಯದಲ್ಲಿ ವ್ಯಾಜಸ್ತುತಿಗಳು"** ಎಂಬ ಸಂಪ್ರಬಂಧವನ್ನು ಇಂದುಮತಿ ಎಸ್. ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ.

ಈ ಸಂಪ್ರಬಂಧ ವಿದ್ಯಾರ್ಥಿಯ ಸ್ವಂತ ಬರವಣಿಗೆ ಆಗಿದ್ದು, ಇದರ ಯಾವುದೇ ಭಾಗವನ್ನು ಈವರೆಗೆ ಬೇರಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ: ಸಹಿ

ಸ್ಥಳ:

(ಪ್ರೊ|| ಜಿ. ಅಶ್ವತ್ಥನಾರಾಯಣ)

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

"ಕನ್ನಡ ಸಾಹಿತ್ಯ ವಿಶ್ವಸಾಹಿತ್ಯಕ್ಕೆ ನೀಡಿದ ವಿಶಿಷ್ಟ ಕೊಡುಗೆ ಎಂದರೆ ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯ. ಕನ್ನಡ ಶಾರದೆಯ ಎರಡು ಕಣ್ಣುಗಳೆಂದು ಅವನ್ನು ಕರೆದಿದ್ದಾರೆ. ಈ ಪೈಕಿ "ಕನ್ನಡ ಸಾಹಿತ್ಯದ ತವನಿಧಿಗಳಲ್ಲಿ ದಾಸಸಾಹಿತ್ಯ ಒಂದು. ಹಿಮಾಲಯದ ಎತ್ತರದಿಂದ ಹರಿದುಬಂದ ಗಂಗೆ ಬಯಲಿನಲ್ಲಿ ಇಳಿದು ನೆಲವನ್ನೆಲ್ಲ ಫಲಪ್ರದ ಮಾಡುವಂತೆ ಕನ್ನಡ ಸಾಹಿತ್ಯ ಶರಣರ ಮತ್ತು ದಾಸ ಸಾಹಿತ್ಯಗಳಲ್ಲಿ ಚಿತ್ತದ ಎತ್ತರದಿಂದ ಹುಟ್ಟಿತು. ಕೆಳಗಿನ ಎಲ್ಲ ಜನದವರೆಗೆ ಹಬ್ಬಿಕೊಂಡಿತು. ಜನತೆಯಲ್ಲಿ ಸಂಸ್ಕೃತಿಯನ್ನು ಬೆಳೆಯಿಸುವ ಪ್ರಭಾವಿಯಾದ ಸಾಧನವಾಯಿತು. ಓದದ ಕನ್ನಡ ಜನಕ್ಕೆ ಪಂಪಾದಿ ಪ್ರೌಢಕವಿಗಳು ಗೊತ್ತಿರಲಿ ಬಿಡಲಿ ಶರಣರ, ದಾಸರ ಸೂಳ್ನುಡಿ–ಸವಿಹಾಡುಗಳು ಗೊತ್ತಿಲ್ಲದವರು ಅಪರೂಪ. ಜನದ ಮೇಲೆ ನಿತಾಂತ ನಿರಂತರ ಪ್ರಭಾವವನ್ನು ಬೀಳುವ ಜನಸಮ್ಮುಖತೆ ಇದು ದಾಸಸಾಹಿತ್ಯದ ಪ್ರಮುಖ ಲಕ್ಷಣಗಳಲ್ಲಿ ಒಂದು"[1].

ಶ್ರೀ ಮಧ್ವಾಚಾರ್ಯರ ನೂತನ ಸಿದ್ಧಾಂತ ಪಂಡಿತಮಾನ್ಯವಾಗುವ ವೇಳೆಗೆ ಎಂದರೆ ಎರಡು ಶತಮಾನಗಳ ಅನಂತರ ಅಚ್ಚಕನ್ನಡಿಗರಾದ ಶ್ರೀಪಾದರಾಜರು ಕನ್ನಡದಲ್ಲಿ ಕೀರ್ತನೆಗಳನ್ನು ರಚಿಸಲು ತೊಡಗಿದರು. ಅವರೇ ಈ ಗೇಯಮಾಧ್ಯಮದ ವಿವಿಧ ಪ್ರಕಾರಗಳನ್ನು ರಚಿಸಿ ಮುಂದಿನವರಿಗೆ ಮೇಲುಪಂಕ್ತಿಯನ್ನು ಹಾಕಿಕೊಟ್ಟರು [2].

ಇದರಿಂದಾಗಿ ದಾಸಸಾಹಿತ್ಯ ಕೀರ್ತನೆ, ಸುಳಾದಿ, ಉಗಾಭೋಗ ಮೊದಲಾದ ಸಾಹಿತ್ಯಕ ರೂಪಗಳಲ್ಲಿ ಕಾಣಿಸಿಕೊಂಡರೂ ಕೀರ್ತನೆಗಳೇ ಪ್ರಮುಖವಾಗಿವೆ. ದಾಸಸಾಹಿತ್ಯವೆಂದರೆ ಕೀರ್ತನೆ ಸಾಹಿತ್ಯವೆನ್ನುವಷ್ಟರ ಮಟ್ಟಿಗೆ ಕೆಲವೆಡೆ ಪ್ರಾಶಸ್ತ್ಯ ಹೊಂದಿದೆ. ರಾಗ–ತಾಳಬದ್ಧವಾಗಿ ಪಲ್ಲವಿ–ಅನುಪಲ್ಲವಿ, ನುಡಿಗಳು, ಅಂಕಿತವಿರುವ ಕೀರ್ತನಸಾಹಿತ್ಯ ಅಪಾರವಾಗಿದೆ. 15000ಕ್ಕೂ ಮಿಕ್ಕು ಕೀರ್ತನೆಗಳು ಲಭ್ಯವಿದೆ, 140ಕ್ಕೂ ಮಿಕ್ಕು ಹರಿದಾಸರು ಕಂಡುಬರುತ್ತಾರೆ [3].

ಇಷ್ಟೆಲ್ಲಾ ಅಪಾರ ದಾಸ ಸಾಹಿತ್ಯ ಜನತೆಯಲ್ಲಿ ಓಲೆಗ್ರಂಥರಾಶಿಯಲ್ಲಿ ಅಡಕವಾಗಿದ್ದರೂ ಅಚ್ಚಿನ ಮೂಲಕ ಬೆಳಕಿಗೆ ಬಂದದ್ದು 19–20ನೆಯ ಶತಮಾನಗಳಲ್ಲಿ ಮುದ್ರಣಕಲೆಯ ಇತಿಹಾಸ ಪ್ರಾರಂಭವಾದಾಗಿನಿಂದ ಎನ್ನಬಹುದು.

ದಾಸಸಾಹಿತ್ಯವನ್ನು ಆಧುನಿಕ ಕಾಲದಲ್ಲಿ ಬೆಳಕಿಗೆ ತಂದವರು ಮೂವರು ಬಾಸೆಲ್ ಮಿಷನ್ನಿನ ಜರ್ಮನಿಯ (1) ವೈಗ್ಲೆ, (2) ಮೋಗ್ಲಿಂಗ್, (3) ಕಿಟಲ್. ಈ ಪೈಕಿ ಮೊಗ್ಲಿಂಗ್ ಪ್ರಕಟಿಸಿದ 'ದಾಸರ ಪದಗಳು' (1849) ಕನ್ನಡದಲ್ಲಿ ಪ್ರಕಟಿಸಿದ ದಾಸ ಸಾಹಿತ್ಯದ ಮೊದಲ ಪ್ರಕಟನೆ ಆಗಿವೆ. ಅಲ್ಲಿಂದ ಇಲ್ಲಿಯವರೆಗೆ ನಿರಂತರವಾಗಿ ದಾಸ ಸಾಹಿತ್ಯ ಪ್ರಕಟವಾಗುತ್ತಲೇ ಇದೆ. ದಾಸ ಸಾಹಿತ್ಯಕ್ಕೆ ಮೀಸಲಾದ ಕೆಲವು ಪತ್ರಿಕೆಗಳೂ ಪ್ರಕಟವಾಗುತ್ತಿವೆ. ಹತ್ತಾರು ಮಹಾಪ್ರಬಂಧಗಳು ಪ್ರಕಟವಾಗಿವೆ.

ಬೇಲೂರು ಕೇಶವದಾಸರು, ಪಂಚಮುಖಿ, ವೇದವ್ಯಾಸಾಚಾರ್ಯ, ಗೋರಬಾಳೆ, ಪಾವಂಜೆ, ಸುಬೋಧ ರಾಮರಾವ್, ಜಿ. ವರದರಾಜರಾವ್, ಪಂಡರೀನಾಥಾಚಾರ್ಯ, ಗಲಗಲಿ, ಗುರುಗೋವಿಂದ ವಿಠಲರು ಮೊದಲಾದವರು ವಿಮರ್ಶಾತ್ಮಕ ಹಾಗೂ ಪರಿಚಯಾತ್ಮಕ ಗ್ರಂಥಗಳನ್ನು ರಚಿಸಿದ್ದಲ್ಲದೆ ನೂರಾರು ಕೀರ್ತನೆಗಳನ್ನು ಬೆಳಕಿಗೆ ತಂದಿದ್ದಾರೆ.

ಈಗ ಪ್ರಕಟವಾದ ದಾಸ ಸಾಹಿತ್ಯದ ವಿಷಯ ವೈವಿಧ್ಯ ಕಂಡರೆ ಎಂಥಹವರಿಗೂ ಅಚ್ಚರಿ ಆಗುತ್ತದೆ. ಪ್ರಸಿದ್ಧ ದಾಸ ಸಾಹಿತ್ಯದ ಸಂಶೋಧಕರಾದ ಶ್ರೀನಿವಾಸ ಹಾವನೂರು ಪರಿಶೀಲಿಸಿ ಪ್ರಕಟಿಸಿದ ಗ್ರಂಥದಲ್ಲಿ, 860 ವಿಷಯಗಳನ್ನು ಕೀರ್ತನ ಸಾಹಿತ್ಯದಲ್ಲಿ ಗುರುತಿಸಿದ್ದಲ್ಲದೆ[4], ಅವತಾರತ್ರಯ, ಕ್ಷೇತ್ರಸ್ಥ ದೇವತೆಗಳು, ಧಾರ್ಮಿಕ ವಿಧಗಳು, ಪೂರ್ವಕರ್ಮ-ಪುನರ್ಜನ್ಮ, ಹಬ್ಬ-ಉತ್ಸವಗಳು, ಸ್ತ್ರೀದೇವತೆಗಳು, ಉದಯರಾಗಗಳು-ಶಯನಗೀತೆಗಳು, ಗುರುಸ್ಮರಣೆ, ಆತ್ಮಾವಲೋಕನ, ಮದುವೆ-ಮುಯ್ಯದ ಹಾಡುಗಳು – ಹೀಗೆ ನೂರಾರು ವಿಷಯಗಳನ್ನು ಕೀರ್ತನೆಗಳಲ್ಲಿ ಕಾಣಬಹುದಾಗಿದೆ ಎಂದಿದ್ದಾರೆ.

ಇಷ್ಟೆಲ್ಲಾ ಅಪಾರ ವೈವಿಧ್ಯದ ದಾಸ ಸಾಹಿತ್ಯ ಸಂಗ್ರಹವಾಗಿ ಪ್ರಕಟವಾಗಿದ್ದರೂ ಈ ಬಗೆಗೆ ನಡೆದಿರುವ ಸಂಶೋಧನೆ-ವಿಮರ್ಶೆ-ವಿಶ್ಲೇಷಣೆಗಳು ಸಾಕಷ್ಟು ನಡೆದಿದ್ದರೂ ಇನ್ನು ಆಗಬೇಕಾದುದು ಅಪಾರವಾಗಿದೆ. ಹರಿದಾಸರ ಕೀರ್ತನೆಗಳ ಸಂಗ್ರಹ, ಹರಿದಾಸರ ಜೀವನ ಕುರಿತ ಕೃತಿಗಳು, ಒಬ್ಬೊಬ್ಬ ಹರಿದಾಸರ ಜೀವನಸಾಧನೆಗಳ ಅಧ್ಯಯನ, ಹರಿದಾಸರ ಸಾಹಿತ್ಯದ ಸಿದ್ಧಾಂತಗಳು, ಇತರ ಭಕ್ತಿಸಾಹಿತ್ಯದೊಡನೆ ತೌಲನಿಕ ಅಧ್ಯಯನ ಇತ್ಯಾದಿ ಸಾಕಷ್ಟು ನಡೆದಿದ್ದರೂ ಸಮಗ್ರ ಹರಿದಾಸ ಸಾಹಿತ್ಯ ಚರಿತ್ರೆ ಆಗಲಿ, ದಾಸ ಸಾಹಿತ್ಯದ ಸಮಗ್ರ ನಿಘಂಟಾಗಲಿ ಅಥವಾ ಪರಿಭಾಷಿಕ ಪದಕೋಶವಾಗಲಿ ಬಂದಿಲ್ಲ[5]. ಆ ಬಗೆಯ ಪ್ರಯತ್ನಗಳು ಬಿಡಿಬಿಡಿಯಾಗಿ ಅಲ್ಪಪ್ರಮಾಣದಲ್ಲಿ ನಡೆದಿವೆ ಅಷ್ಟೆ[6]. ಅಂತೆಯೇ ಭಾಷೆಗೆ ಸಂಬಂಧಿಸಿದಂತೆ ಹರಿದಾಸರ ಕೀರ್ತನೆಗಳ ಭಾಷೆ, ಶೈಲಿ, ಛಂದಸ್ಸು, ವ್ಯಾಕರಣ, ಅಲಂಕಾರಗಳ ಬಗ್ಗೆ ಒಂದೆರಡು ಬಿಡಿ ಪ್ರಯತ್ನಗಳನ್ನು ಬಿಟ್ಟರೆ, ವಿಶೇಷ ಅಧ್ಯಯನ ನಡೆದೇ ಇಲ್ಲ. ಈ ಸಂದರ್ಭದಲ್ಲಿ ಬೇಲೂರು ಕೇಶವದಾಸರ 'ಹರಿದಾಸ ಸಾಹಿತ್ಯ', ಮುರಳೀಧರರ 'ತಂಬೂರಿ ಮೀಟಿದವರು', ಪಂಚಮುಖಿ ಅವರ 'ಹರಿದಾಸ ಸಾಹಿತ್ಯ',

ಜಿ.ವರದರಾಜರಾವ್ ಅವರ 'ಹರಿದಾಸ ಸಾಹಿತ್ಯ ಸಾರ', ಶ್ರೀಮತಿ ಕೀರ್ತಿ ರಘುರಾವ್‌ರವರ 'ದಾಸ ಸಾಹಿತ್ಯದಲ್ಲಿ ಕಾವ್ಯಪ್ರತಿಭೆ' ಮೊದಲಾದ ಗ್ರಂಥಗಳಲ್ಲಿ ಭಾಷೆ–ಸಾಹಿತ್ಯ ಅಲಂಕಾರ, ಛಂದಸ್ಸಿನ ಬಗ್ಗೆ ಭಾಗಶಃ ಚಿಂತನೆ ನಡೆದಿರುವುದನ್ನು ಕಾಣಬಹುದು. ಆದರೆ ದಾಸ ಸಾಹಿತ್ಯದಲ್ಲಿ ಅದರಲ್ಲೂ ಕೀರ್ತನ ಸಾಹಿತ್ಯದಲ್ಲಿ ಕಂಡುಬರುವ ಅಲಂಕಾರಗಳನ್ನು ಕುರಿತು ವಿಶೇಷ ಅಧ್ಯಯನ ನಡೆದೇ ಇಲ್ಲ ಎಂದರೆ ತಪ್ಪಾಗದು. ಈ ಅಲಂಕಾರಗಳ ಪೈಕಿ ವಿಶೇಷವಾಗಿ ದಾಸ ಸಾಹಿತ್ಯದ ಕೃತಿಗಳಲ್ಲಿ ಕಂಡುಬರುವ 'ವ್ಯಾಜಸ್ತುತಿ ಅಲಂಕಾರ'ವನ್ನು ಕುರಿತು ವಿಶೇಷ ಅಧ್ಯಯನವಂತೂ ಇದುವರೆಗೆ ಆಗಿಲ್ಲ. ವ್ಯಾಜಸ್ತುತಿ ಅಲಂಕಾರದ ಉಲ್ಲೇಖಗಳನ್ನು, ಪ್ರಸ್ತಾಪಗಳನ್ನು ಕಾಣಬಹುದೇ ಹೊರತು, ಅದನ್ನೇ ಪ್ರತ್ಯೇಕವಾಗಿ ಅಧ್ಯಯನ ಮಾಡಿರುವ ಪ್ರಯತ್ನ ಇಲ್ಲ. ಇನ್ನು ವ್ಯಾಜಸ್ತುತಿ ಅಲಂಕಾರದಲ್ಲಿ ಕಂಡುಬರುವ ನಿಂದಾಸ್ತುತಿಗಳ ಕೀರ್ತನೆಗಳ ಸಂಗ್ರಹವೊಂದನ್ನು ಡಾ. ಕೆ. ಗೋಕುಲನಾಥರು ಹೊರತಂದಿರುವರು. ಆ ಸ್ತುತಿಗಳ ವಿಸ್ತೃತ ವಿಮರ್ಶೆಯನ್ನು ಅವರು ಮಾಡಿಲ್ಲ. ಏಕೆಂದರೆ ಅವರ ಗುರಿ ನಿಂದಾಸ್ತುತಿಗಳ ಸಂಗ್ರಹವಷ್ಟೇ ಆಗಿತ್ತು. ರೂಪಕ, ಉಪಮೆ ಮೊದಲಾದ ನಾನಾ ಬಗೆಯ ಅಲಂಕಾರಗಳು ದಾಸ ಕೀರ್ತನೆಗಳಲ್ಲಿ ಕಂಡುಬಂದರೂ "ವ್ಯಾಜನಿಂದಾಸ್ತುತಿಯಂತೂ ಕೀರ್ತನ ರಚನೆಯ ಮೈಗುಣವೇ ಆಗಿದೆ. ಶ್ರೀಪಾದರಾಜರಿಂದ ಹಿಡಿದು ಈಚಿನ ಹುಯಿಲಗೋಳ ನಾರಾಯಣರಾವ್‌ರವರೆಗೂ ಪ್ರಮುಖ ದಾಸರು. ಅದನ್ನು ಕೀರ್ತನೆಯಲ್ಲಿ ತರದೇ ಇಲ್ಲ" [7] ಎಂಬುದಾಗಿ ಶ್ರೀನಿವಾಸ ಹಾವನೂರರು ಹೇಳುವಲ್ಲಿ ಇದರ ಮಹತ್ವ–ವ್ಯಾಪ್ತಿಯನ್ನು ಅರಿಯಬಹುದಾಗಿದೆ. ಆದಕಾರಣ ಇದು ವಿಶೇಷ ಅಧ್ಯಯನದ ವಿಷಯವಾಗಿದೆ.

ಇಂಥ ವಿಶಿಷ್ಟ, ವಿಶಾಲ ವ್ಯಾಪ್ತಿಯ, ವ್ಯಾಜಸ್ತುತಿ ಅಲಂಕಾರ ದಾಸ ಸಾಹಿತ್ಯದ ಕೀರ್ತನೆಗಳಲ್ಲಿ ಎಲ್ಲೆಲ್ಲಿ ಹೇಗೆ ಹೇಗೆ ವಿಶಿಷ್ಟ ರೀತಿಯಲ್ಲಿ ಕಾಣಿಸಿಕೊಂಡಿದೆ. ಇದರಿಂದ ಕಾವ್ಯಶೋಭೆ ಹೇಗೆ ಬೆಳಗಿದೆ. ಈ ಅಲಂಕಾರದ ವೈವಿಧ್ಯ ಇನ್ನಾವುದೇ ಕಾವ್ಯಪ್ರಕಾರದಲ್ಲೂ ಇಷ್ಟು ಉಜ್ವಲವಾಗಿ ಕಾಣಿಸಿಕೊಂಡಿಲ್ಲ ಏಕೆ? ಎಂಬ ವಿಚಾರವಾಗಿ ವಿಶ್ಲೇಷಣೆ ಮಾಡಿ ಈ ಅಧ್ಯಯನಕಾಲದಲ್ಲಿ ವ್ಯಾಜಸ್ತುತಿಯ ಸಮಗ್ರ ಬಳಕೆ ದಾಸ ಸಾಹಿತ್ಯದಲ್ಲಿ ಆಗಿರುವುದರ ಬಗ್ಗೆ ಅಧ್ಯಯನವನ್ನು ಕೈಗೊಳ್ಳಲಾಗಿದೆ.

– – –

ಅಧ್ಯಾಯ ಎರಡು

ಹರಿದಾಸ ಸಾಹಿತ್ಯ ಮತ್ತು ಅಲಂಕಾರಶಾಸ್ತ್ರ

ಅಧ್ಯಾಯ ಒಂದು

ಅಡಿಟಿಪ್ಪಣಿಗಳು

1. ಕನ್ನಡ ಸಾಹಿತ್ಯ ಚರಿತ್ರೆ	ರಂ.ಶ್ರೀ. ಮುಗಳಿ, 1978, ಪು.295, ಉಷಾ ಸಾಹಿತ್ಯ ಮಾಲೆ, ಮೈಸೂರು.
2. ಜಿ. ವರದರಾಜರಾವ್	ಹರಿದಾಸ ಸಾಹಿತ್ಯ ಸಾರ, ಪು.6–7, ಉಷಾ ಸಾಹಿತ್ಯ ಮಾಲೆ, 1987, ಮೈಸೂರು.
3. ಡಾ. ಶ್ರೀನಿವಾಸ ಹಾವನೂರ	ದಾಸ ಸಾಹಿತ್ಯದ ಸಮ್ಮೇಳನ–5ರ ಅಧ್ಯಕ್ಷ ಭಾಷಣ, ಪು.4, ಹಂಪಿ ಕನ್ನಡ ವಿಶ್ವವಿದ್ಯಾಲಯ, 2008.
4. ಡಾ. ಶ್ರೀನಿವಾಸ ಹಾವನೂರ	ಕೀರ್ತನ ವಿಷಯ ದರ್ಶನ, ಶ್ರೀ ನರಹರಿತೀರ್ಥರ ಸಂಶೋಧನ ಕೇಂದ್ರ, ರಾಯಚೂರು, 2008.
5. ಟಿ.ಕೆ. ವೇಣುಗೋಪಾಲದಾಸರು	'ಮಾಧ್ವನಿಘಂಟು' ರಚಿಸಿ ಪ್ರಕಟಿಸಿದ್ದಾರೆ. ಅದರಲ್ಲಿ ಮಾಧ್ವಸಿದ್ಧಾಂತ ಮತ್ತು ಪೌರಾಣಿಕ ಉಲ್ಲೇಖಗಳಷ್ಟೇ ಇದೆ.
6. ಅನಾಜಿ–ಹಾವನೂರು ನಡೆಸಿದ ಸಂವಾದದ ಟಿಪ್ಪಣಿಗಳಿಂದ	ಅನಾಜಿ ಸಂಗ್ರಹ, (ಅಪ್ರಕಟಿತ)
6. ಶ್ರೀನಿವಾಸ ಹಾವನೂರ	ದಾಸಸಾಹಿತ್ಯ ಸಮ್ಮೇಳನ–5ರ ಅಧ್ಯಕ್ಷ ಭಾಷಣ, ಪು.4, ಹಂಪಿ ಕನ್ನಡ ವಿಶ್ವವಿದ್ಯಾಲಯ, 2008.

– – –

ಅಧ್ಯಾಯ ಎರಡು

ಹರಿದಾಸ ಸಾಹಿತ್ಯ ಮತ್ತು ಅಲಂಕಾರಶಾಸ್ತ್ರ

ಕನ್ನಡ ಸಾಹಿತ್ಯವನ್ನು ಭಾಷಾದೃಷ್ಟಿಯಿಂದ ಹಳಗನ್ನಡ ಕಾಲ, ನಡುಗನ್ನಡ ಕಾಲ, ಹೊಸಗನ್ನಡ ಕಾಲ ಎಂದು ಮುಖ್ಯವಾಗಿ ಮೂರು ಘಟ್ಟಗಳನ್ನಾಗಿ ವರ್ಗೀಕರಿಸಬಹುದು. ಸಾಹಿತ್ಯದ ದೃಷ್ಟಿಯಿಂದ ಚಂಪೂಸಾಹಿತ್ಯಯುಗ, ವಚನಸಾಹಿತ್ಯಯುಗ, ದಾಸಸಾಹಿತ್ಯಯುಗ, ಷಟ್ಪದಿಕಾವ್ಯಯುಗ ಎಂದು ನಾಲ್ಕು ಘಟ್ಟಗಳಾಗಿ ವಿಭಾಗಿಸಬಹುದು.

ಧರ್ಮದ ಹಿನ್ನೆಲೆಯಲ್ಲಿ ಜೈನಧರ್ಮಯುಗ, ಶೈವಧರ್ಮಯುಗ, ವೈಷ್ಣವಧರ್ಮಯುಗ ಎಂದು ಪರಿಗಣಿಸುವುದುಂಟು. ಹೀಗೆ ಅಧ್ಯಯನ ದೃಷ್ಟಿಯಿಂದ ವರ್ಗೀಕರಿಸಿ ಗಮನಿಸಿದಾಗ ದಾಸಸಾಹಿತ್ಯವು ನಡುಗನ್ನಡಕಾಲದ ದಾಸಸಾಹಿತ್ಯಯುಗದ ವೈಷ್ಣವಧರ್ಮದ ಸಾಹಿತ್ಯವಾಗಿದೆ ಎನ್ನಬಹುದು. ಈ ಮಧ್ವಸಿದ್ಧಾಂತದ ಹಿನ್ನೆಲೆಯಲ್ಲಿ ಹೇಳುವುದಾದರೆ ದಾಸಸಾಹಿತ್ಯವು ಯತಿಗಳಿಂದಲೂ ಹರಿದಾಸರಿಂದಲೂ ಮೊದಲ ಘಟ್ಟದಲ್ಲಿ ವಿರಾಜಿಸುವುದನ್ನು ಕಾಣಬಹುದು.

ಆರ್.ಎಸ್.ಪಂಚಮುಖಿ ಅವರು ನಾಲ್ಕು ಘಟ್ಟಗಳನ್ನಾಗಿ ವರ್ಗೀಕರಿಸಿ ದಾಸಸಾಹಿತ್ಯದ ಇತಿಹಾಸವನ್ನು ವಿವೇಚಿಸಿದ್ದಾರೆ [1]. ಆದರೆ ಕೆ.ಜಿ.ಶಾಸ್ತ್ರಿ ಅವರು ನರಹರಿತೀರ್ಥರಿಂದ ಪುರಂದರ ಕನಕರವರೆಗೆ ಒಂದು ಘಟ್ಟ, ವಿಜಯದಾಸರಿಂದ ಅನಂತರ ರಚಿತವಾದ ಸಾಹಿತ್ಯ ಇನ್ನೊಂದು ಘಟ್ಟ ಎಂದಿದ್ದಾರೆ. 19, 20ನೇ ಶತಮಾನ ಹರಿದಾಸಸಾಹಿತ್ಯವನ್ನು ಮೂರನೇ ಘಟ್ಟವಾಗಿ ಭಾವಿಸಬಹುದು.

ಈ ಎಲ್ಲ ಘಟ್ಟಗಳಲ್ಲಿ ಕಂಡುಬರುವ ಹರಿದಾಸರಲ್ಲಿ ದಾಸಕೂಟದವರು ವ್ಯಾಸಕೂಟದವರು ಇದ್ದಾರೆ. ಇವರ ಕೃತಿಗಳ ರಚನೆಯಲ್ಲಿ ಕೀರ್ತನೆಗಳಿವೆ, ಕಾವ್ಯಗಳಿವೆ. ಉದಾ: ವಾದಿರಾಜರು, ವ್ಯಾಸಕೂಟದಲ್ಲಿ ಕೀರ್ತನಕಾರರೂ ಕವಿಗಳೂ ಆಗಿದ್ದರೆ ಕನಕದಾಸರು ದಾಸಕೂಟದಲ್ಲಿ ಕವಿಗಳೈ ಕೀರ್ತನಕಾರರೂ ಆಗಿದ್ದಾರೆ.

ಶ್ರೀಪಾದರಾಜರಿಂದ ಗುರುಗೋವಿಂದವಿಠಲರವರೆಗೆ ದಾಸಸಾಹಿತ್ಯವನ್ನು ಕುರಿತು ವಿವೇಚಿಸಿದವರೆಲ್ಲ ವಿಶೇಷವಾಗಿ ಮಧ್ವಸಿದ್ಧಾಂತ, ಕೀರ್ತನೆ, ಸುಳಾದಿ,

ಉಗಾಭೋಗಗಳಲ್ಲಿ ಹೇಗೆ ನಿರೂಪಿತವಾಗಿವೆ, ರಾಮಾಯಣ, ಭಾರತ, ಭಾಗವತ, ಪುರಾಣ, ಕಾವ್ಯ, ಇತಿಹಾಸಗಳು ಹೇಗೆ ಕಾಣಿಸಿಕೊಂಡಿವೆ ಎಂಬುದನ್ನೇ ವಿಶೇಷವಾಗಿ ಚರ್ಚಿಸಿದ್ದಾರೆ. ಕೆಲವು ಮಂದಿ ವಿದ್ವಾಂಸರು ಗಾನಕಲೆ ಕರ್ನಾಟಕ ಸಂಗೀತವನ್ನು ದಾಸಸಾಹಿತ್ಯ ಹೇಗೆ ತನ್ನ ಭಕ್ತಿಮಾಧ್ಯಮವಾಗಿ ಬಳಸಿಕೊಂಡಿತು ಎಂಬುದನ್ನು ವಿವೇಚಿಸಿದ್ದಾರೆ. ಶಾಸ್ತ್ರೀಯ ಸಂಗೀತಶಾಸ್ತ್ರದ ಹಿನ್ನೆಲೆಯಲ್ಲಿ ಪುರಂದರರ ಕೊಡುಗೆಯನ್ನು ಅವರು 'ಕರ್ನಾಟಕ ಸಂಗೀತ ಪಿತಾಮಹ'ರಾಗಿರುವುದನ್ನು ವಿವರಿಸಿದ್ದಾರೆ. ಕರ್ನಾಟಕ ಸಂಗೀತಕ್ಕೆ ಹರಿದಾಸರ ಕೊಡುಗೆಯನ್ನು ಕುರಿತು ಸಾಕಷ್ಟು ಮಂದಿ ಚರ್ಚಿಸಿದ್ದಾರೆ. ಕೀರ್ತನೆಗಳು ಎಂದರೆ ಸಂಗೀತಮಾಧ್ಯಮ ಒಳಗೊಂಡಿದ್ದು, ಆಡಿದ್ದು ವಚನ, ಹಾಡಿದ್ದು ಕೀರ್ತನೆ. ಶರಣರು ಆಡಿದರು; ದಾಸರು ಹಾಡಿದರು.

ಗಾಯನ ಎಂದ ಮೇಲೆ ನರ್ತನ ಇದ್ದದ್ದೇ. ಹಾಗಾಗಿ ನೃತ್ಯಗೀತಗಳು ಶ್ರೀಪಾದರಾಜರಿಂದ ಎಲ್ಲಾ ದಾಸರಲ್ಲಿ ಕಾಣಬಹುದು. ಈ ದೃಷ್ಟಿಯಿಂದ ಅಂದರೆ ನರ್ತನಕ್ಕೆ ಕೀರ್ತನೆಗಳು ಅಳವಟ್ಟಿದ್ದರಿಂದ ದಾಸಸಾಹಿತ್ಯ ಗಾಯನದಿಂದ ಶ್ರವ್ಯಕಾವ್ಯವೂ ನರ್ತನದಿಂದ ದೃಶ್ಯಕಾವ್ಯವೂ ಆಗಿದೆ ಎಂದು ಹೇಳುತ್ತಾರೆ.

ಈ ಬಗ್ಗೆ ಆರ್.ಎಸ್.ಪಂಚಮುಖಿ ಅವರು ಕೀರ್ತನಸಾಹಿತ್ಯ ಹೇಗೆ ಲಲಿತಕಲೆಗಳ ಮಾಧ್ಯಮವಾಗಿತ್ತು ಎಂಬುದನ್ನು ಅರ್ಥವತ್ತಾಗಿ ವಿವರಿಸಿರುವುದನ್ನು ಗಮನಿಸುವುದು ಅಗತ್ಯವಾಗಿದೆ.

ಕಾಲಾನಂತರದಲ್ಲಿ ಎಲ್ಲ ಲಲಿತಕಲೆಗಳೂ ಕೇವಲ ಉದರಂಭರಣದ ವಿದ್ಯೆಗಳಾಗಿ ಪರಿಣಮಿಸಿದವು. ಸಂಗೀತ ಸಾಹಿತ್ಯ ಅಭಿನಯ ಮತ್ತು ಮೂರ್ತಿ–ವಾಸ್ತುಶಿಲ್ಪಗಳು ಚಿತ್ರಕಲೆಗಳನ್ನು ದೇವರಿಗೆ ಸಮರ್ಪಿಸುವ ಉದಾತ್ತ ಸಂಪ್ರದಾಯವು ಅಡಗಿ ಅವೆಲ್ಲವೂ ಲೌಕಿಕ ವ್ಯಾಪಾರಗಳಾದವು. ಮನುಷ್ಯರ ಜೀವನದಲ್ಲಿ ನಿಜವಾದ ಭಕ್ತಿರಸದ ಪ್ರವಾಹ ಬತ್ತಿದಂತಾಯಿತು. ಹೀಗೆ ಮೃತಪ್ರಾಯವಾಗಿ ವ್ಯಭಿಚರಿತವೃತ್ತಿಯಿಂದ ಬಾಳುತ್ತಿದ್ದ ಲಲಿತಕಲೆಗಳನ್ನು ಅಂತರ್ಯಾಮಿಯಾಗಿದ್ದ ಪರಮಾತ್ಮನ ಕಡೆಗೆ ತಿರುಗಿಸಿದ್ದು ಕರ್ನಾಟಕದ ಭಕ್ತಾಗ್ರಣಿಗಳಾದ ಹರಿದಾಸರ ಹಿರಿಮೆ. ಹರಿದಾಸರು ಸಂಗೀತ ಸಾಹಿತ್ಯಗಳಿಗೆ ಆ ಮೂಲಕ ಶ್ರೀಹರಿಯ ನಾಮಕ್ಕೆ ಕೊಟ್ಟ ಪ್ರಾಶಸ್ತ್ಯವನ್ನು ಈ ಕೀರ್ತನೆಗಳಲ್ಲಿ ಕಾಣಬಹುದು:

ಕೇಳನೋ ಹರಿ ತಾಳನೋ
ತಾಳಮೇಳಗಳಿದ್ದು ಪ್ರೇಮವಲ್ಲದ ಗಾನ
ತಾಳಬೇಕು ತಕ್ಕ ಮೇಳಬೇಕು
ಶಾಂತ ವೇಳೆ ಬೇಕು ಗಾನಕೇಳಬೇಕೆಂದವರಿಗೆ

ಹೀಗೆ ತಾಳಮೇಳಗಳಿಂದ ಹರಿನಾಮ ಪಾಡುವಾಗ ಹಾಡಿ ಕುಣಿಯುವ-ಮೈಮರೆತು ಕುಣಿದು ಆನಂದಪಡುವ ಭಕ್ತರ ಕೂಟಗಳು ಉದಯವಾದವು. ನರ್ತನಗೀತಗಳಿಂದ ಭಕ್ತರು ನರ್ತಿಸತೊಡಗಿದರು. ಪುರಂದರದಾಸ ಕೀರ್ತನೆಯಲ್ಲಿ ಇದಕ್ಕೆ ನಿದರ್ಶನ ಕಾಣಬಹುದು:

ಅಂಗನೆಯರೆಲ್ಲ ನೆರದು ಚಪ್ಪಾಳೆಯಿಕ್ಕುತ ದಿವ್ಯ
ಮಂಗಳನಾಮವ ಪಾಡಿ ರಂಗನ ಕುಣಿಸುವರು

ಹೀಗೆ ನೃತ್ಯಗೀತ ವಾದ್ಯಗಳಿಂದ ಕೀರ್ತನಮಾಧ್ಯಮ ಕಲಾಮಾಧ್ಯಮವೂ ಭಕ್ತಿ-ಜ್ಞಾನ-ವೈರಾಗ್ಯಗಳಿಂದ ಧಾರ್ಮಿಕ ಮಾಧ್ಯಮವೂ ಆಯಿತು.

ಹರಿದಾಸಕೀರ್ತನೆಯೆಂದರೆ ಸಾಹಿತ್ಯ-ಸಂಗೀತಗಳ ಸಮರಸದ ಮಾಧ್ಯಮ. ಇದರಲ್ಲಿ ಗಾಯನ ಮಾಧ್ಯಮ ಹೇಗೆ ಲಲಿತಕಲಾಸಾಧನವಾದುದು ಭಕ್ತಿಮಾಧ್ಯಮವಾಯಿತೆಂದು ನೋಡಿದೆವು. ಇನ್ನು ಸಾಹಿತ್ಯವನ್ನು ತೆಗೆದುಕೊಂಡರೆ ಅದರಲ್ಲಿ ಹರಿದಾಸರು ಅಪ್ರತಿಮ ಪ್ರತಿಭೆ ತೋರಿದ್ದಾರೆ.

ದಾಸರ ಕೀರ್ತನೆಗಳಲ್ಲಿ ಸಾಹಿತ್ಯ ದೃಷ್ಟಿಯಿಂದ ಜತೆಗೆ ಅಲಂಕಾರ, ಛಂದಸ್ಸು, ವ್ಯಾಕರಣ, ಭಾಷೆ, ಶೈಲಿದೃಷ್ಟಿಯಿಂದ ಗಮನಿಸಿದರೆ ಏನೇನಿದೆ ಎನ್ನುವುದಕ್ಕಿಂತ ಏನು ತಾನೆ ಇಲ್ಲ ಎಂದು ಕೇಳಬೇಕಾಗಿದೆ.

ದಾಸ ಕೀರ್ತನೆಗಳಲ್ಲಿ ಕಂಡುಬಂದ ಛಂದೋವೈವಿಧ್ಯಗಳನ್ನು ಈಗಾಗಲೇ ವಿದ್ವಾಂಸರು ಗುರುತಿಸಿ ವಿಶ್ಲೇಷಿಸಿದ್ದಾರೆ. ತಮ್ಮ ಗೇಯತೆಯನ್ನು ಕಳೆದುಕೊಳ್ಳದ ತ್ರಿಪದಿ, ಷಟ್ಪದಿಗಳನ್ನು ನಮ್ಮ ಹರಿದಾಸರು ಧಾರಾಳವಾಗಿ ಬಳಸಿಕೊಂಡಿದ್ದಾರೆ ಎಂದಿದ್ದಾರೆ[2] . ಇದಲ್ಲದೆ ರಗಳೆ, ಸುವ್ವಾಲಿ, ಗುಂಡಕ್ರಿಯೆ, ದಂಡಕ ಮೊದಲಾದ ಛಂದೋಬಂಧಗಳನ್ನು ಕೀರ್ತನಸಾಹಿತ್ಯದಲ್ಲಿ ಬಳಸಿರುವುದನ್ನು ಕಾಣಬಹುದು. ರಗಳೆಗೆ ಶ್ರೀಪಾದರಾಜರ ಭ್ರಮರಗೀತ,ವನ್ನು ದಂಡಕಕ್ಕೆ ಶ್ರೀಪಾದರಾಜರ ನೃಸಿಂಹ ಪ್ರಾದುರ್ಭಾವ ದಂಡಕ ಉದಾಹರಿಸಬಹುದು.

ಇನ್ನು ಜಾನಪದ ರಚನೆಗಳನ್ನು ಹರಿದಾಸರು ಬಳಸಿದ್ದಾರೆ. ಶೋಭಾನೆ, ಸುವ್ವಿ, ಉರುಠಾಣಿ, ಕೋಲುಪದ, ಲಾವಣಿಪದ, ಜೋಗುಳಪದ ಇತ್ಯಾದಿಗಳನ್ನು ಬಳಸಿದ ಹರಿದಾಸರು ಜನತಾಕವಿಗಳು ಆಗಿದ್ದಾರೆ. ಇದಕ್ಕೆ ನಿದರ್ಶನವಾಗಿ "ದಾಸರು ದೇಸೀ ಛಂದಸ್ಸನ್ನೇ ತಮ್ಮ ಕೃತಿಗಳಿಗೆ ಬಳಸಿಕೊಂಡರಲ್ಲದೆ ದೇಸಿಧಾಟಿಗಳನ್ನು, ಮಟ್ಟುಗಳನ್ನು

ತಮ್ಮ ರಚನೆಗಳಲ್ಲಿ ಬಳಸಿಕೊಂಡರು. ಇದರಿಂದಾಗಿ ಕೆಲವು ಜನಪದಧಾಟಿಗಳು ಇವರ ರಚನೆಗಳಲ್ಲಿ ನೇರವಾಗಿ ಬಳಕೆಗೊಂಡವು. ಕೆಲವು ಕೃತಿಗಳಲ್ಲಿ ಜನಪದ ವಸ್ತುವನ್ನು ಸಂವೇದನೆಯನ್ನು ಸಂಪ್ರದಾಯಗಳನ್ನು ಇವರು ದಾಖಲಿಸಿದರು' ಎಂದು ಹೇಳಿ ಡಾ। ಆರ್. ಸುನಂದಮ್ಮ ಅವರು ತಮ್ಮ ಮಹಾಪ್ರಬಂಧದಲ್ಲಿ ಮಾಡಿರುವ ವಿಶ್ಲೇಷಣೆಯನ್ನು ಗಮನಿಸಬಹುದು[3]. ಇನ್ನು ಗೇಯತೆದೃಷ್ಟಿಯಿಂದ ಗಾನಬಂಧಗಳಾದ ಗೀತ, ಠಾಯಿ, ಸುಳಾದಿ, ಉಗಾಭೋಗ, ಪದ್ಯ, ಪದಪ್ರಬಂಧಗಳನ್ನು ಹರಿದಾಸರು ಬಳಸಿದ್ದಾರೆ ಎಂಬುದಕ್ಕೆ ಪ್ರಸನ್ನ ವೆಂಕಟದಾಸರ ಈ ನುಡಿಯೇ ಸಾಕ್ಷಿ ಆಗಿದೆ.

ಗೀತ ಠಾಯಿ ಸುಳಾದ್ಯುಗಾಭೋಗಾ ಪದ್ಯ ಪದ
ವ್ರಾತ ಪ್ರಬಂಧ ರಚಿಸಿ ವಿಠಲನ
ಪ್ರೀತಿಬಡಿಸಿ ಪ್ರತ್ಯಕ್ಷ ಕಂಡು ನಲಿದ ವೈಷ್ಣವಾಗ್ರ
ನಾಥ ಪ್ರಸನ್ವೆಂಕಟಕೃಷ್ಣ ಪ್ರಿಯನ

ಇನ್ನು ಕಾವ್ಯ ಮೀಮಾಂಸೆಯ ದೃಷ್ಟಿಯಿಂದ ನವರಸಗಳನ್ನು ಕುರಿತು ಹಾಗೂ ನವವಿಧ ಭಕ್ತಿಗಳನ್ನು ಕುರಿತು ವಿದ್ವಾಂಸರು ಕೀರ್ತನೆಗಳನ್ನು ವಿಶ್ಲೇಷಿಸಿದ್ದಾರೆ[4].

ನವರಸಗಳನ್ನು ಕುರಿತು ಬೇಲೂರು ಕೇಶವದಾಸರು ಹೇಳುವ ಮಾತು ಗಮನಾರ್ಹವಾಗಿದೆ: ಭಕ್ತಿಸುಧೆಯು ಜೀವನ್ಮುಕ್ತಿಗೆ ಶೀಘ್ರ ಫಲಕಾರಿಯಾದ ಮಾರ್ಗವೆಂದು ಶಾಸ್ತ್ರಗಳು ಸಾರುತ್ತಲಿವೆ. ಜೀವನ್ಮುಕ್ತನ ಪರಮ ಆನಂದಾನುಭವವನ್ನು ಶಾಸ್ತ್ರಕಾರರು ರಸವೆಂದು ಕರೆಯುತ್ತಾರೆ. ಇಂತಹ ರಸಭಾವಗಳ ವೈವಿಧ್ಯವನ್ನು ಭರತಮುನಿಯು ಶೃಂಗಾರ, ವೀರ, ರೌದ್ರ, ಭೀಭತ್ಸ, ಹಾಸ್ಯ ಅದ್ಭುತ, ಭಯಾನಕ, ಕರುಣಗಳೆಂದು ಎಂಟು ಪ್ರಕಾರಗಳನ್ನು ಏರ್ಪಡಿಸಿದನು. ಅಗ್ನಿಪುರಾಣದಲ್ಲಿ ಉಕ್ತವಾಗಿರುವ ಶಾಂತರಸವೂ ಸೇರಿ ನವರಸಗಳಾದವು. ಚೈತನ್ಯಪಂಥಿಗಳು ಅಡ್ಡಗಟ್ಟಿ ಶಾಂತಿ, ಪ್ರೀತಿ, ಸಖ್ಯ, ವಾತ್ಸಲ್ಯ, ಮಧುರರಸಗಳೆಂಬ ಪಂಚಸಾಧನೆಗಳನ್ನು ಏರ್ಪಡಿಸಿಕೊಂಡರು"[5]. ಇದನ್ನು ಭಕ್ತಿರಸವೆಂದು ಕರೆದರು. ಭಕ್ತರಸವನ್ನು ಕುರಿತು. ಮಧುಸೂದನ ಸರಸ್ವತಿ ಅವರು ತಮ್ಮ ಭಗವದ್ಭಕ್ತಿ ರಸಾಯನದಲ್ಲಿ ಭಕ್ತಿ ಲಕ್ಷಣವನ್ನು ವಿವರಿಸಿದ್ದಾರೆ. "ಚಿತ್ತವು ಗೋವಿಂದನ ಗುಣಗಳಿಂದ ದ್ರವರೂಪವನ್ನು ಹೊಂದಿ ಅವನ ಆಕಾರವನ್ನು ಪ್ರತಿಬಿಂಬಿಸಿದರೆ ಆ ಚಿತ್ತದ್ರವಣವು ಭಕ್ತಿರಸವಾಗುವುದು. ಚಿತ್ತದ್ರವಣವು ಕಾಮಾದಿಕಾರಣಗಳಿಂದ ಉಂಟಾದರೆ ಕಾಮಭಕ್ತಿ, ವೀರಭಕ್ತಿ, ಶೋಕಭಕ್ತಿ, ಇತ್ಯಾದಿ ಪ್ರಭೇದಗಳು ಉಂಟಾಗುತ್ತದೆ. ಆದ್ದರಿಂದ ಭಕ್ತಿಯೇ ಮುಖ್ಯರಸವೆಂದು ತಿಳಿಯಬಹುದು[6].

ಇಂಥ ಭಕ್ತಿರಸದಲ್ಲಿ ಆಲಂಬನಭಾವ, ಉದ್ದೀಪನಭಾವ, ವ್ಯಭಿಚಾರೀಭಾವ, ಅನುಭಾವ ಮೊದಲಾದ ಸಾಮಗ್ರಿಗಳು ಕಾವ್ಯದಲ್ಲಿಯೂ, ಸಹೃದಯ ಕವಿಯಲ್ಲಿಯೂ ಅಥವಾ ವಾಚಕನಲ್ಲಿಯೂ ಇರಬೇಕಾಗುತ್ತದೆ. ಆ ಪ್ರಕಾರ ಭಕ್ತಿರಸ ವಿವೇಚನೆಯಲ್ಲಿ ಇರಬೇಕಾದ ಕಾವ್ಯಗತ ಸಾಮಗ್ರಿಗಳನ್ನು ಪಂಚಮುಖಿಯವರು ತಮ್ಮ ಹರಿದಾಸ ಸಾಹಿತ್ಯದಲ್ಲಿ ವಿವರಿಸಿದ್ದಾರೆ[7]. ತೀನಂಶ್ರೀ ಅವರು ತಮ್ಮ ಭಾರತೀಯ ಕಾವ್ಯಮಿಮಾಂಸೆಯಲ್ಲಿ ಭಕ್ತಿರಸದ ಬಗ್ಗೆ ಹೇಳಿರುವ ಮಾತುಗಳು ಉಲ್ಲೇಖನಾರ್ಹವಾಗಿವೆ. "ವಿಚಾರಾರ್ಹವಾದ ಇನ್ನೊಂದು ರಸ ಭಕ್ತಿ. ಭಾರತೀಯ ಮನೋವೃತ್ತಿಯನ್ನು ಸಾಹಿತ್ಯವನ್ನೂ ನೋಡಿದರಂತೂ ಇದಕ್ಕೆ ಪ್ರತ್ಯೇಕ ಸ್ಥಾನವೊಂದು ಅವಶ್ಯವೆನಿಸುತ್ತದೆ. ಪರಮಾತ್ಮನಲ್ಲಿ ಆರಾಧ್ಯದೈವದಲ್ಲಿ ಪರಮಪ್ರೇಮರೂಪವಾದ ಭಾವವೇ ಇದರ ಆಧಾರ[8]. ಆದರೆ ಇದರಲ್ಲೂ ವಿಷಯಸುಖದ ಸಂಪರ್ಕವಿಲ್ಲ. ಇಷ್ಟದೈವವನ್ನು ಕುರಿತು ಭಕ್ತನು ಮಗುವಿನಂತೆ, ತಾಯಿಯಂತೆ, ದಾಸನಂತೆ, ಮಿತ್ರನಂತೆ, ಪ್ರಿಯೆಯಂತೆ ಬಗೆಬಗೆಯ ಮನೋವೃತ್ತಿಯನ್ನು ತಾಳಬಹುದು. ಹೀಗೆ ಭಕ್ತಿಯದು ಸಂಕೀರ್ಣ ಸ್ವಭಾವ[9].

ಹೀಗೆ ಹರಿದಾಸ ಸಾಹಿತ್ಯದಲ್ಲಿ ನವರಸಗಳನ್ನು ನವವಿಧಭಕ್ತಿಗಳನ್ನು ಕುರಿತು ಮೀಮಾಂಸಕಾರರು ಸಾಕಷ್ಟು ವಿವೇಚಿಸಿದ್ದಾರೆ. ಇದಕ್ಕೆ ಕೀರ್ತನೆಗಳನ್ನು ಉದಾಹರಣೆಗಳಾಗಿ ಕೊಟ್ಟಿದ್ದಾರೆ ಆ ಬಗ್ಗೆ ವಿಶ್ಲೇಷಿಸಿದ್ದಾರೆ[10]. ಉದಾಹರಣೆಗೆ ಈ ಕೀರ್ತನೆಗಳನ್ನು ಗಮನಿಸಬಹುದು:

ಶೃಂಗಾರರಸ – *ನವನಾರಿಕೇರಿಯೊಳ್ ವಾರೆನೋಟದಿಂದ*

ವೀರರಸ – *ಶ್ರೀರಾಮನದೂತನು / ಕೇಳೈ ನಾನು / ರಘುರಾಮನ ದೂತನು*

ಅದ್ಭುತರಸ – *ಹನುಮಂತನುದಿಸಿದನು ಭೂತಳದಲ್ಲಿ*

ಹಾಸ್ಯರಸ – *ನೀನೇನೇ ರಾವಣನೆಂಬಾತನು*

ರೌದ್ರರಸ – *ಜಯ ಜಯ ಭೀಮಸೇನ*

ಶಾಂತರಸ – *ಕೃಷ್ಣಮೂರ್ತಿ ಕಣ್ಣಾಮುಂದೆ ನಿಂತಿದ್ದಂತಿದೆ*

ಇನ್ನು ಬೀಭತ್ಸ, ಭಯಾನಕ ಮೊದಲಾದ ರಸಗಳು ದಾಸಸಾಹಿತ್ಯಕ್ಕೆ ಒಗ್ಗುವುದಿಲ್ಲ ಎಂಬುದನ್ನು ಗಮನಿಸಬೇಕು.

ಇನ್ನು ಭಕ್ತಿರಸಕ್ಕೆ ನಿದರ್ಶನಗಳನ್ನು ಕುರಿತು ಸಾಕಷ್ಟು ವಿದ್ವಾಂಸರು ಚರ್ಚಿಸಿದ್ದಾರೆ[11].

ಭಕ್ತಿರಸದ ಪ್ರಕಾರದಲ್ಲಿ ಕಂಡುಬರುವ ಪಂಚಲಕ್ಷಣಗಳು ಎಂದರೆ ಶಾಂತ-ದಾಸ್ಯ-ಸಖ್ಯ-ವಾತ್ಸಲ್ಯ-ಮಧುರ ಎಂಬ ಭಾವಗಳನ್ನು ಕಂಡಾಗ ಹರಿದಾಸರು ಭಗವಂತನನ್ನು ನವವಿಧ ಭಕ್ತಿಗಳಲ್ಲಿ ನವರಸಪೂರ್ಣವಾಗಿ ವರ್ಣಿಸಿದ್ದಾರೆ; ಆರಾಧಿಸಿದ್ದಾರೆ ಎಂಬುದಕ್ಕಿಂತ ಪಂಚಪ್ರಕಾರಗಳಲ್ಲಿ ಭಕ್ತಿರಸದಿಂದ ಆರಾಧಿಸಿದ್ದಾರೆ ಎಂಬುದು ಹೆಚ್ಚು ಸಮಂಜಸವಾಗುತ್ತದೆ ಮತ್ತು ಈ ಬಗೆಯ ಆರಾಧನಾ ವೈವಿಧ್ಯದಲ್ಲಿ ದಾಸರ ಕೀರ್ತನೆಗಳನ್ನು ಅರ್ಥಪೂರ್ಣವಾಗಿ ವಿಶ್ಲೇಷಿಸಬಹುದು. ನಿಂದಾಸ್ತುತಿ ವಿಶ್ಲೇಷಣೆ, ನಿರೂಪಣೆಗೆ ಈ ಪಂಚವಿಧ ಆರಾಧನಾ ವೈವಿಧ್ಯ ಹೆಚ್ಚು ಸೂಕ್ತವಾಗಿದೆ.

ಇವುಗಳನ್ನು ವಿಸ್ತಾರವಾಗಿ ಜಿ. ವರದರಾಜರಾವ್ ಅವರು ತಮ್ಮ ಹರಿದಾಸ ಸಾಹಿತ್ಯ ಸಾರಗ್ರಂಥದಲ್ಲಿ ವಿವೇಚಿಸಿದ್ದಾರೆ[12]. ಅದನ್ನು ಸಂಕ್ಷಿಪ್ತವಾಗಿ ಹೀಗೆ ನಿರೂಪಿಸಬಹುದು:

(1) ಶಾಂತಭಾವ

ಭಕ್ತ ಮತ್ತು ಭಗವಂತನ ಬಾಂಧವ್ಯಕ್ಕಿಂತಲೂ ದೈವಭಕ್ತನಾದವನು ಪರಮಾತ್ಮನ ಅದ್ಭುತಲೀಲೆಗಳನ್ನು ಕಂಡು ಆಶ್ಚರ್ಯಪಡುವದರಲ್ಲಿ ಅಡಗಿದೆ. ಉದಾ:

ಎಂಥಾದ್ದೊ ಹರಿಯ ಕರುಣ
ಎಂಥಾದ್ದೊ ಹರಿಯ ಮಹಿಮೆ . . . (ವ್ಯಾಸರಾಯರ ಕೀರ್ತನೆ)

(2) ದಾಸ್ಯಭಾವ

ಭಕ್ತ-ಭಗವಂತನ ಸಂಬಂಧಗಳನ್ನು ಸ್ವಾಮಿ-ಸೇವಕರಲ್ಲಿ ಕಂಡಾಗ ದಾಸ್ಯಭಾವ ಎನಿಸುತ್ತದೆ. ಉದಾ:

ಸೇವಕತನದ ರುಚಿಯೇನಳಿದ್ಯೊ . . . (ಪುರಂದರದಾಸ ಕೀರ್ತನೆ)

(3) ಸಖ್ಯಭಾವ

ಸಖ್ಯಭಾವ ಭಗವಂತ-ಭಕ್ತರ ನಡುವೆ ಸ್ನೇಹವನ್ನು ಚಿತ್ರಿಸುತ್ತದೆ. ಇದರ ಅಭಿವ್ಯಕ್ತಿಯಲ್ಲಿ ನಿಂದಾಸ್ತುತಿಗಳು ಪ್ರಧಾನಪಾತ್ರ ವಹಿಸುತ್ತವೆ. ಹರಿದಾಸರ ಕೀರ್ತನೆಗಳಲ್ಲಿ ಸಖ್ಯಭಾವ ಕೀರ್ತನೆಗಳಷ್ಟು ಪ್ರಭಾವಶಾಲಿ ಕೀರ್ತನೆಗಳನ್ನು ಉಳಿದೆಡೆ ಕಾಣುವುದು ಅಪರೂಪ ಎನ್ನಬಹುದು. ದಶಾವತಾರ ವರ್ಣನೆಗಳಲ್ಲಂತೂ ವಿಶೇಷವಾಗಿ ಕಾಣಿಸುತ್ತದೆ. ಉದಾ:

ಹ್ಯಾಂಗೆ ಕೊಟ್ಟನು ಹೆಣ್ಣ ಸಾಗರನು ಈ ವರೆಗೆ
ಶೃಂಗಾರಪುರುಷನು ಬಹುಮಂದಿಯಿರಲು . . . (ವಾದಿರಾಜರ ಕೀರ್ತನೆ)

(4) ವಾತ್ಸಲ್ಯಭಾವ

ತಾಯಿಯಾದವಳು ತನ್ನ ಮಗುವಿನಲ್ಲಿ ತೋರುವ ಅಕ್ಕರೆಯ ಅಭಿಮಾನಗಳನ್ನೆ ವಾತ್ಸಲ್ಯಭಾವ ಎನಿಸುವುದು. ಕೃಷ್ಣನ ಬಾಲಲೀಲೆಗಳು ಇದಕ್ಕೆ ಸೊಗಸಾದ ನಿದರ್ಶನ.

ಯತ್ತೋದೆಯಮ್ಮ ನಂಗನ್ನೆತ್ತಿಕೋ ಅಮ್ಮ
ವತ್ತಿ ಬಲು ಅತ್ತು ಬಂದೀನಿ ನಾ ಇತ್ತೇ ಅಮ್ಮ ತಿಂದೇನೇ . . .
(ಪ್ರಸನ್ನವೆಂಕಟದಾಸರ ಕೀರ್ತನೆ)

(5) ಮಧುರಭಾವ

ಇದನ್ನು ಕಾಂತ್ಯಾಸಕ್ತಿ ಎಂದೂ ಕರೆಯುತ್ತಾರೆ. ಭಗವಂತನ ಪ್ರೇಯಸಿ ತಾನೆಂದು ಭಾವಿಸಿ ಆತನನ್ನು ಆರಾಧಿಸಿ ಅವನ ಅನುಗ್ರಹಕ್ಕೆ ಪಾತ್ರವಾಗಲು ಯತ್ನಿಸುವ ಸತಿ–ಪತಿ ಭಾವವೇ ಮಧುರಭಾವ. ಶ್ರೀಪಾದರಾಜ ಭ್ರಮರಗೀತ, ವೇಣುಗೀತ, ಗೋಪಿಗೀತ ಮೊದಲಾದವು ಇದಕ್ಕೆ ನಿದರ್ಶನ. ಉದಾ:

ಒಲ್ಲೆನವ್ವಾ ಲಕುಮಿಯಲ್ಲಿ ಬಾರದಿದ್ದರೆ
ತಾನು ಹೊರೆಯನೊಲ್ಲೆನವ್ವ . . . (ಪುರಂದರದಾಸರ ಕೀರ್ತನೆ)

ಹರಿದಾಸರ ಕೀರ್ತನೆಗಳಿಗೆ ಅದರದೇ ವ್ಯಾಕರಣವಿದೆ. ಸಂಧಿ ಸಮಾಸಗಳಲ್ಲಿ ಕಾರಕವಿಭಕ್ತಿಪಲ್ಲಟಗಳಲ್ಲಿ ವಿಜಾತೀಯ ವ್ಯಾಕರಣ ನಿಯಮ ವಿರುದ್ಧ ಪ್ರಯೋಗಗಳನ್ನು ಬಳಸುವುದರಲ್ಲಿ ವಿಶಿಷ್ಟತೆಯನ್ನು ಕಾಣುತ್ತೇವೆ. ಜಾನಪದ ಭಾಷೆಯನ್ನು, ಜನರ ಆಡುಮಾತನ್ನು ಮತ್ತು ಶಿಷ್ಟಭಾಷೆ ಸಂಸ್ಕೃತವನ್ನು ಮೂರನ್ನು ಅಳವಡಿಸಿಕೊಂಡಿದ್ದರಿಂದ ವಿಶಿಷ್ಟ ಪ್ರಯೋಗಗಳಾಗಿ ವಿಶಿಷ್ಟ ಶಬ್ದಗಳಿಂದ ದಾಸಸಾಹಿತ್ಯ ಅದರದೇ ಆಗ ಭಾಷಾವೈಶಿಷ್ಟ್ಯಗಳಿವೆ ಎನ್ನಬಹುದು. ಆರ್.ಎಸ್. ಪಂಚಮುಖಿ ಅವರು ಮೊದಲ ಬಾರಿಗೆ ಇವುಗಳಲ್ಲಿ ಹಲವನ್ನು ಗುರುತಿಸಿದ್ದಾರೆ[13].

ಹೀಗೆ ವ್ಯಾಕರಣ, ಛಂದಸ್ಸು, ರಸನಿರೂಪಣೆ ಮೊದಲಾದವುಗಳಲ್ಲಿ ವಿಶಿಷ್ಟತೆ ಹೊಂದಿದ ಕೀರ್ತನೆಸಾಹಿತ್ಯಗಳಲ್ಲಿ ಹರಿದಾಸರು ಸಾಕಷ್ಟು ಶಬ್ದಾಲಂಕಾರಗಳನ್ನು ಅರ್ಥಾಲಂಕಾರಗಳನ್ನು ಚಿತ್ರಕವಿತ್ವಗಳನ್ನು ಬಳಸಿದ್ದಾರೆ.

ಶಬ್ದಾಲಂಕಾರಗಳಲ್ಲಿ ಷಟ್‌ಪ್ರಾಸವನ್ನು ಅನುಪ್ರಾಸ. ಯಮಕ, ಆದಿ, ಮಧ್ಯ, ಅಂತ್ಯಪ್ರಾಸಗಳನ್ನು ಬಳಸಿರುವುದನ್ನು ಎಲ್ಲ ದಾಸರ ಕೀರ್ತನೆಗಳಲ್ಲಿ ಕಂಡುಬರುವುದಾದರೂ ವಿಶೇಷವಾಗಿ ಮೊದಲ ಘಟ್ಟದ ದಾಸರಲ್ಲಿ ವೈವಿಧ್ಯಪೂರ್ಣವಾಗಿ ಬಳಸಿರುವುದನ್ನು ಕಂಡುಬರುತ್ತದೆ ಮತ್ತು ಅಧಿಕ ಸಂಖ್ಯೆಯಲ್ಲಿ ಕಂಡುಬರುತ್ತದೆ ಎಂದರೆ ತಪ್ಪಾಗದು.

ಹರಿದಾಸರ ಕೃತಿಗಳಲ್ಲಿ ಕಂಡುಬರುವ ಅಲಂಕಾರಗಳನ್ನು ಕುರಿತು ಚರ್ಚಿಸಿದವರು ಕೆಲವರೇ ಎಂದರೆ ತಪ್ಪಿಲ್ಲ. ಹೀಗೆ ದಾಸಸಾಹಿತ್ಯದಲ್ಲಿ ಗುರುತಿಸಿರುವ ಅಲಂಕಾರಗಳಲ್ಲಿ ಕೆಲವನ್ನು ನಿದರ್ಶನಗಳೊಡನೆ ಉಲ್ಲೇಖಿಸಲಾಗಿದೆ.

ಅರ್ಥಾಲಂಕಾರಗಳು:

1. **ಸ್ವಭಾವೋಕ್ತಿ:**

ಆಡಿದನೋ ರಂಗ ಅದ್ಭುತದಿಂದಲಿ ಕಾಳಿಂಗನ ಫಣಿಯಲಿ

(ಪುರಂದರದಾಸರ ಕೀರ್ತನೆ)

2. **ಉಪಮಾಲಂಕಾರ**

ಘೋರನರಕದ ತನುವು ಎಂದು ಮನದಲಿ ತಿಳಿದು
ಗೇರುಹಣ್ಣಿನ ಬೀಜದಂತೆ ಹೊರಗಿದ್ದು
ಸಲೆ ಉದರಪೋಷಣೆಗೆ ತಳೆ ಹುಳುಕುನಾಯಂತೆ
ಹಲವು ಮನೆ ಅಲೆಯುತಿಹನೋ

(ಕನಕದಾಸರ ಹಾಡು)

3. **ಮಾಲೋಪಮಾಲಂಕಾರ**

ಬಲಿಯ ಮನೆಗೆ ವಾಮನ ಬಂದಂತೆ
ಭಗೀರಥಗೆ ಶ್ರೀ ಗಂಗೆ ಬಂದಂತೆ
ಮುಚುಕುಂದಗೆ ಶ್ರೀ ಮುಕುಂದ ಬಂದಂತೆ
ಗೋಪಿಯರಿಗೆ ಗೋವಿಂದ ಬಂದಂತೆ . . .

(ಪುರಂದರದಾಸರ ಉಗಾಭೋಗ)

4. **ದೃಷ್ಟಾಂತಾಲಂಕಾರ**

ಅರಸು ಮುಟ್ಟಲು ದಾಸ ರಂಭೆಯಾಹಳು ದೇವ
ಪುರುಷ ಮುಟ್ಟಲು ಲೋಹ ಸ್ವರ್ಣ ಗೋವಿಂದ

(ಶ್ರೀಪಾದರಾಜರ ಕೀರ್ತನೆ)

5. **ಶ್ಲೇಷಾಲಂಕಾರ**

ತಂದೀರಾ ಭಿಕ್ಷಕೆ । ರಾಗಿ ತಂದೀರಾ
ಯೋಗ್ಯರಾಗಿ ಭೋಗ್ಯರಾಗಿ । ಭಾಗ್ಯವಂತರಾಗಿ । ನೀವು

(ಪುರಂದರದಾಸರ ಕೀರ್ತನೆ)

6. ಚಿತ್ರಕವಿತ್ವ

ನಾ ಎಂದು ನುಡಿಯಲ್‌ನೆನ್ನು ನರಕನಾಶ
ರಾ ಎಂದು ಪೇಳಲು ರಾಯಪದವಿಯಕ್ಕು
ಯ ಎಂದು ವರ್ಣಿಸಲು ಆನಂದದ ಅಭಿವೃದ್ಧಿ
ಣಾ ಎಂದದರ ಫಲವಾರು ಹೇಳುವರಯ್ಯ

7. ವಿರೋಧಾಭಾಸ

ನೀನ್ಯಾಕೋ ನಿನ್ನ ಹಂಗ್ಯಾಕೋ
ನಿನ್ನ ನಾಮದ ಬಲವೊಂದಿದ್ದರೆ ಸಾಕೋ

(ಪುರಂದರದಾಸರ ಕೀರ್ತನೆ)

8. ಅರ್ಥಾಂತರನ್ಯಾಸ

ಭೃಂಗ ನಿನ್ನಟ್ಟಿದನೆ ಶ್ರೀ
ರಂಗ ಮಧುರೆಲಿ ನಿಂದು
ಅಂಗಜಲುಬ್ಧಕ ಪೊಂಗೊಳಲ ತಡೆಯನಿಕ್ಕೆ
ಅಗಿಸುತ್ತೈದಾನೆ ಅಸುವ ಹೇ ಕಿತವ

(ಶ್ರೀಪಾದರಾಜರ ಭ್ರಮರಗೀತೆ)

9. ವ್ಯಾಜಸ್ತುತಿ ಅಲಂಕಾರ

ಆರು ಬದುಕಿದರಯ್ಯ ಹರಿ ನಿನ್ನ ನಂಬಿ
ತೋರು ಈ ಜಗದೊಳಗೆ ಒಬ್ಬನನು ಕಾಣೆ

(ಪುರಂದರದಾಸರ ಕೀರ್ತನೆ)

10. ವಕ್ರೋಕ್ತಿ

ಇಂಥಾ ಹೆಣ್ಣನು ನಾನೆಲ್ಲಿ ಕಾಣೆನೊ
ಹೊಂತಕಾರಿ ಕಾಣಿರೊ
ಸಂತತ ಸುರರಿಗೆ ಪೀಯೂಷ ವುಣಿಸಿದ
ಪಂಕ್ತಿಯೊಳು ಪರಪಂಚಿಕೆ ಮಾಡಿದ

(ಪುರಂದರದಾಸರ ಕೀರ್ತನೆ)

11. **ಉತ್ಪ್ರೇಕ್ಷಾಲಂಕಾರ**

ಇಂದಿರೇಶನು ಮಣಿನಂದನೀತೀರದಿ
ಚೆಂದದಿ ಕೊಳಲೂದುತಿರಲು . . .
ಕಂಕಣ ಬಳೇಡೂರ್‍ಯ ಕಾಲಿನಲ್ಲೇರಿಸಿ
ಕಿಂಕಿಣಿ ಕಿರುಗೆಜ್ಜೆರುಳಿಯ
ಪಂಕಜಾಕ್ಷೇರು ನಳಿತೋಳಿನಲ್ಲೇರಿಸಿ
ಅಲಂಕಾರವಾಗಿ ನಡೆದರು

(ಭೀಮವ್ವನ ಕೀರ್ತನೆಗಳು)

ಶಬ್ದಾಲಂಕಾರಗಳು

"ಆದಿಪ್ರಾಸಾಲಂಕಾರಗಳು ಆರು ಬಗೆಯಾಗಿವೆ. ದಾಸರ ಕೀರ್ತನೆಗಳಲ್ಲಿ ಎಲ್ಲ ಬಗೆ ಪ್ರಾಸಾಲಂಕಾರಗಳಿಗೂ ನಿದರ್ಶನಗಳು ದೊರೆಯುತ್ತವೆ.

(1) **ಸಿಂಹಪ್ರಾಸ** (ವ್ಯಂಜನದ ಹಿಂದಿನ ಅಕ್ಷರ ಹ್ರಸ್ವ ಆಗಿರುತ್ತದೆ.)

ಹರಿಸಂಕರ್ಷಣರೀರ್ವರು ಹರುಷದಿ
ಚಲಿಸಿದರಾಕಳ ಕಾಯುತಲಿ

(ಸ್ವರ್ಗಕ್ಕೆ ಸಮ ವೃಂದಾವನದಲ್ಲಿ
ಕೀರ್ತನೆ: ಪ್ರಸನ್ನ ವೆಂಕಟದಾಸರು)

(2) **ಗಜಪ್ರಾಸ** (ವ್ಯಂಜನದ ಹಿಂದಿನ ಅಕ್ಷರ ದೀರ್ಘವಾಗಿರುತ್ತದೆ.)

ಶ್ರೀಕರ ಶ್ರೀಯದಾನಂತ । ನಿಖಿಳ
ಲೋಕೈಕನಾಥ ನಿನ್ನಂಥ । ಸಖಿರ

(ಶ್ರೀ ವೆಂಕಟಾಚಲನಿವಾಸ ಕೀರ್ತನೆ
ಶ್ರೀ ಜಗನ್ನಾಥದಾಸರು)

(3) **ಹಯಪ್ರಾಸ** (ಸಜಾತಿಯ ದ್ವಿತ್ವಾಕ್ಷರ ಬರುತ್ತದೆ)

ನಿನ್ನನೆ ಪೂಜಿಪೆನು ನಿನ್ನನೆ ಪಾಡಿ ಪೊಗಳುವೆನು
ನಿನ್ನನೆ ನಂಬಿದ್ದವಳಿಗಿಂಥ . . .

(ಹೆಳವನಕಟ್ಟೆ ಗಿರಿಯಮ್ಮ)

(4) **ವೃಷಭಪ್ರಾಸ** (ಪ್ರಾಸಾಕ್ಷರದ ಹಿಂದಿನಾಕ್ಷರ ಅನುಸ್ವಾರ ಆಗಿರುತ್ತದೆ)

ಇಂದು ಎನಗೆ ಶ್ರೀ ಗೋವಿಂದ ನಿನ್ನಯ ಪಾದಾರ
ವಿಂದವ ತೋರೋ ಮುಕುಂದ ಇಂದಿರಾರಮಣ

(ಶ್ರೀ ರಾಘವೇಂದ್ರತೀರ್ಥರ ಕೃತಿ)

(5) **ಶರಭಪ್ರಾಸ** (ವ್ಯಂಜನವು ವಿಜಾತಿಯ ದ್ವಿತ್ವದಲ್ಲಿ ಬರುತ್ತದೆ)

ಭಕ್ತಿಯಲಿ ಭರತನೆ ಭಾವದಲಿ ಲಕ್ಷ್ಮಣನೆ
ಯುಕ್ತಿಯಲಿ ನೀನಿಂದ್ರಸುತನೇನೊ

(ವ್ಯಾಸರಾಯ ಕೀರ್ತನೆ)

(6) **ಅಜಪ್ರಾಸ** (ಹಿಂದಿನಾಕ್ಷರವು ವಿಸರ್ಗದಿಂದ ಕೂಡಿರಬೇಕು)

ನೀಂ ನಿಃಶಂಕೆಯ ನೀ ದೇ । ವಾ ನಿಃತರಣ ಜನರಿಗೆ ಶರಣಾಗೀಗಳ್
ಕೇಳ್ನಿಃಶಮಮಂ ಪರಿಹರಿ । ಸೀ ನಿಃಶಾಪ ಪ್ರಸಾದಮಂ ಕರುಣಾತ್ಮಾ ॥[14]

ಈ ರೀತಿಯಾಗಿ ಹರಿದಾಸರ ಕೃತಿಗಳಲ್ಲಿ ಶಬ್ದಾಲಂಕಾರ ಮತ್ತು ಅರ್ಥಾಲಂಕಾರಗಳ ಎಲ್ಲ ಬಗೆಗಳನ್ನು ಕಾಣಬಹುದು ಎಂಬುದು ಮೇಲಿನ ಉದಾಹರಣೆಗಳಿಂದ ವಿದಿತವಾಗುತ್ತದೆ. ಆದರೆ ಈ ಬಗೆಗೆ ವಿಸ್ತೃತ ಅಧ್ಯಯನ ಆಗಿಲ್ಲ. ಅಲಂಕಾರ ಪ್ರಭೇದಗಳನ್ನೆಲ್ಲ ಹರಿದಾಸರ ಕೃತಿಗಳಲ್ಲಿ ಗಮನಿಸಿರುವ ಕೆಲಸ ಆಗಿಲ್ಲ ಎಂಬುದು ಹೊರನೋಟಕ್ಕೆ ಕಾಣುವ ಸಂಗತಿ ಆಗಿದೆ.

ದಾಸರು ಶಬ್ದಾರ್ಥಾಲಂಕಾರಗಳನ್ನು ಕೀರ್ತನೆಗಳಲ್ಲಿ ಅಳವಡಿಸಿರಲು ಕಾರಣವೆಂದರೆ ಅವರ ಪಾಂಡಿತ್ಯ ಪ್ರದರ್ಶನಕ್ಕಾಗಿ ಅಲ್ಲ. ಆರ್.ಎಸ್. ಪಂಚಮುಖಿ ಅವರು ಹೇಳುವಂತೆ[15]. "ದಾಸಾರ್ಯರು ಪದ-ವಾಕ್ಯರಚನೆಗಳಲ್ಲಿ ಜನಪದ ಭಾಷೆಗೆ ಹೊಂದುವಂತೆ ಮಾರ್ಪಾಡು ಮಾಡಿಕೊಂಡಂತೆ ಉಪದೇಶಿಸುವ ರೀತಿಯಲ್ಲಿಯೂ ಹೊಸಶೈಲಿಯನ್ನು ಅಂಗೀಕರಿಸಿದ್ದಾರೆ. ಚಿಕ್ಕಮಕ್ಕಳಿಂದ ಮುದುಕರವರೆಗೆ ವೇದಗಳಲ್ಲಿ ಅನಧಿಕೃತವಾದ ಸ್ತ್ರೀ ಶೂದ್ರ ಬ್ರಹ್ಮಬಂಧುಗಳಿಂದ ಜ್ಞಾನಿವಿಪ್ರರವರೆಗೆ ಅವರ ಉಪದೇಶಗಳು ಮುಟ್ಟುವುದರಿಂದ ಆ ಆ ಅವಸ್ಥೆಗಳಲ್ಲಿ ಅಧಿಕಾರಿಗಳ ಮನಸ್ಸಿನಲ್ಲಿ ನಾಟುವಂತೆ ರಸಪೋಷಕವಾದ ಶಬ್ದಾರ್ಥಾಲಂಕಾರಗಳಿಂದ ತಮ್ಮ ಭಾಷೆಯನ್ನು ಶೈಲಿಯನ್ನು ರೂಪಿಸಿದ್ದಾರೆ" ವ್ಯಾಕರಣ, ಛಂದಸ್ಸು, ರಸಾನುಭಾವ, ನವವಿಧಭಕ್ತಿ, ಅಲಂಕಾರಗಳಿಗೆ ಸಾಕಷ್ಟು ಗಮನವನ್ನು ಹರಿದಾಸರು ಪ್ರಾಸಂಗಿಕವಾಗಿ ನೀಡಿದ್ದಾರೆ ಎಂಬುದು ಮೇಲಿನ ನಿದರ್ಶನಗಳಿಂದ ತಿಳಿದು ಬರುತ್ತದೆ. ಆದರೆ ಈ ಅಲಂಕಾರಗಳ ಪೈಕಿ ವ್ಯಾಜಸ್ತುತಿ ಅಲಂಕಾರ ಹರಿದಾಸಸಾಹಿತ್ಯದಲ್ಲಿ ವಿಶೇಷವಾಗಿದ್ದು ಆ ಬಗೆಗೆ ವಿಶ್ಲೇಷಣಾತ್ಮಕವಾಗಿ ಅಧ್ಯಯನಗಳು ನಡೆದಿಲ್ಲ ಎನ್ನಬಹುದು. ನಿಂದಾಸ್ತುತಿಯನ್ನಾಗಿ ಕೆಲವು ಕೀರ್ತನೆಗಳನ್ನು ಗುರುತಿಸಿ ಪ್ರಸ್ತಾಪಿಸಿರುವುದನ್ನು ಹಲವು ಲೇಖಕರ ಗ್ರಂಥಗಳಲ್ಲಿ ಕಾಣುತ್ತೇವೆ. ಮುಂದಿನ ಅಧ್ಯಾಯದಲ್ಲಿ ವ್ಯಾಜಸ್ತುತಿ ಅಲಂಕಾರವೊಂದನ್ನೆ ಗುರಿಯಾಗಿಟ್ಟುಕೊಂಡು ಅದರ ಲಕ್ಷಣ ಸ್ವರೂಪಗಳನ್ನು ಸಂಸ್ಕೃತ ಮತ್ತು ಕನ್ನಡ ಆಲಂಕಾರಿಕರು ಹೇಗೆ ವಿವರಿಸಿದ್ದಾರೆ. ಅವುಗಳಲ್ಲಿ ಕಂಡುಬರುವ ಮುಖ್ಯಾಂಶಗಳೇನು ಎಂಬುದನ್ನು ವಿವರಿಸಲಾಗಿದೆ.

– – –

ಅಧ್ಯಾಯ ಎರಡು

ಅಡಿಟಿಪ್ಪಣಿಗಳು

1. ಆರ್.ಎಸ್. ಪಂಚಮುಖಿ	ಹರಿದಾಸ ಸಾಹಿತ್ಯ, ಕ.ಸಾ.ಪ. (ಪ್ರ) ಬೆಂಗಳೂರು. ಪು. 213–214.
2. ಜಿ. ವರದರಾಜರಾವ್	ಹರಿದಾಸ ಸಾಹಿತ್ಯ ಸಾರ, ಮೈ.ವಿ.ವಿ. ಪು.426–436.
3. ಡಾ. ಆರ್ ಸುನಂದಮ್ಮ	ದಾಸಸಾಹಿತ್ಯದಲ್ಲಿ ಜಾನಪದ ಅಂಶಗಳು –ಒಂದು ಅಧ್ಯಯನ, ಕನ್ನಡ ಅಧ್ಯಯನ ಕೇಂದ್ರ, ಮೈ.ವಿ.ವಿ. 1994, ಪು.88
4. ಬೇಲೂರು ಕೇಶವದಾಸರು	ಹರಿದಾಸ ಸಾಹಿತ್ಯ ಪು.192–239, ಅಧ್ಯಾಯ–5 'ವಿವಿಧ ರಸಗಳಲ್ಲಿ'.
5. ಬೇಲೂರು ಕೇಶವದಾಸರು	ಹರಿದಾಸ ಸಾಹಿತ್ಯ ಪು.192–193, ಗೀತಾ ಬುಕ್ ಹೌಸ್, ಮೈಸೂರು, 1980.
6. ಆರ್.ಎಸ್.ಪಂಚಮುಖಿ	ಹರಿದಾಸ ಸಾಹಿತ್ಯ, ಪು.87, ಕ.ಸಾ.ಪ. ಪ್ರಕಟನೆ.
7. ಅದೇ.	ಪು.87
8. ನಾರದಭಕ್ತಿಸೂತ್ರಗಳು 1–2	"ಸಾತಸ್ಮಿನ್ ಪರಮಪ್ರೇಮರೂಪಾ" ರಾಮಕೃಷ್ಣಾಶ್ರಮ, ಬೆಂಗಳೂರು.
9. ತೀ.ನಂ.ಶ್ರೀ.	ಭಾರತೀಯ ಕಾವ್ಯಮೀಮಾಂಸೆ, ಪು.612, 1992.
10. ಬೇಲೂರು ಕೇಶವದಾಸ	ಹರಿದಾಸ ಸಾಹಿತ್ಯ ಪು.192–240, ಅಧ್ಯಾಯ–5 'ವಿವಿಧ ರಸಗಳಲ್ಲಿ'

11.	ಆರ್.ಎಸ್. ಪಂಚಮುಖಿ	ಹರಿದಾಸ ಸಾಹಿತ್ಯ, "ದಾಸರ ಕೃತಿಗಳಲ್ಲಿ ರಸನಿರೂಪಣೆ", ಪು.225–226.
12.	ಜಿ. ವರದರಾಜರಾವ್	ಹರಿದಾಸ ಸಾಹಿತ್ಯ ಸಾರ, ಮೈ.ವಿ.ವಿ. ಪು.82–156.
13.	ಆರ್.ಎಸ್. ಪಂಚಮುಖಿ	ಹರಿದಾಸ ಸಾಹಿತ್ಯ, ಪು.219.
14.	ಕಿಟಲ್	ಹಳಗನ್ನಡ ವ್ಯಾಕರಣಸೂತ್ರಗಳು, 1889.
		ಶಬ್ದಾಲಂಕಾರ ಮತ್ತು ಅರ್ಥಾಲಂಕಾರಗಳ ನಿದರ್ಶನಗಳನ್ನು ಆರ್.ಎಸ್. ಪಂಚಮುಖಿ ಮತ್ತು ಕೀರ್ತಿ ರಘುರಾವ್, ಗೋಕುಲನಾಥ್ ಅವರ ಗ್ರಂಥಗಳಿಂದ ಆಯ್ಕೆ ಮಾಡಿಕೊಳ್ಳಲಾಗಿದೆ ಮತ್ತು ಅಜಪ್ರಾಸದ ನಿದರ್ಶನವನ್ನು ಕಿಟಲ್‌ರ 'ಹಳಗನ್ನಡ ವ್ಯಾಕರಣಸೂತ್ರಗಳು', ಗ್ರಂಥದಿಂದ ಆರಿಸಿದೆ.
15.	ಆರ್.ಎಸ್. ಪಂಚಮುಖಿ	ಹರಿದಾಸ ಸಾಹಿತ್ಯ, ಪು.222.

– – –

ಅಧ್ಯಾಯ ಮೂರು

ವ್ಯಾಜಸ್ತುತಿ ಅಲಂಕಾರದ ಲಕ್ಷಣಗಳು

ಅಧ್ಯಾಯ ಮೂರು

ವ್ಯಾಜಸ್ತುತಿ ಅಲಂಕಾರದ ಲಕ್ಷಣಗಳು

ಅಲಂಕಾರಶಾಸ್ತ್ರ ಭಾಷಾ ಅಧ್ಯಯನದ ಒಂದು ಭಾಗ. ಸ್ಥೂಲವಾಗಿ ಗದ್ಯದ ಮೀಮಾಂಸೆಯನ್ನು ಸಾಹಿತ್ಯ ಮೀಮಾಂಸೆ ಎಂದು ಕರೆದರೆ ಕಾವ್ಯದ ಮೀಮಾಂಸೆಯನ್ನು ಅಲಂಕಾರಶಾಸ್ತ್ರವೆಂದು ಕರೆಯುತ್ತಾರೆ. ಛಂದಸ್ಸು, ಅಲಂಕಾರಗಳ ಅಧ್ಯಯನ ಕಾವ್ಯಾಭ್ಯಾಸದಲ್ಲಿ ಮಹತ್ವ ಪಡೆದರೆ ವ್ಯಾಕರಣ–ಭಾಷಾಶಾಸ್ತ್ರ, ಗದ್ಯಾಭ್ಯಾಸದಲ್ಲಿ ಮಹತ್ವ ಪಡೆದಿದೆ. ಕಾವ್ಯದ ಪರಿಭಾಷೆಯನ್ನು ಅಧ್ಯಯನ ಮಾಡುವಾಗ ಪ್ರಾಸಂಗಿಕವಾಗಿ ವ್ಯಾಕರಣ, ಭಾಷಾಶಾಸ್ತ್ರದ ದೃಷ್ಟಿಯಿಂದ ವಿವೇಚನೆ ಮಾಡುವುದುಂಟು.

ಕೀರ್ತನಸಾಹಿತ್ಯ ಎಂದರೆ ಮುಖ್ಯವಾಗಿ ಹರಿದಾಸರ ಕೀರ್ತನಸಾಹಿತ್ಯವನ್ನು ಅಲಂಕಾರಶಾಸ್ತ್ರದ ದೃಷ್ಟಿಯಿಂದ ನೋಡಿದಾಗ ಕೆಲವು ಅಲಂಕಾರಗಳು ವಿಶೇಷವಾಗಿ ಕಾಣಿಸಿಕೊಳ್ಳುವುದನ್ನು ಕಾಣುತ್ತೇವೆ. ಆ ಪೈಕಿ ವ್ಯಾಜಸ್ತುತಿ ಅಲಂಕಾರ ಮುಖ್ಯವಾದುದು. ಏಕೆಂದರೆ ವ್ಯಾಜಸ್ತುತಿ ಅಲಂಕಾರ ಬಹುಮಟ್ಟಿಗೆ ಎಲ್ಲ ಪ್ರಮುಖ ಹರಿದಾಸರ ಕೀರ್ತನೆಗಳಲ್ಲೂ ಕಂಡುಬರುವ ಅಲಂಕಾರವಾಗಿದೆ. ಪಂಚವಿಧ ಭಾವಗಳಲ್ಲಿ ಸಖ್ಯಭಾವನಿರೂಪಣೆಗೆ ಹೇಳಿ ಮಾಡಿಸಿದ ಅಲಂಕಾರವಾಗಿದೆ. ಈ ರೀತಿ ಒಂದು ಭಾವಕ್ಕೆ ವಿಶೇಷವಾಗಿ ಮೀಸಲಾದ ಅಲಂಕಾರವನ್ನು ಶಾಂತ, ವಾತ್ಸಲ್ಯ, ದಾಸ್ಯ, ಮಧುರ ಭಾವಗಳಲ್ಲಿ ಕಾಣೆವು. ಸಖ್ಯಭಾವವೆಂದರೆ ನಿಂದಾಸ್ತುತಿ ಅಲಂಕಾರ, ನಿಂದಾಸ್ತುತಿ ಅಲಂಕಾರವೆಂದರೆ ಸಖ್ಯಭಕ್ತಿ ಎನ್ನುವಷ್ಟರಮಟ್ಟಿಗೆ ವಿಶೇಷವಾಗಿ ಪರಿಗಣಿಸಬೇಕಾದ ಅಲಂಕಾರವಾಗಿದೆ. ದಾಸರ ಕೃತಿಗಳಲ್ಲಿ ನಿಂದಾಸ್ತುತಿಯನ್ನು ಅನೇಕರು ಗುರುತಿಸಿದ್ದರೂ ಅದನ್ನೇ ವಿಶೇಷವಾಗಿ ಅಧ್ಯಯನ ಮಾಡಿದ್ದು ಕಂಡುಬರುವುದಿಲ್ಲ. ಅಲಂಕಾರಶಾಸ್ತ್ರದ ಹಿನ್ನೆಲೆಯಲ್ಲಿ ವಿಶೇಷವಾಗಿ ಗಮನಿಸಿಲ್ಲ. ಆ ಕಾರ್ಯವನ್ನು ಇಲ್ಲಿ ಕೈಗೊಂಡಿದೆ.

ಅಲಂಕಾರವೆಂದರೇನು? ಅವುಗಳು ಎಷ್ಟು ವಿಧ? ಅಲಂಕಾರಗಳ ಸಂಖ್ಯೆ ಎಷ್ಟು ಎಂಬುದರ ಬಗ್ಗೆ ನಾನಾ ವ್ಯಾಖ್ಯೆಗಳಿವೆ.

ಅಲಂಕಾರವೆಂದರೇನು? ಎಂಬ ಮಾತಿಗೆ ಕೆಲವು ವ್ಯಾಖ್ಯೆಗಳನ್ನು ಗಮನಿಸಬಹುದು:

ಅಲಂಕಾರವೆಂದರೆ ನಿಘಂಟಿನ ಅರ್ಥಾನುಸಾರ.

"ಒಡವೆ, ಆಭರಣ, ಭೂಷಣಪ್ರಾಯ, ಸೊಗಸು, ಚೆಲ್ವು ಎಂಬುದು ಸಾಮಾನ್ಯಾರ್ಥವಾಗಿದೆ. ಕಾವ್ಯದ ಸೊಗಸನ್ನು ಹೆಚ್ಚಿಸುವ ಶಬ್ದಾರ್ಥ ವೈಚಿತ್ರ್ಯ ಎಂಬುದು ಕಾವ್ಯಮೀಮಾಂಸಶಾಸ್ತ್ರದ ಅರ್ಥವಾಗಿದೆ. ಸಂಗೀತಶಾಸ್ತ್ರದ ದೃಷ್ಟಿಯಲ್ಲಿ "ಕೇಳುವವರಿಗೆ ಚಮತ್ಕಾರವಾಗಿ ಸಂತೋಷ ಕೊಡುವಂತೆ ವಿಶಿಷ್ಟವಾದ ಸ್ವರಗಳ ಜೋಡಣೆಯಿಂದಲೂ ಮೂರ್ಛನಾಜಾತಿ ವರ್ಣಗಳಿಂದಲೂ ಕೂಡಿದ ರಾಗವಿನ್ಯಾಸ"[1].

ಅಲಂಕಾರ ಶಾಸ್ತ್ರವೆಂದರೇನು?

"ಸಾಹಿತ್ಯದಲ್ಲಿ ಶಬ್ದಾರ್ಥಗಳ ಉಕ್ತಿ ಚಮತ್ಕಾರವನ್ನು ಸೌಂದರ್ಯ ತತ್ವವನ್ನು, ವಿಭಾಗಿಸಿ, ವಿಮರ್ಶಿಸಿ ಹೆಸರಿಟ್ಟು ತೋರಿಸುವ ಶಾಸ್ತ್ರ" ಎಂದು ತೀ.ನಂ.ಶ್ರೀ. ಹೇಳುತ್ತಾರೆ[2].

"ವ್ಯಾಕರಣಶಾಸ್ತ್ರಕ್ಕೆ ಶಬ್ದವು ಹೇಗೆ ಲಕ್ಷ್ಯವೋ ಹಾಗೆ ಅಲಂಕಾರಶಾಸ್ತ್ರಕ್ಕೆ ಕಾವ್ಯವು ಲಕ್ಷ್ಯ. ಕಾವ್ಯವೆಂದರೇನು? ಅದರ ಲಕ್ಷಣ, ಕಾವ್ಯನಿಮಿತ್ತ ಪ್ರಯೋಗ, ಕಾವ್ಯಭೇದಗಳು, ಶಬ್ದಾರ್ಥಗಳ ಸ್ವರೂಪ, ಅವುಗಳ ಶಕ್ತಿ ಕಾವ್ಯಸೌಂದರ್ಯಕ್ಕೆ ಸಾಧನೆಗಳು, ಸಾಧನಗಳ ತಾರತಮ್ಯ ಕಾವ್ಯದೋಷ–ಇತ್ಯಾದಿ ವಿಷಯಗಳನ್ನು ಚರ್ಚಿಸಿರುವುದೇ ಅಲಂಕಾರಶಾಸ್ತ್ರ ಎಂದು ರಂಗನಾಥಶರ್ಮರು ಹೇಳುತ್ತಾರೆ[3].

ಅಲಂಕಾರ ಶಬ್ದದ ಎರಡು ಅರ್ಥಗಳನ್ನು ವಾಮನ ತನ್ನ ಕಾವ್ಯಾಲಂಕಾರಸೂತ್ರದಲ್ಲಿ ಕೊಟ್ಟಿದ್ದಾನೆ. ಒಂದು ಸೌಂದರ್ಯದಿಂದ ಕೂಡಿದ ವಸ್ತು (ಸೌಂದರ್ಯಂ ಅಲಂಕಾರಃ) ಮತ್ತೊಂದು ಶಬ್ದಾರ್ಥಗಳ ಉಪಮಾದಿಭೂಷಣಗಳು[4].

ಕಾಮಧೇನುಕಾರನ ಪ್ರಕಾರ – "ಕಾವ್ಯಕ್ಕೆ ಆದರಣೆ ಮಾಡುವ ಯಾವ ಅಲಂಕಾರಗಳನ್ನು ಹೇಳಲಾಗಿದೆಯೋ ಆ ಅಲಂಕಾರಗಳ ವಿವೇಚನೆಯನ್ನು ಮಾಡುವ ಶಾಸ್ತ್ರವೂ ಅಲಂಕಾರವೆಂಬ ಹೆಸರಿನಿಂದ ಪ್ರಸಿದ್ಧವಾಗಿದೆ[5].

ಅಲಂಕಾರಗಳು ಎರಡು ವಿಧ. ಶಬ್ದಾಲಂಕಾರಗಳು (ವ್ಯುತ್ಪತ್ತಿಪ್ರಧಾನ). ಅರ್ಥಾಲಂಕಾರಗಳು (ಪ್ರತಿಭಾಪ್ರಧಾನ)[6].

ಹೀಗೆ ಸಂಸ್ಕೃತ ಅಲಂಕಾರಿಗಳು ಅನೇಕ ವ್ಯಾಖ್ಯೆಗಳನ್ನು ಕಾಣಬಹುದು. ಈ ಎಲ್ಲ ವ್ಯಾಖ್ಯೆಗಳ ಸಾರದಂತೆ ಇರುವ ಆರ್. ಗಣೇಶನ್ ಅವರ ಮಾತುಗಳು ಉಲ್ಲೇಖನೀಯವಾಗಿದೆ: "ಮುಖ್ಯವಾಗಿ ಅಲಂಕಾರಶಾಸ್ತ್ರವು ಶಬ್ದಾರ್ಥಗಳನ್ನೇ ಮೂಲಸಾಮಗ್ರಿಯಾಗಿ ಉಳ್ಳ ವರ್ಣನೆ (Description) ಮತ್ತು ಇತಿವೃತ್ತ (Plot,

theme)ಗಳನ್ನು ಇವುಗಳ ಮೂಲಕವೇ ನಡೆಸುವ ಸಾಹಿತ್ಯದ ಗುಣ-ದೋಷಗಳ ಮೀಮಾಂಸೆ ಆಗಿದೆ".

ಇನ್ನು ಕನ್ನಡ ಆಲಂಕಾರಿಕರು ಹೇಳಿರುವ ಮಾತುಗಳನ್ನು ಗಮನಿಸಬಹುದಾಗಿದೆ. ಅಲಂಕಾರಶಾಸ್ತ್ರದ ಬಗ್ಗೆ ವಿವರಣೆ ನೀಡುವ ಕನ್ನಡ ಕೈಪಿಡಿಕಾರರ ಈ ಮಾತುಗಳು ಪ್ರಸಿದ್ಧವಾಗಿವೆ: – "ಸಾಹಿತ್ಯದಲ್ಲಿ ಅಲಂಕಾರವೆಂದರೆ ಅನುಪ್ರಾಸ, ಉಪಮೆ ಮುಂತಾದ ಶಬ್ದಾರ್ಥ ವೈಚಿತ್ರ್ಯಗಳೆಂದು ಒಂದು ಅರ್ಥ; ಕಾವ್ಯದಲ್ಲಿರುವ ಸೌಂದರ್ಯ ಎಂಬು ಮತ್ತೊಂದು ಅರ್ಥ. ಅಲಂಕಾರಶಾಸ್ತ್ರವು ಈ ಶಬ್ದಾರ್ಥ ವೈಚಿತ್ರ್ಯಗಳನ್ನೂ ಸೌಂದರ್ಯ ತತ್ತ್ವವನ್ನು ವಿಚಾರ ಮಾಡಿ ತಿಳಿಸುತ್ತದೆ. ಶಬ್ದಾರ್ಥ ವೈಚಿತ್ರ್ಯಗಳೂ ಕಾವ್ಯಕ್ಕೆ ಸೌಂದರ್ಯದಾಯಕವೇ ಆಗುವುದರಿಂದ ಅಲಂಕಾರಶಾಸ್ತ್ರವು ಕಾವ್ಯಸೌಂದರ್ಯತತ್ತ್ವವನ್ನು ವಿಚಾರ ಮಾಡಿ ಕಾವ್ಯಸ್ವರೂಪ ಲಕ್ಷಣ ಮುಂತಾದವುಗಳನ್ನು ಅದಕ್ಕೆ ಸಂಬಂಧಪಟ್ಟ ಇತರ ಅಂಶಗಳನ್ನು ತಿಳಿಸುವ ಶಾಸ್ತ್ರವೆಂದು ಹೇಳಬಹುದು[7].

ಅಲಂಕಾರಗಳ ವಿವರಣೆಗಳನ್ನು ಕಂಡಾಗ ಅಲಂಕಾರಗಳು ಇದ್ದರೆ ಉತ್ತಮವಾದ ಕಾವ್ಯಕ್ಕೆ ಶೋಭೆ ಎಂದು ಪ್ರಾಚೀನರು ಭಾವಿಸಿದ್ದರು. ಆದರೆ ನವೀನರು ಸ್ಫುಟವಾದ ಅಲಂಕಾರವಿಲ್ಲದಿದ್ದರೆ ಉತ್ತಮ ಕಾವ್ಯವಾಗಲಾರದೆಂದು ಅಭಿಪ್ರಾಯ ಹೊಂದಿರುವುದು ಕಾಣುತ್ತದೆ. ಪ್ರಾಚೀನರಲ್ಲಿ ಹಲವು ಶಾಸ್ತ್ರಕಾರರು ಅಲಂಕಾರಗಳ ಮೇಲೆ ವಿಸ್ತಾರವಾದ ಗ್ರಂಥಗಳನ್ನು ಬರೆದಿದ್ದಾರೆ. ಹೀಗೆ ಬರೆದಾಗ ಅಲಂಕಾರಗಳ ವಿಶ್ಲೇಷಣೆ, ವರ್ಗೀಕರಣ ಮಾಡುತ್ತಾ ನಾನಾ ಭೇದಗಳನ್ನು ಗುರುತಿಸುತ್ತಾ, ಅಲಂಕಾರ ಸಂಖ್ಯೆಗಳನ್ನು ಅಧಿಕಗೊಳಿಸುತ್ತಾ ಹೋಗಿದ್ದಾರೆ.

ಸಂಸ್ಕೃತ ಮತ್ತು ಕನ್ನಡ ಅಲಂಕಾರಿಕರು ತಮ್ಮ ಗ್ರಂಥಗಳಲ್ಲಿ ಉಲ್ಲೇಖಿಸಿರುವ ಅಲಂಕಾರ ಸಂಖ್ಯೆಗಳನ್ನು ಗಮನಿಸಿದರೆ ಈ ಅಂಶ ಸುದಿತವಾಗುತ್ತದೆ [8].

ಸಂಸ್ಕೃತ ಅಲಂಕಾರಿಕರಲ್ಲಿ ಭರತ ಹೇಳಿದ್ದು ನಾಲ್ಕು ಅಲಂಕಾರಗಳಾದರೆ ದಂಡಿ, ಭಾಮಹ, ಉದ್ಭಟ, ವಾಮನರು 35 ಅಲಂಕಾರಗಳನ್ನು ಹೇಳಿದ್ದಾರೆ. ರುದ್ರಟ, ಮಮ್ಮಟ 60 ಹೇಳಿದ್ದಾರೆ ಚಂದ್ರಾಲೋಕದಲ್ಲಿ 100 ಕುವಲಯಾನಂದದಲ್ಲಿ 120 ಅಲಂಕಾರಗಳನ್ನು ಹೇಳಲಾಗಿದೆ.

ಕನ್ನಡ ಅಲಂಕಾರಿಕರಲ್ಲಿ ನೃಪತುಂಗ, ಉದಯಾದಿತ್ಯ, ಮಾಧವರು ಸಂಸ್ಕೃತದ ದಂಡಿ, ಭಾಮಹ, ಉದ್ಭಟ, ವಾಮನರನ್ನು ಅನುಸರಿಸಿ 35 ಎಂದು ಹೇಳಿದ್ದಾರೆ

ನಾಗವರ್ಮ, ರುದ್ರಟ, ಮಮ್ಮಟರಂತೆ 60 ಎಂದಿರುವುದನ್ನು ತಿರುಮಲಾರ್ಯ, ಕುವಲಯಾನಂದ ಹೇಳಿದಂತೆ 120 ಅಲಂಕಾರಗಳ ಪ್ರಭೇದ ತಿಳಿಸಿರುವುದನ್ನು ಕಾಣಬಹುದು.

ಈ ಎಲ್ಲ ಅಲಂಕಾರಿಕರು ಶಬ್ದಾಲಂಕಾರ ಮತ್ತು ಅರ್ಥಾಲಂಕಾರಗಳನ್ನು ಹೇಳಿದ್ದಾರೆ. ಆ ಪೈಕಿ ಶಬ್ದಾಲಂಕಾರಗಳ ಸಂಖ್ಯೆ ಅರ್ಥಾಲಂಕಾರಗಳ ಸಂಖ್ಯೆಗಿಂತ ಕಡಿಮೆ ಎಂದು ತಿಳಿಯುತ್ತದೆ.

ಇಷ್ಟೊಂದು ಅಲಂಕಾರಗಳನ್ನು ಹಲವು ವಿಧಗಳಲ್ಲಿ ಅಲಂಕಾರಿಕರು ವಿಭಾಗಿಸಿರುವುದನ್ನು ಕಾಣುತ್ತೇವೆ. ಉದಾಹರಣೆಗೆ ರುದ್ರಟ, ಅಲಂಕಾರಗಳನ್ನು (1) ವಾಸ್ತವ, (2) ಔಪಮ್ಯ, (2) ಅತಿಶಯ, (4) ಶ್ಲೇಷ ಎಂದು ವರ್ಗೀಕರಿಸಿದರೆ, ರುಯ್ಯಕನು (1) ಔಪಮ್ಯ, (2) ವಿರೋಧ, (3) ಶೃಂಖಲಾ, (4) ನ್ಯಾಯ, (5) ಗೂಢಾರ್ಥ ಪ್ರತೀತಿ ಎಂದು 5 ವಿಭಾಗಗಳನ್ನು ಮಾಡುತ್ತಾನೆ. ಪ್ರತಾಪರುದ್ರರಲ್ಲಿ 7 ವಿಭಾಗಗಳು ಕಾಣುತ್ತವೆ. ಹೀಗೆ ಹಲವಾರು ಬಗೆಗಳ ವರ್ಗೀಕರಣವನ್ನು ಕಾಣುತ್ತೇವೆ.

ಇಲ್ಲಿ ಕೈಪಿಡಿಕಾರರು ಮಾಡಿರುವ ವರ್ಗೀಕರಣವನ್ನು ಗಮನಿಸಿ ವ್ಯಾಜಸ್ತುತಿ ಯಾವ ವಿಭಾಗದಲ್ಲಿ ಬರುತ್ತದೆ ಎಂಬುದನ್ನು ಗುರುತಿಸಿದೆ[3].

I ಶಬ್ದಾಲಂಕಾರಗಳ ವರ್ಗೀಕರಣ:

1. ಅನುಪ್ರಾಸ (ವ್ಯತ್ಯನುಪ್ರಾಸ–ಛೇದನುಪ್ರಾಸ ಎರಡು ವಿಧ)
2. ಯಮಕ
3. ಚಿತ್ರಕವಿತ್ವ

II ಅರ್ಥಾಲಂಕಾರಗಳ ವರ್ಗೀಕರಣ

1. ಔಪಮ್ಯ ಮೂಲಕವಾದ ಅರ್ಥಾಲಂಕಾರಗಳು (28 ಅಲಂಕಾರಗಳು)
2. ವಿರೋಧ ಮೂಲಕವಾದ ಅಲಂಕಾರಗಳು (5 ಅಲಂಕಾರಗಳು)
3. ಶೃಂಖಲಾ ಮೂಲಕವಾದ ಅಲಂಕಾರಗಳು (2 ಅಲಂಕಾರಗಳು) (ಸಾರ, ಏಕಾವಳಿ)

4ಅ. ತರ್ಕನ್ಯಾಯ ಮೂಲಕವಾದ ಅಲಂಕಾರಗಳು (3 ಅಲಂಕಾರಗಳು)
4ಆ. ವಾಕ್ಯನ್ಯಾಯ ಮೂಲಕವಾದ ಅಲಂಕಾರಗಳು (3 ಅಲಂಕಾರಗಳು)
4ಇ. ಲೋಕನ್ಯಾಯ ಮೂಲಕವಾದ ಅಲಂಕಾರಗಳು (6 ಅಲಂಕಾರಗಳು)

5. ಗೂಢಾರ್ಥಪ್ರತೀತಿ ಮೂಲಕವಾದ ಅಲಂಕಾರಗಳು (3 ಬಗೆ)

5ನೇ ವಿಭಾಗದಲ್ಲಿ ಬರುವ ಮೂರು ಬಗೆ ಅಲಂಕಾರಗಳಲ್ಲಿ (ವ್ಯಾಜಸ್ತುತಿ, ವ್ಯಾಜನಿಂದೆ, ಮಿಶ್ರಾಲಂಕಾರಗಳೆಂಬುವು) ಮೊದಲೆರಡು ಅಲಂಕಾರಗಳು ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದವು ಆಗಿವೆ.

ವ್ಯಾಜಸ್ತುತಿ ಅಲಂಕಾರವನ್ನು ಹಲವಾರು ಹಲವು ಬಗೆಯಾಗಿ ವ್ಯಾಖ್ಯಾನಿಸಿದ್ದಾರೆ, ವರ್ಗೀಕರಿಸಿದ್ದಾರೆ. ಉದಾಹರಣೆಗೆ ರುದ್ರಟನ ವರ್ಗೀಕರಣ ಹೀಗಿದೆ:

ರುದ್ರಟನು ಅರ್ಥಾಲಂಕಾರಗಳಲ್ಲಿ ನಾಲ್ಕು ಬಗೆಗಳನ್ನು ಮಾಡಿ ಅವುಗಳ ಸ್ವರೂಪಕ್ಕೆ ಅನುಗುಣವಾಗಿ ಆಯಾ ವಿಭಾಗಗಳಲ್ಲಿ ಅವುಗಳನ್ನು ವರ್ಗೀಕರಿಸಿರುವ ರೀತಿಯೂ ತೀರಾ ಹೊಸದು. ಈತನಲ್ಲೇ ಅದು ಮೊಟ್ಟಮೊದಲು ಕಾಣುವುದು. ಇದು ಆತನ ವರ್ಗೀಕರಣ ಕ್ರಮ:

(1) ವಾಸ್ತವಾಲಂಕಾರಗಳು: ಸಹೋಕ್ತಿ, ಸಮುಚ್ಚಯ, ಜಾತಿ, ಯಥಾಸಂಖ್ಯಾ, ಭಾವ, ಪರ್ಯಾಯ, ವಿಷಮ, ಅನುಮಾನ, ದೀಪಕ, ಪರಿಕರ, ಪರಿವೃತ್ತಿ ಪರಿಸಂಖ್ಯಾ, ಹೇತು, ಕಾರಣಮಾಲಾ, ವ್ಯತಿರೇಕ, ಅನ್ಯೋನ್ಯ, ಉತ್ತರ, ಸಾರ, ಸೂಕ್ಷ್ಮ, ಲೇಶ, ಅವಸರ, ಮಿಲಿತ ಮತ್ತು ಏಕಾವಲೀ – ಈ 23 ವಾಸ್ತವಾಲಂಕಾರಗಳು.

(2) ಔಪಮ್ಯಾಲಂಕಾರಗಳು: ಉಪಮಾ, ಉತ್ಪ್ರೇಕ್ಷಾ, ರೂಪಕ, ಅಪಹ್ನುತಿ, ಸಂಶಯ, ಸಮಾಸೋಕ್ತಿ, ಮತ, ಉತ್ತರ, ಅನ್ಯೋಕ್ತಿ, ಪ್ರತೀಪ, ಅರ್ಥಾಂತರನ್ಯಾಸ, ಉಭಯನ್ಯಾಸ, ಭ್ರಾಂತಿಮನ್, ಆಕ್ಷೇಪ, ಪ್ರತ್ಯಾನೀಕ, ದೃಷ್ಟಾಂತ, ಪೂರ್ವ, ಸಹೋಕ್ತಿ ಸಮುಚ್ಚಯ, ಸಾಮ್ಯ ಮತ್ತು ಸ್ಮರಣ – ಈ 21 ಔಪಮ್ಯಾಲಂಕಾರಗಳು.

(3) ಅತಿಶಯಾಲಂಕಾರಗಳು: ಪೂರ್ವ, ವಿಶೇಷ, ಉತ್ಪ್ರೇಕ್ಷಾ, ವಿಭಾವನಾ, ತದ್ಗುಣ, ಅಧಿಕ, ವಿರೋಧ, ವಿಷಮ, ಅಸಂಗತಿ, ವಿಹಿತ, ವ್ಯಾಘಾತ ಮತ್ತು ಹೇತು – ಈ 12 ಅತಿಶಯಾಲಂಕಾರಗಳು.

(4) ಶ್ಲೇಷಾಲಂಕಾರಗಳು: ಇವು ಎರಡು ಬಗೆ: ಶುದ್ಧ ಮತ್ತು ಸಂಕೀರ್ಣ ಎಂಬುದಾಗಿ ಮೊದಲನೆಯದರಲ್ಲಿ ಅವಿಶೇಷ, ವಿರೋಧ, ಅಧಿಕ, ವಕ್ರ, ವ್ಯಾಜ, ಉಕ್ತಿ, ಅಸಂಭವ, ಅವಯವ, ತತ್ತ್ವ ಮತ್ತು ವಿರೋಧಾಭಾಸ ಎಂದು ಹತ್ತು, ಎರಡನೆಯದರಲ್ಲಿ ಎರಡು ಅಲಂಕಾರಗಳನ್ನು ಹೇಳಿ ಒಟ್ಟು 12 ಶ್ಲೇಷಾಲಂಕಾರಗಳು.

ಹೀಗೆ ಈತನ ಪ್ರಕಾರ ಅರ್ಥಾಲಂಕಾರಗಳು (23+21+12+12=68) ಅರವತ್ತೆಂಟು ಶಬ್ದಾಲಂಕಾರಗಳು, 5 ಒಟ್ಟು ಈತ ಹೇಳುವ ಅಲಂಕಾರಗಳು 73

ಆಗುತ್ತವೆ. ಭಾಮಹನಲ್ಲಿ 37 ಇದ್ದ ಅಲಂಕಾರಗಳ ಸಂಖ್ಯೆ, ಈತನಲ್ಲಿ 73ಕ್ಕೆ ಏರಿದೆ. ಮತ್ತು ಅವುಗಳ ವಿವೇಚನೆಯಲ್ಲಿಯೂ ಈತನಲ್ಲಿ ಒಂದು ವಿಶಿಷ್ಟತೆ ಕಂಡುಬರುತ್ತದೆ.

ವ್ಯಾಜ ಎಂದರೆ ಕಪಟ, ಮೋಸ, ಮರೆ, ನೆವ, ನೆಪ, ತುಂಟತನ, ದುಷ್ಟತನ ಎಂಬರ್ಥಗಳನ್ನು ಕನ್ನಡ ನಿಘಂಟು ಹೇಳುತ್ತದೆ[9].

ವ್ಯಾಜೋಕ್ತಿ ಎಂದರೆ ಮೋಸದ ಮಾತು, ಕಪಟೋಕ್ತಿ ಎಂದಾಗುತ್ತದೆ[10].

ವ್ಯಾಜಸ್ತುತಿ ಎಂಬುದನ್ನು ಎರಡು ರೀತಿಯಲ್ಲಿ ಸಾಮಾನ್ಯವಾಗಿ ಗ್ರಹಿಸಲಾಗುತ್ತದೆ. ರುಯ್ಯಕ ಹೇಳುವಂತೆ–"ಸ್ತುತಿನಿಂದೆಗಳಿಂದ ನಿಂದೆ ಮತ್ತು ಸ್ತುತಿಗಳು ಗಮ್ಯವಾಗಿದ್ದರೆ ವ್ಯಾಜಸ್ತುತಿ" ಎನ್ನುತ್ತಾನೆ.

ಇದನ್ನೇ ಕೈಪಿಡಿಕಾರರು, ಸ್ತೋತ್ರದ ರೂಪದಲ್ಲಿ ನಿಂದೆಯೂ ನಿಂದೆಯ ರೂಪದಲ್ಲಿ ಸ್ತೋತ್ರವೂ ವರ್ಣಿತವಾದರೆ ಅದು ವ್ಯಾಜಸ್ತುತಿ ಎಂದು ಕರೆದಿದ್ದಾರೆ[11].

ದಂಡಿ ತನ್ನ ಕಾವ್ಯಾದರ್ಶದಲ್ಲಿ – "ವ್ಯಾಜವಾದ ನಿಂದೆಯು ನಿಜವಾಗಿಯೂ ಸ್ತುತಿ ಆಗಿದ್ದರೆ ವ್ಯಾಜಸ್ತುತಿ ಅಲಂಕಾರವಾಗುವುದೆಂದು ಹೇಳುತ್ತಾನೆ"[12]. ಆದರೆ ರುದ್ರಟ ಮತ್ತು ಅನಂತರದ ಅಲಂಕಾರಿಕರು ನಿಂದೆಯಿಂದ ಸ್ತುತಿ ಇಲ್ಲವೇ ಸ್ತುತಿಯಿಂದ ನಿಂದೆ ಆದಲ್ಲಿ ಈ ಅಲಂಕಾರ ಆಗುತ್ತದೆ ಎಂದಿದ್ದಾರೆ.

ಕೈಪಿಡಿಕಾರರು ವ್ಯಾಜಸ್ತುತಿಯ ಪ್ರಭೇದ ಹೇಳುವುದರ ಜತೆಗೆ ವ್ಯಾಜನಿಂದೆ ಎಂಬ ಇನ್ನೊಂದು ಬಗೆಯನ್ನು ಕುರಿತು ಹೇಳುತ್ತಾರೆ "ಇದರ ಪ್ರಕಾರ ಒಂದು ನಿಂದೆಯಿಂದ ಮತ್ತೊಂದು ನಿಂದೆ ಗೋಚರಿಸಿದರೆ ಅದು ವ್ಯಾಜನಿಂದೆ ಎಂದು ಹೇಳುತ್ತಾರೆ. ಇದಕ್ಕೆ ಲಕ್ಷ್ಯವಾಗಿ ... *ನಿನ್ನಾ / ಒಂದನೆ ತಲೆಯಂ ಚಿವುಟಿದನಂದದಱುಂ ಹರನೆನಾಡೆನಿಂದ್ಯಂ ವಿಧಿಯೇ* (ಬ್ರಹ್ಮನ ಐದು ತಲೆಗಳಲ್ಲಿ ಒಂದನ್ನು ಮಾತ್ರ ಚಿವುಟಿ ಹಾಕಿದ್ದು ಈಶ್ವರನ ತಪ್ಪು ಎಂದು ಈಶ್ವರನನ್ನು ನಿಂದಿಸುವುದರ ಮೂಲಕ ಬ್ರಹ್ಮನನ್ನು ನಿಂದಿಸಲಾಗಿದೆ. ಇಲ್ಲಿ ಬ್ರಹ್ಮನನ್ನೂ ನಿಂದಿಸಿದ್ದಾನೆ ಕವಿ ಈಶ್ವರನನ್ನೂ ನಿಂದಿಸಿದ್ದಾನೆ. ಹೀಗೆ ನಿಂದೆಯ ಮೂಲಕ ನಿಂದಿಸುವುದನ್ನು ವ್ಯಾಜನಿಂದೆ ಎಂದು ಕರೆಯಲಾಗಿದೆ)[13].

ಆದರೆ ಅಪ್ರತಿಮ ವೀರಚರಿತೆಯಲ್ಲಿ ವ್ಯಾಜಸ್ತುತಿ, ವ್ಯಾಜನಿಂದೆ ಎಂಬುದು ಎರಡು ವಿಧವೆಂದು ಹೇಳಿ ಕೈಪಿಡಿಕಾರರು ಹೇಳಿದ್ದಕ್ಕಿಂತ ಭಿನ್ನವಾಗಿ ಹೇಳಿದ್ದಾರೆ. ವ್ಯಾಜಸ್ತುತಿ ವ್ಯಾಜನಿಂದೆಗೆ ಕೈಪಿಡಿಯವರು ಕೊಟ್ಟ ಅರ್ಥದಲ್ಲಿ ವ್ಯಾಜಸ್ತುತಿಯಲ್ಲಿ ಸ್ತುತಿ

ಮೂಲಕ ನಿಂದೆ, ನಿಂದೆ ಮೂಲಕ ಸ್ತುತಿ ಸೇರುತ್ತದೆ. ಅದನ್ನು ಅಪ್ರತಿಮ ವೀರಚರಿತೆಯಲ್ಲಿ ವ್ಯಾಜಸ್ತುತಿ ವ್ಯಾಜನಿಂದೆ ಎಂದು ಪ್ರತ್ಯೇಕಿಸಿರುವುದರಿಂದ ಕೈಪಿಡಿಕಾರರು ಹೇಳುವ ವ್ಯಾಜನಿಂದೆ ವ್ಯಾಖ್ಯಾ (ನಿಂದೆಯಿಂದ ನಿಂದೆ ಮಾಡುವ ರೀತಿ) ಬೇರೆ ಆಗಿದೆ. ಅಪ್ರತಿಮವೀರಚರಿತೆಕಾರ ಹೇಳುವುದು ಹೀಗೆ:

ವ್ಯಾಜಸ್ತುತಿಯೆಂದು ವ್ಯಾಜನಿಂದೆ ಎಂದು ಎರಡು ಅಲಂಕಾರಗಳು ಸೂತ್ರ "*ಉಕ್ತಿರ್ವ್ಯಾಜಸ್ತುತಿರ್ನಿಂದಾಸ್ತುತಿಭ್ಯಾಂಸ್ತುತಿನಿಂದಯೋಃ ವೃತ್ತಿಃ ಒಂದು ವಸ್ತುವಂ ನಿಂದಿಸುವ ನೆವದಿಂದ ಸ್ತುತಿಸುವುದು ವ್ಯಾಜಸ್ತುತಿಯೆಂದು, ಸ್ತುತಿಸುವ ನೆವದಿಂ ನಿಂದಿಸುವುದು ವ್ಯಾಜನಿಂದೆಯೆಂದು ಪೇಳಲ್ಪಡೆಗುಂ*"

ಇದಕ್ಕೆ ಎರಡು ನಿದರ್ಶನಗಳನ್ನು ಪ್ರತ್ಯೇಕವಾಗಿ ಕೊಡಲಾಗಿದೆ.

ವ್ಯಾಜಸ್ತುತಿಗೆ (ಪದ್ಯದ ಅನುವಾದ ಕೊಟ್ಟಿದೆ)

"*ಇದರೊಳ್ ಚಿಕದೇವರಾಯಂ ಕುನ್ನತ್ತೂರ್, ಮದ್ದಗಿರಿ ಮಹಾರಾಜನ ದುರ್ಗಂ ಮುಂತಾದ ಗಿರಿದುರ್ಗಂಗಳನಾಕ್ರಮಿಸಿ ಪೆರ್ವಾಗಿಲಂ ಮುಱುದಾಯಾ ದುರ್ಗಾಧಿಪರ ಕನ್ನವೆಣ್ಗಳಂ ಬಂದಿಗೊಳ್ವನಿತರೊಳವರ್ ತಂತಮ್ಮ ದುರ್ಗಂಗಳತ್ತಣಿಂ ಪಲರ್ಮಡಿ ಪಿರಿದಾದ ಮಹಾಮೇರುವನಾಕ್ರಮಿಸಿಯೂ ಬಾಗಿಲಂ ಮುರಿದಲ್ಲಿಯ ಪೆಂಡಿರಂ ಪಿಡಿವರೆಂದು ಪಗೆವರ ಕೈಮೆಯಂ ಪಿರಿದಾಗಿ ಪೇೞ್ದು ಈ ಚಿಕದೇವ ಮಹರಾಯನ ಕೈಮಯಂ ಕಿಱುದೆಂದು ನಿಂದಿಪ ನೆವದಿಂದ ರಾಯಂ ಪಗೆವರಂ ಮಡುಪಿ ಅವರ ದುರ್ಗಂಗಳಂ ಗೆಲ್ಲಂಗೊಂಡನೆಂಬ ಸ್ತುತಿ ತೋರ್ಪುದರಿಂದ ಇದು ವ್ಯಾಜಸ್ತುತಿ ಎನಿಪುದು*".

ವ್ಯಾಜನಿಂದೆಗೆ (ಪದ್ಯಾನುವಾದ)

"*ಇದರೊಳ್ ಚಿಕದೇವರಾಯಂ ಕೈದುವೊಂದನಿಡುವಂ ಪಗೆರಾಯರ್ ಪಲವುಂ ಕೈದುಗಳನಿಡುವರ್, ಇವಂ ಕಾಡುವುದು ನುಡಿಮಾತ್ರಂ ಅವರ್ ಸರ್ವಸ್ವಮಂ ಕುಡುವರೆಂದು ಪಗೆವರಂ ಸ್ತುತಿಸುವ ನೆವದಿಂದಿ ಚಿಕದೇವ ಮಹಾರಾಯಂ ಕೈಯಿಟ್ಟನಿಡುವ ಮಾತ್ರದಿಂ ಪಗೆವರ್ ಭೀತಿಪಟ್ಟು ಕೈರುವವನೆಲ್ಲಮಂ ಬಿಸುಟು ನಂಬುಗೆವಡೆದು, ಸರ್ವಸ್ವಮಂ ಒಟ್ಟಿಸುವರೆಂಬ ನಿಂದೆ ತೋರ್ಪುದುಱುಂದದು ವ್ಯಾಜನಿಂದ*"[4].

ಆದರೆ ಇನ್ನೊಂದು ರೀತಿಯಲ್ಲಿ ಕೈಪಿಡಿಕಾರರು ರುಯ್ಯಕನ ವ್ಯಾಖ್ಯೆಯ ಹಿನ್ನೆಲೆಯಲ್ಲಿ ಅರ್ಥೈಸಿದ್ದಾರೆ ಎನ್ನಬಹುದು. ಆ ದೃಷ್ಟಿಯಿಂದ ಸರಿ ಎನ್ನಬಹುದಾಗಿದೆ.

ರುಯ್ಯಕನ ವ್ಯಾಖ್ಯೆಗೆ ಎಂ.ಎಂ. ಹೆಗಡೆ ಅವರು ಅಲಂಕಾರತತ್ತ್ವಗ್ರಂಥದಲ್ಲಿ ಕೊಟ್ಟ ವಿವರಣೆ ಕೈಪಿಡಿಕಾರರ ಮಾತಿಗೆ ಸಮರ್ಥನೆ ಒದಗಿಸುತ್ತದೆ:

"ವ್ಯಾಜಸ್ತುತಿಯೆಂಬ ಸಮಸ್ತಪದವನ್ನು ಎರಡು ರೀತಿಯಲ್ಲಿ ವಿಗ್ರಹಿಸಲಾಗುತ್ತಿದೆ.

(1) ವ್ಯಾಜರೂಪಾಸ್ತುತಿ: ಸ್ತುತಿಯಾಗಿ ತೋರುವ ನಿಂದೆ

(2) ವ್ಯಾಜೇನ (ನಿಂದಾಮುಖೇನ) ಸ್ತುತಿ: ನಿಂದೆಯ ಮೂಲಕವಾಗಿ ಸ್ತುತಿ ಸಾಮಾನ್ಯವಾಗಿ ಸ್ತುತಿಯೆಂಬ ಪದಕ್ಕೆ ಪ್ರಶಂಸೆ ಅಥವಾ ಹೊಗಳಿಕೆ ಎಂಬ ಅರ್ಥವಿದೆಯಾದರೂ ಇಲ್ಲಿ ಅದನ್ನು ಕಥನವೆಂಬ ಅರ್ಥದಲ್ಲಿ ಬಳಸಲಾಗಿದೆ. ಸ್ತುತಿ ಅಥವಾ ನಿಂದೆಗಳು ಇಲ್ಲಿ ಪ್ರಧಾನ ಸ್ತುತಿಯು ವಾಚ್ಯವಾಗಿದ್ದರೆ ನಿಂದೆಯು ಗಮ್ಯವಾಗಿರುತ್ತದೆ. ನಿಂದೆಯು ವಾಚ್ಯವಾಗಿದ್ದರೆ ಸ್ತುತಿಯು ಗಮ್ಯವಾಗಿರುತ್ತದೆ. ಮುಸುಕಿನಲ್ಲಿ ಗುದ್ದುಕೊಡುವ ರೀತಿ ಇದು.

ವ್ಯಾಜಸ್ತುತಿಯನ್ನು ಅಪ್ರಸ್ತುತ ಪ್ರಶಂಸೆಯಿಂದ ಬೇರ್ಪಡಿಸುವುದಕ್ಕಾಗಿ ನಿಂದೆ ಮತ್ತು ಸ್ತುತಿಗಳಿದ್ದಾಗ ಮಾತ್ರ ವ್ಯಾಜಸ್ತುತಿಯನ್ನು ಹೇಳಬೇಕಾಗುತ್ತದೆಯೆಂದು ಹೇಳುತ್ತಾರೆ. ಇಲ್ಲಿ ವ್ಯಂಗ್ಯಾರ್ಥವಿದೆಯಾದರೂ ವಾಚ್ಯಾರ್ಥದ ಚಮತ್ಕಾರಕ್ಕೆ ಅದು ಪೋಷಕವಾಗಿರುವುದರಿಂದ ಇದು ಧ್ವನಿಕಾವ್ಯವಾಗುವುದಿಲ್ಲ[15].

ಈ ಸಂದರ್ಭದಲ್ಲಿ ದಂಡಿಯು ಕಾವ್ಯಾದರ್ಶವನ್ನು ಅನುಸರಿಸಿ ಕವಿರಾಜಮಾರ್ಗಕಾರ ವ್ಯಾಜಸ್ತುತಿಯನ್ನು ವಿವರಿಸಿರುವುದು ಗಮನಾರ್ಹವಾಗಿದೆ. ದಂಡಿಯ ಲಕ್ಷ್ಯ ಪದವನ್ನು ಆಧರಿಸಿ ಕವಿರಾಜಮಾರ್ಗಕಾರನು ಉದಾಹರಣೆಯನ್ನು ಕೊಟ್ಟಿದ್ದಾನೆ. ಹೀಗೆ ಕೊಡುವಲ್ಲಿ ಶ್ಲೇಷಾರ್ಥವನ್ನು ಗಮನಿಸಿದಾಗ ಗುಣವರ್ಣನೆ ಆಗುತ್ತದೆ. ಶಾಬ್ದಿಕವಾಗಿ ಗಮನಿಸಿದರೆ ದೋಷವರ್ಣನೆ ಆಗುತ್ತದೆ. ಆದ್ದರಿಂದಲೇ ಕವಿರಾಜಮಾರ್ಗಕಾರನ ವ್ಯಾಖ್ಯಾನ ಹೀಗಿದೆ: "ಗುಣಸಮೂಹವನ್ನು ದೋಷವೆಂದು ತೋರುವ ಹಾಗೆ ಅತಿಶಯವಾಗಿ ಹೇಳುವುದು ವ್ಯಾಜಸ್ತುತಿ ಇದು ಶಬ್ದಾರ್ಥಗಳಿಂದ ನಿಶ್ಚಿತಗೊಂಡಿದೆ"[16]. ಈ ಸಂದರ್ಭದಲ್ಲಿ ಗಮನಿಸಬೇಕಾದ ಮಾತೆಂದರೆ ಭಾಮಹ ಮತ್ತು ಉದ್ಭಟರ ಪ್ರಕಾರ ನಿಂದೆಯ ಸೋಗಿನಲ್ಲಿ ಬರುವ ಸ್ತುತಿಯೆಂದೇ ವ್ಯಾಜಸ್ತುತಿ[17] ಎನ್ನಲಾಗಿದೆ. ಇನ್ನು ವ್ಯಾಜೋಕ್ತಿ ಎಂಬುದು ವ್ಯಾಜಸ್ತುತಿ ಬೇರೆ ಎಂದು ತಿರುಮಲಾರ್ಯನ ಅಪ್ರತಿಮವೀರಚರಿತದಲ್ಲಿ ಹೇಳಲಾಗಿದೆ[18]. ಏಕೆಂದರೆ '*ಕಾರಣವಲ್ಲದಾದಂಕಾರಣವಾಗಿಪೇೞ್ದು ತನ್ನ ಆಕಾರಮಂ ಮೆಱೆಯ್ವುದು ವ್ಯಾಜೋಕ್ತಿ ಎನಿಪುದು*'. (ಇದಕ್ಕೆ ತಿರುಮಲಾರ್ಯ ಕೊಟ್ಟಿರುವ ಉದಾಹರಣೆ "*ಮಹೀಶೂರ ಅರಸರುಮೀಗಂ ಕೊಯ್ದರೆಮದು ಪೇೞದೆ ಅವರಂ ಗೆಲ್ವದಿರ್ಕೆ ತಾನೇ ತನ್ನ ಮೂಗಂ ಕೊಯ್ದು ಭವಾನಿಗೇಱಿಸಿದೆನೆಂಬು ಪೇೞ್ದು ಮಱೆಸಿದನ್*".)

ಇನ್ನು ಕನ್ನಡ ಆಲಂಕಾರಿಕರಲ್ಲಿ ಹಲವರು ಭಾಮಹ ಉದ್ಭಟರಂತೆ ವ್ಯಾಜಸ್ತುತಿಯನ್ನು ಒಮ್ಮುಖದಿಂದ ನೋಡಿದ್ದಾರೆ ಎನ್ನಬಹುದು ಎಂದರೆ ನಿಂದೆಯ ಮೂಲಕ ಸ್ತುತಿ ಮಾಡುವುದೇ ವ್ಯಾಜಸ್ತುತಿ ಎಂದಿದ್ದಾರೆ. ಆದರೆ ಬಹುಮಂದಿ ವ್ಯಾಜಸ್ತುತಿ

ಎಂದರೆ ಸ್ತುತಿ ಮೂಲಕ ನಿಂದೆ, ನಿಂದೆ ಮೂಲಕ ಸ್ತುತಿ ಎಂಬ ವ್ಯಾಖ್ಯೆಯನ್ನು ಒಪ್ಪಿದ್ದಾರೆ. ಕನ್ನಡ ಕುವಲಯಾನಂದಕಾರನೂ ಜಾಯಗೌಂಡನ ಕನ್ನಡ ಕುವಲಯಾನಂದಕಾರ ಕೈಪಿಡಿಯಲ್ಲಿ ಹೇಳಿಕೆಯಂತೆ, ವ್ಯಾಜನಿಂದೆ ಎಂದರೆ ಸ್ತುತಿಯ ಮೂಲಕ ನಿಂದೆ ಅಲ್ಲ ನಿಂದೆಯ ಮೂಲಕ ಅನ್ಯನಿಂದೆ ಮಾಡುವುದನ್ನು ವ್ಯಾಜನಿಂದೆ ಅಲಂಕಾರವೆಂದು ಕರೆದಿದ್ದಾರೆ.

"*ಆಲಿಸಿನ್ನು ಅನ್ಯರ ನಿಂದೆಯೊಳ್ ನಿಂದೆಯು ಪೇೞಲ್ಕೆ ವ್ಯಾಜನಿಂದೆಯುಂ*" ಎಂದಿದ್ದಾನೆ.

ಇದಕ್ಕೆ ಕೊಟ್ಟ ನಿದರ್ಶನ ಹೀಗಿದೆ:

ಕಾಕವೇ ನಿನ್ನ ವರ್ಣ
ಕೋಕಿಲೆಯವೋಲಿಹುದು
ಯಾಕೆ ಶಬ್ದಂಗೈಯ್ಯಲೊಲ್ಲೆ+ಈಗಲುಲೋಕದೊಳು ಪುಟ್ಟಿಸಿ ವಿ
ವೇಕಿಯೆನಿಸಿದೆ ವ್ಯರ್ಥ
ಕಾಕಬೊಮ್ಮನು ತಾ ಪರಮ ನಿಂದಿತನು[19].

ಇನ್ನು ನಾಗವರ್ಮನು ಕಾವ್ಯಾವಲೋಕನದಲ್ಲಿ ವ್ಯಾಜಸ್ತುತಿಗೆ ವ್ಯಾಜಸಂಸ್ತವ ಎಂದು ಪರ್ಯಾಯಪದ ಬಳಸಿದ್ದಾನೆ.

"*ತಗುಳ್ ಪೞುವಂತೆ ಕೆಯ್ಮಿಗೆ*
ಪೊಗೞ್ವುದು ತಾಂ ವ್ಯಾಜಸಂಸ್ತವಾಖ್ಯಾಮೆನಿಕ್ಕು" (755– ಪು.167)

ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ವ್ಯಾಜಸ್ತುತಿ, ಶ್ಲೇಷಾಲಂಕಾರ, ಉಪಮಾಲಂಕಾರ, ರೂಪಕಾಲಂಕಾರಗಳಿಗೆ ಸಂಬಂಧಿಸಿದಂತೆಯೂ ಬರುತ್ತದೆ. ಉದಾಹರಣೆಗೆ ಕವಿರಾಜಮಾರ್ಗಕಾರ (3–26)ರಲ್ಲಿ ಅಪ್ರಕೃತವಸ್ತುವಿನ ಗುಣಧರ್ಮಗಳನ್ನು ಪ್ರಕೃತವಸ್ತುವಿನಲ್ಲಿ ವ್ಯಾಜಾಂತರದಿಂದ ಆರೋಪಿಸುವುದನ್ನು ವ್ಯಾಜರೂಪಕ ಎಂದು ಕರೆದಿದ್ದಾನೆ.

"*ನಗೆಯೆಂಬ ನೆನದೆ ಬೆಳಗೀ ಮೊಗವೆಂಬೀನೆವದೆ*
ತಿಂಗಳಬಳಗೆಸೆದಾದಂ ಸೊಗಯಿಸಿ ತೋರ್ಕುಂ
ಲೋಚನಯುಗವೆಂಬೀ ನೆನದೆ ಲಕ್ಷ್ಯಮೆನೆ
ತದ್ವ್ಯಾಜಂ (ವ್ಯಾಜರೂಪಕಂ)" ಎಂಬಲ್ಲಿ ರೂಪಕಾಲಂಕಾರಕ್ಕೆ ಸಂಬಂಧಿಸಿದಂತೆ ಹೇಳಿದ್ದನ್ನು ಗಮನಿಸಬಹುದು.

ಈ ಸಂದರ್ಭದಲ್ಲಿ ರಸಗಂಗಾಧರದ ಮಾತುಗಳನ್ನು ಗಮನಿಸುವುದು ಅವಶ್ಯವಿದೆ.

ಜಗನ್ನಾಥಪಂಡಿತನು ವ್ಯಾಜಸ್ತುತಿ ಅಲಂಕಾರಗಳನ್ನು ಕುರಿತು ವ್ಯಾಖ್ಯಾನಿಸುತ್ತಾ – "ವ್ಯಾಜಸ್ತುತಿ ಅಲಂಕಾರ ಬೇರೆ ಅಲಂಕಾರಗಳೊಡನೆ ಸೇರಿರುತ್ತದೆ ಎಂದು ಹೇಳಿ ಸಮಾಸೋಕ್ತಿ, ಅಪ್ರಸ್ತುತ ಪ್ರಶಂಸೆ ಅರ್ಥಾಂತರ ನ್ಯಾಸಗಳಲ್ಲಿ ಕಂಡುಬರುತ್ತವೆ ಎಂಬುದನ್ನು ಸೋದಾಹರಣವಾಗಿ ತಿಳಿಸಿದ್ದಾನೆ. ಅಲ್ಲದೆ ಕುವಲಯಾನಂದಕಾರ ಹೇಳುವ ವ್ಯಾಜಸ್ತುತಿ ನಾಲ್ಕು ಪ್ರಭೇದಗಳನ್ನು ಗುಣೀಭೂತ ವ್ಯಂಗ್ಯದ ಪ್ರಕಾರಗಳಲ್ಲಿ ಸೇರಿಸಬೇಕೆಂದು ಹೇಳುತ್ತಾನೆ"[21ಆ].

ಹೀಗೆ ಅಲಂಕಾರಶಾಸ್ತ್ರದ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳನ್ನು ಸಮೀಕ್ಷಿಸಿದಾಗ ಕಂಡುಬಂದ ಕೆಲವು ಗಮನಾರ್ಹ ಅಂಶಗಳು ಹೀಗಿವೆ:

1. ಕನ್ನಡದ ಆಲಂಕಾರಿಕರೆಲ್ಲರೂ ಸಾಮಾನ್ಯವಾಗಿ ಸಂಸ್ಕೃತ ಆಲಂಕಾರಿಕರ ಗ್ರಂಥಗಳನ್ನು ಅನುವಾದಿಸಿಕೊಂಡಿದ್ದಾರೆ ಅಥವಾ ಆಧಾರವಾಗಿಟ್ಟುಕೊಂಡು ತಮ್ಮ ಅಲಂಕಾರಶಾಸ್ತ್ರಗ್ರಂಥಗಳನ್ನು ರಚಿಸಿದ್ದಾರೆ.

2. ಆಧುನಿಕ ಕಾಲದಲ್ಲಿ ಅಲಂಕಾರಗ್ರಂಥಗಳನ್ನು ಕುರಿತು ವಿಮರ್ಶಾತ್ಮಕವಾಗಿ ಕೆಲವರು ಗ್ರಂಥಗಳನ್ನು ರಚಿಸಿದ್ದಾರೆ. ಉದಾಹರಣೆಗೆ ಡಾ। ಆರ್. ಗಣೇಶ್, ಎ.ಆರ್.ಕೃ., ತೀ.ನಂ.ಶ್ರೀ., ಎಂ.ವಿ. ಹೆಗಡೆ, ಡಾ। ಕೆ.ಕೃಷ್ಣಮೂರ್ತಿ ಅವರ ಗ್ರಂಥಗಳನ್ನು ಗಮನಿಸಬಹುದು.

3. ಹಳಗನ್ನಡದ ಗದ್ಯದಲ್ಲಿ, ಪದ್ಯರೂಪದಲ್ಲಿ ರಚಿತವಾಗಿದ್ದರೆ, ಹೊಸಗನ್ನಡದಲ್ಲಿ ಗದ್ಯರೂಪದಲ್ಲಿ ಮಾತ್ರ ಆಲಂಕಾರಿಕ ಗ್ರಂಥಗಳು ರಚಿತವಾಗಿದೆ.

4. ಬಹುಮಟ್ಟಿಗೆ ಸಂಸ್ಕೃತ ನಿದರ್ಶನಗಳನ್ನೇ ಅಲಂಕಾರಗಳಿಗೆ ಲಕ್ಷ್ಯಗಳನ್ನಾಗಿ ಅನುವಾದಿಸಿ ಕನ್ನಡದಲ್ಲಿ ಕೊಟ್ಟಿರುವುದನ್ನು ಕಾಣಬಹುದಾದರೂ ಸ್ವತಂತ್ರ ಪದ್ಯ ರಚನೆಗಳನ್ನು ಕಾಣಬಹುದು. ಬಹುಮಟ್ಟಿಗೆ ಪದ್ಯಗಳು ಹಳಗನ್ನಡದ ಪದ್ಯಗಳೇ ನಿದರ್ಶನಗಳಾಗಿವೆ. ನಾಗವರ್ಮ, ಉದಯಾದಿತ್ಯ, ತಿರುಮಲಾರ್ಯ ಜಾಯಿಗೌಂಡ ಮೊದಲಾದ ಗ್ರಂಥಗಳನ್ನು ಇದಕ್ಕೆ ನಿದರ್ಶನವಾಗಿ ಗಮನಿಸಬಹುದು.

5. ಅಪರೂಪಕ್ಕೆ ನಡುಗನ್ನಡ ಉದಾಹರಣೆಗಳನ್ನು ಕಾಣಬಹುದು. ಹೊಸಗನ್ನಡದ ಪದ್ಯಗಳನ್ನು ಅಲಂಕಾರಗಳಿಗೆ ಉದಾಹರಣೆಯಾಗಿ ಕೊಟ್ಟ ಪ್ರಯತ್ನವನ್ನು ಎಂ.ಎಂ. ಹೆಗಡೆ ಅವರ ಗ್ರಂಥ ಅಲಂಕಾರತತ್ತ್ವದಲ್ಲಿ ಕಾಣುತ್ತೇವೆ. ಇದು ಶ್ಲಾಘನೀಯ ಪ್ರಯತ್ನ.

6. ಈ ಎಲ್ಲ ಗ್ರಂಥಗಳಲ್ಲಿ ಬಹುಮಟ್ಟಿಗೆ ವ್ಯಾಜಸ್ತುತಿ ಅಲಂಕಾರ ಪ್ರಸ್ತಾಪವಾಗಿದೆ.

7. ವ್ಯಾಜಸ್ತುತಿಯನ್ನು ಎಲ್ಲ ಆಲಂಕಾರಿಕರು ಒಂದೇ ರೀತಿ ವ್ಯಾಖ್ಯಾನಿಸಿಲ್ಲ, ಸ್ವಲ್ಪಮಟ್ಟಿಗೆ ಭೇದ ಕಾಣುತ್ತದೆ. ಉದಾಹರಣೆ ವ್ಯಾಜಸ್ತುತಿ ಎಂದರೆ ನಿಂದೆ ಮೂಲಕ ಸ್ತುತಿ ಮಾಡುವುದಕ್ಕೆ ಎಂದು ಅರ್ಥೈಸಿದ್ದಾರೆ ಮತ್ತೆ ಕೆಲವರು ನಿಂದೆ ಮೂಲಕ ಸ್ತುತಿ ಮತ್ತು ಸ್ತುತಿ ಮೂಲಕ ನಿಂದೆ ವ್ಯಾಜಸ್ತುತಿ ಆಗುತ್ತದೆ ಎಂದಿದ್ದಾರೆ.

8. ವ್ಯಾಜಸ್ತುತಿಯನ್ನು ನಿಂದಾಸ್ತುತಿ ವ್ಯಾಜರೂಪಕ, ವ್ಯಾಜಸಂಸ್ತವ ಇತ್ಯಾದಿ ಹೆಸರಿನಿಂದ ಕರೆದವರಿದ್ದಾರೆ.

9. ಅಲಂಕಾರಗಳ ವರ್ಗೀಕರಣ ಹಲವು ಬಗೆ ಆಗಿದ್ದು ವ್ಯಾಜಸ್ತುತಿಯನ್ನು ಒಬ್ಬೊಬ್ಬರು ಒಂದೊಂದು ವರ್ಗಕ್ಕೆ ಸೇರಿಸಿದ್ದಾರೆ.

10. ವ್ಯಾಜಸ್ತುತಿಗೆ, ವ್ಯಾಜೋಕ್ತಿಗೆ ತುಲ್ಯಯೋಗಿತಾಲಂಕಾರಕ್ಕೆ ಶ್ಲೇಷಾಲಂಕಾರ, ರೂಪಕಾಲಂಕಾರ ಇತ್ಯಾದಿಯಾಗಿ, ಸಾದೃಶ್ಯ ಅಂಶಗಳ ಹಿನ್ನೆಲೆಯಲ್ಲಿ ವ್ಯತ್ಯಾಸಗಳನ್ನು ಅದರ ಲಕ್ಷಣಗಳನ್ನು ಹೇಳುವಾಗ ಆಲಂಕಾರಿಕರು ಗುರುತಿಸಿದ್ದಾರೆ.

ಒಟ್ಟಿನಲ್ಲಿ ಸಂಸ್ಕೃತ ಮತ್ತು ಕನ್ನಡ ಅಲಂಕಾರ ಗ್ರಂಥಗಳಲ್ಲಿ ಪ್ರಸ್ತಾಪಿತವಾದ ವ್ಯಾಜಸ್ತುತಿಯನ್ನು ಗಮನಿಸಿದಾಗ ಸಂಸ್ಕೃತದಲ್ಲಿ ಕಂಡುಬರುವ ವ್ಯಾಜಸ್ತುತಿಯ ಎಲ್ಲ ಪ್ರಭೇದಗಳೂ ಕನ್ನಡದ ಅನುವಾದಿತ ಹಾಗೂ ಸ್ವತಂತ್ರವಾಗಿ ರಚಿತವಾದ ಗ್ರಂಥಗಳಲ್ಲಿ ಕಾಣಬಹುದಾಗಿದೆ.

ಇಂಥ ವಿಶಿಷ್ಟ ವ್ಯಾಜಸ್ತುತಿ ಅಲಂಕಾರ ಹಳಗನ್ನಡದ ಕಾವ್ಯಗಳಲ್ಲಿ ಷಟ್ಪದಿ ಸಾಂಗತ್ಯ ಮೊದಲಾದ ಛಂದಗಳಲ್ಲಿ ರಚಿತವಾದ ಕುಮಾರವ್ಯಾಸ, ರತ್ನಾಕರವರ್ಣಿ, ಚಾಮರಸ, ಚಾಟು ವಿಠ್ಠಲನಾಥ ಮೊದಲಾದ ನಡುಗನ್ನಡದ ಕಾವ್ಯಗಳಲ್ಲಿ ಹೇಗೆ ಕಾಣಿಸಿಕೊಂಡಿದೆ ಎಂಬುದು ಪ್ರತ್ಯೇಕ ಅಧ್ಯಯನ ವಿಷಯವಾಗಿದೆ. ಇಲ್ಲಿ ಹರಿದಾಸರ ಕೀರ್ತನೆಗಳಲ್ಲಿ, ಉಗಾಭೋಗ, ಸುಳಾದಿಗಳಲ್ಲಿ ಹೇಗೆ ಕಾಣಿಸಿಕೊಂಡಿದೆ ಎಂಬುದನ್ನು ಮಾತ್ರ ವಿವೇಚಿಸಲಾಗಿದೆ. ಈ ವಿಶ್ಲೇಷಣೆಯನ್ನು ಮುಂದಿನ ಅಧ್ಯಾಯದಲ್ಲಿ ವಿಶದವಾಗಿ ಕಾಣಬಹುದು.

– – –

ಅಧ್ಯಾಯ ಮೂರು

ಅಡಿಟಿಪ್ಪಣಿಗಳು

1. ಕನ್ನಡ ನಿಘಂಟು ಸಂ.1 (ಅ–ಜಾ), ಪು.413, ಕ.ಸಾ.ಪ., 1970.

2. ಭಾರತೀಯ ಕಾವ್ಯ ಮೀಮಾಂಸೆ, ತೀ.ನಂ.ಶ್ರೀ, ಪು.7. ಅಲಂಕಾರಶಾಸ್ತ್ರಕ್ಕೆ ಸಂಬಂಧಿಸಿದಂತೆ ಇನ್ನೆರಡು ಪದಗಳು ಗಮನಾರ್ಹವಾಗಿದೆ (1) ಅಲಂಕಾರ ದೋಷ (ಶಬ್ದಾರ್ಥ ವೈಚಿತ್ರ್ಯಗಳ ಕಲ್ಪನೆಯಲ್ಲಿಯೂ, ಚಮತ್ಕಾರ ಕಲ್ಪನೆಯಲ್ಲಿ ತಪ್ಪಿರುವುದು (ಕೈಪಿಡಿ, ಪು.226, ಅಡಿಟಿಪ್ಪಣಿ)

   ಅಲಂಕಾರ ಪ್ರಸ್ಥಾನ (ಕಾವ್ಯದಲ್ಲಿ ಅಲಂಕಾರಗಳೇ ಮುಖ್ಯವೆಂದು ಎಣಿಸುವವರ ದಿಕ್ಷ ವಾಮಹನೂ ಅವನನ್ನು ಅನುಸರಿಸಿ ಉದ್ಭಟ ಮೊದಲಾದವರು ಅಲಂಕಾರಗಳೇ ಮೂಕಯವೆಂದೆ ಎಣಿಸಿದರು .... ಇವರ ಪಕ್ಷವನ್ನು ಅಲಂಕಾರ ಪ್ರಸ್ಥಾನವೆಂದು ಕರೆಯುವರು. (ಭಾರತೀಯ ಕಾವ್ಯಮೀಮಾಂಸೆ, ತೀ.ನಂ.ಶ್ರೀ. ಪು.38)

3. ಕನ್ನಡದಲ್ಲಿ ಅಲಂಕಾರಶಾಸ್ತ್ರ – ಎನ್, ರಂಗನಾಥಶರ್ಮ (ಗ್ರಂಥಸಾಹಿತ್ಯ ವಿಹಾರ ಉಪನ್ಯಾಸ ಸಂಕಲನ) ಕ.ಸಾ.ಪ. 1977 ಪು.21.

4.5. ಪಾಂಡುರಂಗ ವಾಮನ ಕಾಣೆ: ಅಲಂಕಾರಶಾಸ್ತ್ರ ಪು,19–20, ಪ್ರ.ದುಮಳ ಗ್ರಂಥಪ್ರಕಾಶನ ಮಂದಿರ, ಮೈಸೂರು, ಅನು. ಕೌಲಗಿ ಶೇಷಾಚಾರ್ಯ, 1948.

6. ಡಾ. ಆರ್. ಗಣೇಶ್, ಅಲಂಕಾರಶಾಸ್ತ್ರ ಪು.67, ಪ್ರಭವನದ ಗಾಂಧಿ ಕೇಂದ್ರ, ಬೆಂಗಳೂರು, 2007.

7. ಕನ್ನಡ ಕೈಪಿಡಿ, ಅಲಂಕಾರಶಾಸ್ತ್ರದ ಚರಿತ್ರೆ, ಪು.163, ಮೈ.ವಿ.ವಿ., 1966.

8. ಕನ್ನಡ ಕೈಪಿಡಿ, ಅಲಂಕಾರಶಾಸ್ತ್ರದ ಚರಿತ್ರೆ, ಪು.249, ಅಲಂಕಾರಗಳು, ಪೀಠಿಕೆ, ಮೈ.ವಿ.ವಿ., 1966.

9. ಕನ್ನಡ ಕೈಪಿಡಿ, ಪು.256, ಅರ್ಥಾಲಂಕಾರಗಳು ನೋಡಿ.

10. ಕನ್ನಡ ನಿಘಂಟು, ಕ.ಸಾ.ಪ. ಪ್ರ. 8051, ಸಂ.8.

11. ಕನ್ನಡ ಕೈಪಿಡಿ, ಪು.288, ಈ ವ್ಯಾಖ್ಯೆ 'ಉತ್ತೇರ್ವ್ಯಾಜಸ್ತುತಿರ್ನಿಂದಾಸ್ತುತಿಭ್ಯಾಂ ಸ್ತುತಿನಿಂದಾಂಯೋಃ' ಎಂಬ ಸಂಸ್ಕೃತ ಅಲಂಕಾರಿತನ ಮಾತಿನ ಅನುವಾದವಾಗಿದೆ.

12. ದಂಡಿ ಕಾವ್ಯಾದರ್ಶ (2–346). ಕಾವ್ಯಾವಲೋಚನಾದ ಟಿಪ್ಪಣಿಗಳು ಪು.319, ನಾಗವರ್ಮ ಕಾವ್ಯಾವಲೋಚನ ಸಂ. ಶಿ.ಶಿ.ಬಸವನಾಳ+ಕೆಲವು ಶಂಕರನಾರಾಯಣ 1939, ಪ್ರ: ಲಿಂಗಾಯತ ಅಭಿವೃದ್ಧಿ ಸಂಸ್ಥೆ, ಧಾರವಾಡ.

13. ಈ ವ್ಯಾಜನಿಂದೆಯ ವ್ಯಾಖ್ಯೆ *"ನಿಂದಾಯಾನಿಂದಯಾ ವ್ಯಕ್ತಿರ್ವ್ಯಾಜನಿಂದೇತಿ ಗೀಯತೇ"* ಎಂಬ ಉಕ್ತಿ ಮೂಲವಾಗಿದೆ (ಕೈಪಿಡಿ ಅಡಿಟಿಪ್ಪಣಿ ಪ್ರ.288)

14. "ಅಪ್ರತಿಮವೀರಚರಿತೆ ಪು.67–68, ವ್ಯಾಜಸ್ತುತಿ ವ್ಯಾಜನಿಂದಾ ಅಲಂಕಾರಗಳು, ಸಂ.ವಿದ್ವಾನ್ ಕೋಣನೂರು ನರಸಿಂಹಶಾಸ್ತ್ರಿ, ಜಿ.ಆರ್.ಶ್ರೀನಿವಾಸ ಅಯ್ಯಂಗಾರ್, 1972, ಶಿಕ್ಷಣ ಇಲಾಖೆ, ಬೆಂಗಳೂರು.

15. ವ್ಯಾಜಸ್ತುತಿ, ಪು.108, ಅಲಂಕಾರತತ್ತ್ವ, ಎಂ.ಎಂ.ಹೆಗಡೆ, ಸಮಾಜ ಪುಸ್ತಕಾಲಯ, ಧಾರವಾಡ, 2001.

16. ಕವಿರಾಜಮಾರ್ಗ, ಎಂ.ವಿ. ಸೀತಾರಾಮಯ್ಯ, ಬಿ.ಎಂ.ಶ್ರೀ ಪ್ರತಿಷ್ಠಾನ, ಬೆಂಗಳೂರು, ಪು.333ರಲ್ಲಿ ವಿವರಣೆ ನೋಡಿ:

    ಅತಿಶಯಮಾಗಿರೆ ಗುಣಸಂ ।
    ತತಿಯ ದೋಷ ಮನೆಪೇಟ್ಟಿವೋಲ್ ಪೇಯ್ವಿದು ನಿ
    ಶ್ಚಿತ ಶಿಬ್ದಾರ್ಥಂ ವ್ಯಾಜ್ಯ
    ಸ್ತುತಿಯೆಂಬುದುಮದಱ ಮಾಳ್ಕೆ ಮತ್ತಿಂತಕ್ಕುಂ III-161

17. ಕನ್ನಡ ಕಾವ್ಯಪ್ರಕಾಶ: ಡಾ. ಕೆ. ಕೃಷ್ಣಮೂರ್ತಿ ಪು.402, 10ನೇ ಉಲ್ಲಾಸ (25) ವ್ಯಾಜಸ್ತುತಿ, ಶಾರದ ಮಂದಿರ, 1973.

18. ಅಪ್ರತಿಮವೀರಚರಿತೆ, ಪು.67 ಮತ್ತು 114.

19. ಕನ್ನಡ ಕುವಲಯಾನಂದ, ಪು.68, ವ್ಯಾಜನಿಂದಾಲಂಕಾರ, ಸಂ.ಶಿ.ಚೆ. ನಂದೀಮಠ, 1970, ಸಂಪಾದಕರು, ಕ.ವಿ.ವಿ. ಧಾರವಾಡ.

20. ನಾಗವರ್ಮನ ಕಾವ್ಯಾವಲೋಕನ, ಸು.ಶಿ.ಬಸವನಾಳ+ಕೇಂದ್ರ, ಪು.167, ಪ್ಯಾರ ಸಂ.755, ಅರ್ಥಾಲಂಕಾರ ಪ್ರಕರಣಂ.

21. ಕವಿರಾಜಮಾರ್ಗದಲ್ಲಿ ತೃತೀಯ ಪರಿಚ್ಛೇದದಲ್ಲಿ ನಿಂದೋಪಮೆಯನ್ನು ಗಮನಿಸಬಹುದು.

21ಅ. ಕನ್ನಡ ರಸಗಂಗಾಧರ (ಜಗನ್ನಾಥಪಂಡಿತ) ಅನು. ಡಾ. ಟಿ.ಜಿ. ಸಿದ್ಧಪ್ಪಾರಾಧ್ಯ, ಗುಬ್ಬಿ ಚನ್ನಬಸವೇಶ್ವರ ಗ್ರಂಥಮಾಲೆ, ವಿಶ್ವೇಶ್ವರಪುರಂ, ಬೆಂ., 1965, ಪು.408-409.

ಅಧ್ಯಾಯ ನಾಲ್ಕು

ಹರಿದಾಸರ ಕೀರ್ತನೆಗಳಲ್ಲಿ ವ್ಯಾಜಸ್ತುತಿ ಅಲಂಕಾರ ವಿಶ್ಲೇಷಣೆ

ಕನ್ನಡ ಕಾವ್ಯಸಾಹಿತ್ಯವನ್ನು ಪಂಪನಿಂದ ಕುವೆಂಪುವರೆಗೆ ಸಮೀಕ್ಷಿಸಿದಾಗ ಕಾವ್ಯಕ್ಕೆ ಶೋಭಾಯಮಾನಕರವಾಗಿ ಜನರಿಗೆ ಕಾವ್ಯವನ್ನು ಹೃದ್ಯವಾಗಿ ಮುಟ್ಟಿಸುವಲ್ಲಿ ಸಾಧನವಾದ ಶಬ್ದಾಲಂಕಾರ ಅರ್ಥಾಲಂಕಾರಗಳ ಬಳಕೆಯನ್ನು ಬಹುಮಟ್ಟಿಗೆ ಎಲ್ಲ ಕೃತಿಗಳಲ್ಲೂ ಕಾಣುತ್ತೇವೆ.

ಇದಕ್ಕೆ ಶ್ರೇಷ್ಠ ನಿದರ್ಶನವೆಂದರೆ ಕನ್ನಡದಲ್ಲಿ ಅಲಂಕಾರಶಾಸ್ತ್ರವನ್ನು ಕುರಿತು ವಿವೇಚಿಸಿರುವ ಕನ್ನಡ ಆಲಂಕಾರಿಕ ಗ್ರಂಥಗಳಲ್ಲಿ ಉದಾಹರಿಸಿರುವ ಕನ್ನಡ ಉಲ್ಲೇಖಗಳನ್ನು ಗಮನಿಸಬಹುದು. ಕವಿರಾಜಮಾರ್ಗಂ, ಅಪ್ರತಿಮವೀರಚರಿತಂ ಉದಯಾದಿತ್ಯಾಲಂಕಾರಂ, ಕನ್ನಡ ಕುವಲಯಾನಂದ, ಕರ್ನಾಟಕ ಚಂದ್ರಾಲೋಕ, ಕಾವ್ಯಾವಲೋಕನಂ, ನರಪತಿಚರಿತ, ಮಾಧವಾಲಂಕಾರಂ, ರಸರತ್ನಾಕರಂ ಮುಂತಾದ ಗ್ರಂಥಗಳಲ್ಲಿರುವ ಕನ್ನಡ ವೃತ್ತಕಂದಗಳ ಪದ್ಯಗಳಲ್ಲಿ ಎಲ್ಲ ಬಗೆ ಶಬ್ದಾಲಂಕಾರ ಅರ್ಥಾಲಂಕಾರಗಳಿಗೆ ಲಕ್ಷ್ಯ-ಲಕ್ಷಣಗಳನ್ನು ಕನ್ನಡದಲ್ಲಿ ರಚಿಸಿರುವುದನ್ನು ಕಾಣಬಹುದು. ಈ ಎಲ್ಲ ಗ್ರಂಥಗಳಲ್ಲಿ ಬಹುಮಟ್ಟಿಗೆ ವ್ಯಾಜಸ್ತುತಿಯನ್ನು ಕುರಿತು ರಚಿಸಿರುವ ಲಕ್ಷ್ಯ-ಲಕ್ಷಣ ಪದ್ಯಗಳನ್ನು ಕಾಣಬಹುದು[1]. ಅಷ್ಟೇ ಅಲ್ಲದೆ ಹೊಸಗನ್ನಡ ಕವಿಗಳಲ್ಲೂ ಅಲಂಕಾರಗಳನ್ನು ಗುರುತಿಸಿರುವ ಕೆಲಸವನ್ನು ಗಮನಿಸಬಹುದು[2]. ಉದಾಹರಣೆಗೆ ಹೇಳುವುದಾದರೆ, ಹಳಗನ್ನಡ, ನಡುಗನ್ನಡ, ಹೊಸಗನ್ನಡ ಮೂರರಲ್ಲೂ ಕೈಪಿಡಿಯಲ್ಲಿ ಹೇಳಿರುವ ಎಲ್ಲಾ ಅಲಂಕಾರಗಳನ್ನು ಹಾಗೂ ವ್ಯಾಜಸ್ತುತಿಯ ಅಲಂಕಾರವನ್ನು ಲಕ್ಷಣ-ಲಕ್ಷ್ಯಗಳೊಡನೆ ಎಂ.ಎ. ಹೆಗಡೆ ಅವರು ಅಲಂಕಾರತತ್ತ್ವ ಗ್ರಂಥದಲ್ಲಿ ಪ್ರಸ್ತಾಪಿಸಿರುವುದನ್ನು ಕಾಣಬಹುದು. ಕನ್ನಡದಲ್ಲಿ ಸಮಗ್ರವಾಗಿ ಆಧುನಿಕ ಕನ್ನಡವನ್ನು ಒಳಗೊಂಡು ಅಲಂಕಾರಗಳ ಬಗೆಗೆ ವಿಸ್ತೃತವಾಗಿ ಚರ್ಚಿಸಿರುವ ಪ್ರಥಮ ಪುಸ್ತಕ ಎಂಬ ಹೆಗ್ಗಳಿಕೆ ಈ ಗ್ರಂಥದ್ದಾಗಿದೆ. ಇದರಲ್ಲಿ ವ್ಯಾಜಸ್ತುತಿಗೆ ಹೊಸಗನ್ನಡದ ಪದ್ಯಗಳನ್ನು ಉದಾಹರಿಸಿರುವುದನ್ನು ಗಮನಿಸಬಹುದು. ಉದಾಹರಣೆ, ವ್ಯಾಜಸ್ತುತಿಯಲ್ಲಿ ಸ್ತುತಿ ಮೂಲಕ ನಿಂದೆಗೆ ನಿದರ್ಶನವಾಗಿ ಕೊಟ್ಟಿರುವ ದಿನಕರ ದೇಸಾಯಿ ಅವರ ಪದ್ಯ ಇದು:

ನಿನ್ನ ಅಡಿಗೆಯ ಪರಾಕ್ರಮ ಬಹಳ ಹಿರಿದು
ನಾಲಿಗೆಯ ಸೊಕ್ಕು ಹಾಕಿದೆ ನೀನು ಮುರಿದು

ಹೆಂಡತಿಯ ಅಡಿಗೆಯನ್ನು ಹೊಗಳುವ ನೆಪದಲ್ಲಿ ತಿನ್ನಬಾರದ ಅಡಿಗೆ ಎಂಬ ನಿಂದೆ ಇಲ್ಲಿದೆ. ಇನ್ನು ನಿಂದೆ ಮೂಲಕ ಸ್ತುತಿಸಿರುವ ಪದ್ಯದ ನಿದರ್ಶನ ಮುಂದೆ ಕೊಟ್ಟಿದೆ.

ಶಾ.ಬಾಲುರಾವ್ ಅವರ ಸೂರ್ಯ ಇವನೊಬ್ಬನೇ ಕವಿತಾ ಸಂಕಲನದಿಂದ ಉದಾಹರಿಸಿದ್ದಾರೆ

ಛೀ ನಾಚಿಕೆಗೇಡಿ ।
ಎಲೆ ಸಂದು
ಸೂರು
ಬಾಗಿಲ ಕಂಡಿ
ಎಲ್ಲೆಂದರಲ್ಲಿ ಹಣಿಸಿ ಹಾಕುವುದೇನು?

ಸೂರ್ಯನು ಶ್ರೀಮಂತರ ಹರ್ಮ್ಯದಿಂದ ಹಿಡಿದು ಬಡವರ ಗುಡಿಸಿಲವರೆಗೆ ಎಲ್ಲ ಕಡೆ ಬೆಳಕು ಹಾಯಿಸುವ ಸರ್ವವ್ಯಾಪಿದೇವನೆಂಬ ಹೊಗಳಿಕೆಯನ್ನು ಕಂಡ ಕಂಡ ಕಡೆಗಳಲ್ಲಿ ಇಣುಕುವ ನಾಚಿಕೆಗೇಡಿ ವ್ಯಕ್ತಿ ಎಂದು ನಿಂದಿಸುವ ಮೂಲಕ ಸ್ತುತಿಸಿರುವುದನ್ನು ಕಾಣಬಹುದು.

ನಡುಗನ್ನಡದ ಪದ್ಯಗಳಲ್ಲಿ ಅಲಂಕಾರಗಳನ್ನು ವಿಶ್ಲೇಷಿಸಿರುವುದಕ್ಕೆ ಕುಮಾರವ್ಯಾಸ, ಲಕ್ಷ್ಮೀಶ ಕಾವ್ಯಗಳಿಗೆ ಬರೆದ ಟೀಕಾಗ್ರಂಥಗಳನ್ನು ಗಮನಿಸಬಹುದು[3]. ಹೀಗೆ ಕನ್ನಡದ ಎಲ್ಲ ಬಗೆಯ ಕಾವ್ಯಗಳಲ್ಲಿ ಶಬ್ದಾಲಂಕಾರ, ಅರ್ಥಾಲಂಕಾರಗಳನ್ನು ಮುಖ್ಯವಾಗಿ ವ್ಯಾಜಸ್ತುತಿ ಅಲಂಕಾರವನ್ನು ಗುರುತಿಸಬಹುದು. ಹಿಂದಿನ ಅಧ್ಯಾಯದಲ್ಲಿ ಅಲಂಕಾರಶಾಸ್ತ್ರಗ್ರಂಥಗಳಲ್ಲಿ ಕಂಡುಬರುವ ವ್ಯಾಜಸ್ತುತಿ ಲಕ್ಷ್ಯ–ಲಕ್ಷಣಗಳನ್ನು ಗಮನಿಸಲಾಗಿದೆ. ಇಲ್ಲಿ ಹರಿದಾಸ ಸಾಹಿತ್ಯದ ಕೀರ್ತನೆಗಳಲ್ಲಿ ಕಂಡುಬರುವ ವ್ಯಾಜಸ್ತುತಿಗಳನ್ನು ಪರಿಶೀಲಿಸಲಾಗಿದೆ.

ಕನ್ನಡ ಕಾವ್ಯಗಳಲ್ಲಿ ಹಳಗನ್ನಡ–ನಡುಗನ್ನಡ ಕಾವ್ಯಗಳಲ್ಲಿ ನಿಂದಾಸ್ತುತಿಯನ್ನು ಅಲ್ಲಲ್ಲಿ ಗುರುತಿಸಿರುವ ಟೀಕಾಕಾರರು ದಾಸಸಾಹಿತ್ಯ, ವಚನಸಾಹಿತ್ಯದಲ್ಲಿ ಸಾಕಷ್ಟು ವ್ಯಾಜಸ್ತುತಿಗಳು ಕಂಡುಬಂದರೂ ಅವುಗಳನ್ನು ಗಮನಿಸಿಲ್ಲ. ಕೇವಲ ಹರಿದಾಸರ ಕೀರ್ತನೆಗಳು ಉಗಾಭೋಗ, ಸುಳಾದಿಗಳನ್ನು ಗಮನಿಸಿರುವ ಗ್ರಂಥಗಳಲ್ಲಿ ಮಾತ್ರ ನಿಂದಾಸ್ತುತಿಯನ್ನು ಕುರಿತು ವಿವೇಚಿಸಿರುವುದನ್ನು ಕಾಣುತ್ತೇವೆ.

ಹರಿದಾಸ ಸಾಹಿತ್ಯದಲ್ಲಿ ನಿಂದಾಸ್ತುತಿಯನ್ನೇ ಕುರಿತು ಪ್ರತ್ಯೇಕ ಅಧ್ಯಯನವನ್ನು ಅಥವಾ ಕನ್ನಡ ಕಾವ್ಯಗಳಲ್ಲಿ ವಚನ ಸಾಹಿತ್ಯದಲ್ಲಿ ಬರುವ ವ್ಯಾಜಸ್ತುತಿಯನ್ನು ಕುರಿತು ಯಾರೂ ಅಧ್ಯಯನ ಮಾಡಿಲ್ಲ. ಅಥವಾ ಯಾವುದೇ ಒಂದು ಅಲಂಕಾರವನ್ನು ಕುರಿತು ಇಡೀ ಕನ್ನಡ ಸಾಹಿತ್ಯದ ಕಾವ್ಯ-ವಚನ-ಕೀರ್ತನ ಸಾಹಿತ್ಯದಲ್ಲಿ ಹೇಗೆ ಪ್ರತಿಪಾದಿತವಾಗಿದೆ ಎಂಬುದನ್ನು ಸೋದಾಹರಣವಾಗಿ ಯಾರೂ ಚರ್ಚಿಸಿಲ್ಲ. ಈ ಬಗ್ಗೆ ಲೇಖನಗಳು ಮತ್ತು ಪ್ರಾಸಂಗಿಕವಾಗಿ ಪ್ರಸ್ತಾಪಗಳು ಮತ್ತು ನಿಂದಾಸ್ತುತಿಯನ್ನು ಕುರಿತು ಸಮಗ್ರವಾಗಿ ಕೆಲವು ಮಾತುಗಳನ್ನು ಹೇಳಿರುವುದನ್ನಷ್ಟೆ ಕಾಣಬಹುದಾಗಿದೆ. ವಿಸ್ತಾರವಾಗಿ ಈ ಬಗ್ಗೆ ಉಳಿದ ಗ್ರಂಥಗಳಲ್ಲಿ ಚರ್ಚಿಸದಿರಲು ಕಾರಣ, ಆಯಾ ಗ್ರಂಥಗಳ ರಚನಾ ಉದ್ದೇಶವೂ ಬೇರೆ ಇರುವುದು ಕಾರಣವಾಗಿದೆ. ಅದೇನೇ ಇರಲಿ, ಸಾಕಷ್ಟು ಜನ ಹರಿದಾಸ ಸಾಹಿತ್ಯದ ವಿಮರ್ಶಕರು ವ್ಯಾಜಸ್ತುತಿ ಬಗ್ಗೆ ಪ್ರಸ್ತಾಪಿಸಿದ್ದಾರೆ. ಈ ಪೈಕಿ ಕೆಲವನ್ನು ಇಲ್ಲಿ ಅವಲೋಕಿಸಲಾಗಿದೆ. ಈ ಕ್ಷೇತ್ರದಲ್ಲಿ ವ್ಯಾಜಸ್ತುತಿ ಬಗ್ಗೆ ಎದ್ದುಕಾಣುವ ಪ್ರಯತ್ನವೆಂದರೆ ಡಾ. ಕೆ. ಗೋಕುಲನಾಥರದು. ಅವರು ಕನ್ನಡದಲ್ಲಿ ಮೊದಲ ಬಾರಿಗೆ ಹರಿದಾಸರ ನಿಂದಾಸ್ತುತಿಗಳು ಎಂಬ ಗ್ರಂಥ ಸಿದ್ಧಪಡಿಸಿ ಅದರಲ್ಲಿ 50 ನಿಂದಾಸ್ತುತಿಗಳನ್ನು ಸಂಗ್ರಹಿಸಿದ್ದಾರೆ. ಅವುಗಳನ್ನು ಕುರಿತು ಅವರು ಹೇಳಿರುವ ಮಾತುಗಳಿವು. "ಈಗ ದೊರೆತಿರುವ ನಿಂದಾಸ್ತುತಿಗಳ ರಚನೆಯಾಗಿರುವುದು ತಿಳಿಯುತ್ತದೆ. ಇವುಗಳಲ್ಲಿ ಲಕ್ಷ್ಮಿಯನ್ನು ಕುರಿತು ಆರು ಕೃತಿಗಳು, ಶಿವ-ಪಾರ್ವತಿಯನ್ನು ಕುರಿತು ನಾಲ್ಕು ಕೃತಿಗಳು ರಚನೆ ಆಗಿದೆ. ಹರಿಹರರನ್ನು ಹಾಗೂ ಲಕ್ಷ್ಮೀಪಾರ್ವತಿಯರನ್ನು ಕುರಿತು ಒಂದೊಂದು ನಿಂದಾಸ್ತುತಿ ರಚನೆ ಆಗಿದೆ. ಭಕ್ತ ಭಗವಂತನಿಗಿಂತ ದೊಡ್ಡವರೆಂಬುದನ್ನು ಸಮರ್ಥಿಸುವರೊಡನೆ ನಿಷ್ಕಾಮಕರ್ಮವನ್ನು ಮಾಡುವ ಭಕ್ತರು, ಸಾತ್ವಿಕರೆಂದು ಭಾವಿಸಬೇಕಿಲ್ಲ. ಅವರು ಕಿಲಾಡಿಗಳು ಎಂದು ಹರಿದಾಸರನ್ನು ಟೀಕಿಸುವ ಎರಡು, ನಿಂದಾಸ್ತುತಿಗಳನ್ನು ವಿಜಯದಾಸರು ಮಾತ್ರ ರಚಿಸಿದ್ದಾರೆ.

ಆಶ್ಚರ್ಯದ ಸಂಗತಿ ಎಂದರೆ ವಾಯುದೇವರನ್ನು ಕುರಿತು ಹರಿದಾಸರು ನಿಂದಾಸ್ತುತಿಯನ್ನು ರಚಿಸದಿರುವುದು. ಅಂತೆಯೇ ಭಾರತಿ, ಪಾರ್ವತಿಯರನ್ನು ಸಂಬೋಧಿಸಿ ರಚಿಸಿರುವ ನಿಂದಾಸ್ತುತಿಗಳ ವಸ್ತು ಅವರವರ ಪತಿಯ ಅವಗುಣಗಳನ್ನು ಅನಾವರಣ ಮಾಡುವುದಾಗಿದ್ದು, ಇಂಥವರನ್ನು ಏಕೆ ಮದುವೆಯಾದಿರೆಂದು ಪ್ರಶ್ನಿಸುವುದಾಗಿದೆ ... ಪುರಂದರದಾಸರ 25 ನಿಂದಾಸ್ತುತಿಗಳು ದೊರೆತಿವೆಯಾದರೆ ದ್ವಿತೀಯ ಪುರಂದರದಾಸರೆನಿಸಿರುವ ವಿಜಯದಾಸರು ಎರಡನೆಯ ಸ್ಥಾನದಲ್ಲಿರುತ್ತಾರೆ. ಉಳಿದ ಹರಿದಾಸರು ರಚಿಸಿರುವ ಕೇವಲ ಎರಡು ಅಥವಾ ಮೂರು ನಿಂದಾಸ್ತುತಿಗಳು ಮಾತ್ರ ದೊರೆತಿವೆ. 'ಜಗನ್ನಾಥದಾಸರು ರಚಿಸಿದ ಕೇವಲ ಒಂದು ತತ್ತ್ವಸುವ್ವಾಲಿಯು ಮಾತ್ರ ನಿಂದಾಸ್ತುತಿಗಳ ಗುಂಪಿಗೆ ಸೇರುತ್ತವೆ. ಕೇವಲ 12 ಹರಿದಾಸರು (ಶ್ರೀಪಾದರಾಜರು, ವ್ಯಾಸರಾಜರು, ವಾದಿರಾಜರು, ಪುರಂದರದಾಸರು, ಕನಕದಾಸರು, ವಿಜಯದಾಸರು,

ಗೋಪಾಲದಾಸರು, ಗುರುಗೋಪಾಲದಾಸರು, ಮಹಿಪತಿದಾಸರು, ವೆಂಕಟದಾಸರು, ಪ್ರಸನ್ನವೆಂಕಟದಾಸರು ಮತ್ತು ಜಗನ್ನಾಥದಾಸರ ನಿಂದಾಸ್ತುತಿಗಳು ದೊರೆತಿವೆ. ಉಳಿದವರ ರಚನೆಗಳು ದೊರೆತಿಲ್ಲ". ಈ ರೀತಿ ಕೇವಲ 12 ಹರಿದಾಸರು ರಚಿಸಿರುವ 50 ನಿಂದಾಸುತಿಗಳು ಈ ಸಂಕಲನದಲ್ಲಿವೆ[4].

ಬಹುಶಃ ಡಾ. ಕೆ. ಗೋಕುಲನಾಥರಿಗೆ ಸಮಗ್ರ ದಾಸಸಾಹಿತ್ಯ ಸಂಪುಟಗಳು ಈ ಗ್ರಂಥ ರಚಿಸಿದಾಗ ಸಿಗದಿದ್ದರಿಂದ ಮತ್ತು ಎಲ್ಲ ದಾಸಸಾಹಿತ್ಯ ಪ್ರಕಟನೆಗಳನ್ನು ಪರಿಶೀಲಿಸಲು ಸಾಧ್ಯವಾಗದ ಕಾರಣ, ತಮಗೆ ದೊರೆತಷ್ಟೇ ಸಾಮಗ್ರಿಯಬಲದಿಂದ ಮೇಲಿನ ಮಾತುಗಳನ್ನು ಹೇಳಿದ್ದಾರೆ. 50 ನಿಂದಾಸ್ತುತಿಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ. ಆದರೆ ವಾಸ್ತವಿಕವಾಗಿ ಇನ್ನು ಅಧಿಕಸಂಖ್ಯೆಯಲ್ಲಿ ಹರಿದಾಸರ ಕೃತಿಗಳಲ್ಲಿ ನಿಂದಾಸ್ತುತಿಗಳು ಸಿಗುತ್ತವೆ. ಕೆಲವನ್ನು ಇಲ್ಲಿ ಉಲ್ಲೇಖಿಸಿದೆ. ಸಮಗ್ರ ದಾಸಸಾಹಿತ್ಯದ ಸಂಪುಟಗಳಲ್ಲಿ ಇನ್ನು ಸಾಕಷ್ಟು ನಿಂದಾಸ್ತುತಿಗಳು ಕಂಡುಬರುತ್ತವೆ. ಇವು ಗೋಕುಲನಾಥರ ಸಂಗ್ರಹದಲ್ಲಿಲ್ಲ.

1. ಕಮಲನಾಭವಿಠಲ – *ಮೆಚ್ಚಿಗೆ ಯಾಕಮ್ಮ ಲಕ್ಕುಮಿದೇವಿ* (18–2)
2. ಕೃಷ್ಣವಿಠಲ – *ಬಲ್ಲೆಬಲ್ಲೆನು ಕೃಷ್ಣ ನಿನ್ನ ಮಹಿಮೆ* (15)
3. ಗದುಗಿನ ವೀರನಾರಾಯಣ – *ಜಿಪುಣರ್ಯೆ ನೀವೆಂದು ಹೇಳಿದುದು* (21–2)
4. ಗುರುಜಗನ್ನಾಥವಿಠಲ – *ಆವ ರೂಪವ ನೋಡಿ ಮರುಳಾದೆ ಇಂಥ ದೇವರಿಗೆ* (26)
5. ಗುರುಜಗನ್ನಾಥವಿಠಲ – *ನಿನ್ನ ಅಂಜಿಕೆಯು ಎನಗೇನು ದೇವಾ* (26)
6. ಮಹಿಪತಿಸುತ – *ಏನು ಕೊಟ್ಟನೆ ಮಗಳಾ ಉದಾಸೀನದಿ* (11–1)
7. ಮಹಿಪತಿಸುತ – *ಏನರುಹಾಕ್ಷೀ ವನಮಾಲಿಂಗೇ ಏನು ಮರುಳಾದೆ* (11–1)
8. ರಮೆಯರಸ – *ಇವ ಬಲುಕಳ್ಳ ನಮ್ಮ ಮಾಧವ* (7)
9. ಕರಿಗಿರೀಶ – *ನಾರದ ಮುನಿವರರೆ* (27)
10. ಇಂದಿರೇಶ – *ನಾರದಾ ಬಾ ಮುನಿಜಾತಾ* (21–2)
11. ಇಂದಿರೇಶ – *ನಾರದನಾನೆ ಕಂಡೆ ನಿನ್ನ ಮೂರು ತಂತೀಯಾ* (21–2)

11\. ಇಂದಿರೇಶ – *ಬಾರೋ ಮೊರೆಯ ತೋರೋ ನಾರದ* (21–2)

ಅಧ್ಯಾಯ ನಾಲ್ಕು

ಹರಿದಾಸರ ಕೀರ್ತನೆಗಳಲ್ಲಿ ವ್ಯಾಜಸ್ತುತಿ ಅಲಂಕಾರ-ವಿಶ್ಲೇಷಣೆ

ಈ ಎಲ್ಲ ದಾಸರ, ಇಲ್ಲಿ ಉಲ್ಲೇಖಿಸಿರುವ ಕೀರ್ತನೆಗಳು ಡಾ. ಕೆ. ಗೋಕುಲನಾಥರ ಕಣ್ಣಿಗೆ ಬಿದ್ದಿಲ್ಲ. ಇವಲ್ಲದೆ ಇನ್ನು ಹತ್ತಾರು ಕೀರ್ತನೆಗಳು ಉಳಿದ ಅನೇಕ ದಾಸರ ಕೀರ್ತನೆಗಳಲ್ಲಿ ಸಿಗುತ್ತವೆ. ಇಲ್ಲಿ ಉದಾಹರಣೆಗೆ ಕೆಲವನ್ನು ಉಲ್ಲೇಖಿಸಿದೆ.

ಗೋಕುಲನಾಥರು ಈಗ ಉಲ್ಲೇಖಿಸಿರುವ ಹರಿದಾಸರ ಕೀರ್ತನೆಗಳಲ್ಲಿ ಇನ್ನೂ ಸಾಕಷ್ಟು ನಿಂದಾಸ್ತುತಿಗಳು ಸಿಗುತ್ತವೆ. ಉದಾಹರಣೆಗೆ ಪುರಂದರದಾಸರ ನೀನ್ಯಾಕೋ ನಿನ್ನ ಹಂಗ್ಯಾಕೋ ಪ್ರಸಿದ್ಧ ಕೀರ್ತನೆ ಅವರಿಗೆ ಕಾಣಿಸದೆ ಹೋಗಿದೆ. ಅದೇನೇ ಮಿತಿಗಳು ಈಗ ಗ್ರಂಥಕ್ಕೆ ಇದ್ದರೂ ಹರಿದಾಸರ ನಿಂದಾಸ್ತುತಿಗಳ ಬಗ್ಗೆ ಪ್ರತ್ಯೇಕವಾಗಿ ಮೊದಲಬಾರಿಗೆ ಅಧ್ಯಯನ ಮಾಡಿ ಪ್ರಕಟಿಸಿದವರಲ್ಲಿ ಅವರು ಈ ವಿಷಯದಲ್ಲಿ ಮೊದಲಿಗರಾಗಿದ್ದಾರೆ. ಉಳಿದವರಿಗೆ ಮಾದರಿ ಆಗಿದ್ದಾರೆ.

ಈ ಮೊದಲು ಗಮನಿಸಿದಂತೆ ವ್ಯಾಜಸ್ತುತಿಯಲ್ಲಿ ಒಂದು ವಿಧವಾದ ನಿಂದಾಸ್ತುತಿ. ನಿಂದೆಯ ಮೂಲಕ ಸ್ತುತಿ ಮಾಡುವುದು. ಅಂತೆಯೇ ಸ್ತುತಿಯ ಮೂಲಕ ನಿಂದೆ ಮಾಡುವ ನಿಂದೆ ಮೂಲಕ ನಿಂದೆ ಮಾಡುವ ವ್ಯಾಜಸ್ತುತಿಗಳೂ ಇವೆ. ಹರಿದಾಸರ ಕೀರ್ತನೆಗಳಲ್ಲಿ ಈ ಮೂರು ಬಗೆಗಳನ್ನು ಗೋಕುಲನಾಥರು ಗುರುತಿಸಿಲ್ಲ. ಇದಕ್ಕೆ ಬಹುಶಃ ಅಧಿಕಸಂಖ್ಯೆಯಲ್ಲಿ ನಿಂದಾಸ್ತುತಿಗಳೇ ಕೀರ್ತನೆಗಳಲ್ಲಿ ಕಂಡುಬರುವುದು ಕಾರಣವಿರಬಹುದು.

ನಿಂದಾಸ್ತುತಿಗಳನ್ನು ಆಧುನಿಕ ವಿಮರ್ಶಕರು ಕೇವಲ ಅರ್ಥಾಲಂಕಾರಗಳ ದೃಷ್ಟಿಯಿಂದ ಕಂಡಿಲ್ಲ. ತಮ್ಮದೇ ಆದ ವಿಮರ್ಶಾದೃಷ್ಟಿಯಲ್ಲಿ ಕಂಡಿದ್ದಾರೆ. ಡಾ. ಎಚ್.ಎನ್. ಮುರಳೀಧರ ಅವರು ನಿಂದಾಸ್ತುತಿಗಳ ಬಗ್ಗೆ ಉಲ್ಲೇಖಿಸಿರುವ ಮಾತುಗಳಿವು[5].

"ನಿಂದಾಸ್ತುತಿಗಳು ದಾಸಸಾಹಿತ್ಯದಲ್ಲಿ ಒಂದು ವಿಶಿಷ್ಟ ಅಭಿವ್ಯಕ್ತಿಯ ದನಿಗಳಾಗಿವೆ. ಮೇಲ್ನೋಟಕ್ಕೆ ತೆಗಳುತ್ತಿರುವಂತೆ ಕಂಡುಬಂದರೂ ಪ್ರಶಂಸೆಯ ವಿವಿಧ ಪದರಗಳನ್ನು ತೆರೆಯುವ ವಿಧಾನ ಇಲ್ಲಿಯದು. ಇದು ಇನ್ನೊಂದು ರೀತಿಯಲ್ಲಿ ಭಕ್ತಿ ಮತ್ತು ಭಗವಂತ ಇವರ ನಡುವಣ ಸಂಬಂಧದ ವ್ಯಾಖ್ಯೆ ಕೂಡ. ಕೀರ್ತನೆಗಳು ತಮ್ಮ ಅಭಿವ್ಯಕ್ತಿಯ ವಿನ್ಯಾಸದಲ್ಲಿ ಮಾತ್ರವಲ್ಲದೆ ತಾತ್ವಿಕ ನೆಲೆಯೊಂದಿಗಿನ ಅನುಸಂಧಾನದಲ್ಲಿಯ ದೇಸಿಯತೆಯನ್ನು ಪ್ರಕಟಿಸುತ್ತದೆ ಅಥವಾ ಇವೆರಡನ್ನು ಒಂದೇ ವಾಸ್ತವದ ಎರಡು ಮುಖಗಳಾಗಿಯೂ ಗ್ರಹಿಸಬಹುದು. ಹೀಗಾಗಿ ಇಲ್ಲಿ ದೇವರೊಂದಿಗಿನ ಸಂಬಂಧ ಕೂಡ ಪೂರ್ವ ಸಿದ್ಧವಾದ ಸೂತ್ರವೊಂದರಿಂದ ಯಾಂತ್ರಿಕವಾಗಿ ನಿಷ್ಪನ್ನಗೊಂಡ ಸಂಗತಿಯಾಗಿರದೆ ಸನ್ನಿವೇಶದ ಆಯಾ ಕ್ಷಣದ ತುರ್ತುನಿಂದ ರೂಪುಗೊಳ್ಳುವಂಥದ್ದಾಗಿರುತ್ತದೆ[6].

ಭಕ್ತ–ಭಗವಂತ ಭಾವದ ನಿಂದಾಸ್ತುತಿಗಳು

ಪಂಚವಿಧ ಭಾವಗಳಲ್ಲಿ ಒಂದಾದ ಸಖ್ಯಭಾವದಲ್ಲಿ ಭಕ್ತ–ಭಗವಂತನ ಸಲಿಗೆ ಕಾಣುತ್ತೇವೆ. ಇದನ್ನು ಕುರ್ತುಕೋಟಿಯವರು ಅಲೌಕಿಕವನ್ನು ಲೌಕಿಕವಾಗಿರುಸವ ವಿಧಾನಕ್ಕೆ ನಿಂದಾಸ್ತುತಿ ಸೂಕ್ತವಾದ ವಾಹಕ. ದೇವರೊಂದಿಗೆ ಸಲಿಗೆ ಹೆಚ್ಚಾಗಬೇಕಾದರೆ ದೇವರ ಸ್ತುತಿ ದೇವರ ನಿಂದೆ ಆಗಬೇಕು ಎನ್ನುತ್ತಾರೆ[5].

'ಕುರ್ತುಕೋಟಿಯುವರು ಅಲೌಕಿಕವನ್ನು ಲೌಕಿಕವಾಗಿಸುವ ವಿಧಾನ' ಎಂಬುದನ್ನು ಮುರುಳೀಧರರರು ಹೀಗೆ ವ್ಯಾಖ್ಯಾನಿಸಿದ್ದಾರೆ.

"ಭಕ್ತಿಯನ್ನು ಲೌಕಿಕವಾಗಿಸುವ ವಿಧಾನದಲ್ಲಿ ಮುಖ್ಯವಾಗಿ ಮೂರುಬಗೆಯ ಗ್ರಹಿಕೆಗಳು ಕೆಲಸ ಮಾಡಿರುವುದನ್ನು ಗ್ರಹಿಸಬಹುದು.

1. ಭಕ್ತನ ಶ್ರೇಷ್ಠತೆ

2. ಭಕ್ತಿ ಎಂಬ ಪ್ರಕ್ರಿಯೆಯಲ್ಲಿ ಭಕ್ತಿಯನ್ನು ಮಾಡುವವನಿಗಿಂತ ಮಾಡಿಸಿಕೊಳ್ಳುವವನೂ ಜವಾಬುದಾರ.

3. ಭಕ್ತಿಯ ಸಕ್ರಿಯವಾಗುವುದು 'ನಾಮ'ದ ವಾಸ್ತವತೆಯಲ್ಲಿ.

ಭಕ್ತಿಯ ಸ್ವರೂಪವನ್ನು ಭಕ್ತನ ದೃಷ್ಟಿಯಿಂದ ನೋಡಿದಾಗ ಎಲ್ಲ 'ಉಂಟುಗಳು' ಭಕ್ತಗಳ ಪಾಲಿಗೆ 'ಇಲ್ಲಗಳು'. ದೇವರ ಪಾಲಿಗೆ, ಎಂದು ಪರೋಕ್ಷವಾಗಿ ಭಗವಂತನ ನಿಂದೆ ಮಾಡುವುದನ್ನು ಕಾಣುತ್ತೇವೆ.

ಭಕ್ತ–ಭಗವಂತನನ್ನು ದೂಷಿಸುವ ಕೆಟ್ಟತನ ತೋರಲು ಎಲ್ಲಿಂದ ಬಂತು ಎಂದಾಗ ಉತ್ತರ ಭಗವಂತನಲ್ಲಿ ಅವನಿಗಿರುವ ಸಲಿಗೆ – ಭಕ್ತ–ಭಗವಂತನ ಆತ್ಮೀಯ ಸಂಬಂಧ. ಭಕ್ತನೇ ಶ್ರೇಷ್ಠ ಎಂಬುದು ದಾಸಸಾಹಿತ್ಯದಲ್ಲಿ ಒಂದು ಕಲ್ಪನೆಯಿದೆ. ಆದ್ದರಿಂದಲೇ ಭಗವಂತನನ್ನು ಭಕ್ತಪರಾಧೀನ ಎನ್ನುತ್ತಾರೆ ಭಗವಂತನನ್ನು. ದೇವಾಲಯಗಳಲ್ಲಿ ಮೊದಲು ಭಕ್ತನನ್ನು ದರ್ಶಿಸಿ ಆಮೇಲೆ ಭಗವಂತನನ್ನು ಕಾಣಬೇಕು ಎನ್ನುತ್ತಾರೆ. ಅದಕ್ಕಾಗಿ ವಿಷ್ಣುದೇವಾಲಯದಲ್ಲಿ ಗರುಡನು, ಶಿವದೇವಾಲಯದಲ್ಲಿ ನಂದಿ ಮುಂದಿರುತ್ತಾರೆ. ಭಕ್ತರು ಅವರನ್ನು ದರ್ಶಿಸಿ ಆಮೇಲೆ ಭಗವಂತನನ್ನು ಗರ್ಭಗುಡಿಯಲ್ಲಿ ಕಾಣುತ್ತಾರೆ.

ಭಕ್ತಿಯಲ್ಲಿ ಸರಿ–ತಪ್ಪು, ನೀತಿ–ಅನೀತಿ, ಸಲ್ಲದು–ಸಲ್ಲುದವು ಎಂಬ ಮಾತಿಲ್ಲ. ಪ್ರೀತಿಯ ಆತ್ಮೀಯತೆಯ ನುಡಿಗಳೆಲ್ಲ ಭಗವಂತನಿಗೆ ಮೆಚ್ಚುಗೆ ಆದುದೆ. ಅದಕ್ಕೆ ಭಗವಂತನನ್ನು ನಿಂದಿಸಿದರೂ ಭಗವಂತ ಕೋಪಿಸನು, ತಾಯಿಯನ್ನು ಮಗು ಬೈದರೆ ರೇಗಿದರೆ ಜಂಭಪಟ್ಟರೆ ತಾಯಿ ಮುನಿವಳೇ ಇಲ್ಲವಲ್ಲಾ, ಹಾಗೆಯೇ ಭಗವಂತನ ವಿಷಯದಲ್ಲಿ ಭಕ್ತಿ, ಆದ್ದರಿಂದಲೇ, ಭಗವಂತನನ್ನು ಹೀನೈಸಲು ಧೈರ್ಯ ತಾಳುತ್ತಾನೆ ಭಕ್ತ.

ಇದಕ್ಕೊಂದು ನಿದರ್ಶನವನ್ನು ಪುರಂದರದಾಸರ ಉಗಾಭೋಗದಲ್ಲಿ ಕಾಣಬಹುದು:

ನಿನ್ನಂಥ ಸ್ವಾಮಿ ಎನಗುಂಟು ನಿನಗಿಲ್ಲ
ನಿನ್ನಂಥ ತಂದೆ ಎನಗುಂಟು ನಿನಗಿಲ್ಲ
ನಿನ್ನಂಥ ದೊರೆ ಎನಗುಂಟು ನಿನಗಿಲ್ಲ
ನೀನೇ ಪರದೇಶಿ ನಾನೇ ಸ್ವದೇಶಿ
ನಿನ್ನರಸಿ ಲಕುಮಿ ಎನ್ನ ತಾಯಿ
ನಿನ್ನ ತಾಯಿಯ ತೋರೋ ಪುರಂದರವಿಠಲ

ಈ ರೀತಿಯಾಗಿ ಭಕ್ತ ತನ್ನ ಶ್ರೇಷ್ಠತೆಯನ್ನು ತನ್ನಂಥ ಭಕ್ತರ ಹಿರಿಮೆಯನ್ನು ಹೇಳುವುದರ ಮೂಲಕ ನನಗೆ ಎಲ್ಲರೂ ಗತಿ ಇದ್ದಾರೆ, ನಿನಗಾರು ಇದ್ದಾರೆ. ನನಗೆ ತಾಯಿತಂದೆ ಸೋದರ ಸೋದರಿ ಬಂಧು ಗುರು ಎಲ್ಲ ಇದ್ದಾರೆ. ಗೃಹಕುಟುಂಬಿ ನಾನು, ನೀನು ವಿಶ್ವಕುಟುಂಬಿ ಎಂದು ಹೇಳಿಕೊಂಡರೂ ನನಗಿರುವ ಆಪ್ತಪರಿವಾರ ಯಾರಿದ್ದಾರೆ ಹೇಳು ಎಂದು ಸವಾಲಾಗಿ ಕೇಳುವ ಮೂಲಕ ವಿಜಯದಾಸರು ತಮ್ಮ ಕೀರ್ತನೆಯಲ್ಲಿ ಭಗವಂತನನ್ನು ಕುರಿತು ನಿಂದಾಸ್ತುತಿ ಮಾಡಿದ್ದಾರೆ.

ಪರದೇಶಿ ನೀನು ಸ್ವದೇಶಿ ನಾನು
ಪರಮಭಾಗವತರ ಬಾ ಹೋಗಿ ಕೇಳೋಣ

ಎನಗೆ ಜನಕನು ನೀನು ನಿನಗಾವ ಜನಕನೋ
ಜನನಿ ಇಂದಿರೆ ಎನಗೆ ನಿನಗಾವಳೋ
ವನಜಪೀಠನು ಭ್ರಾತ ನಿನಗಾವ ಮಾತುಳನೋ
ಇನಸೋಮ ಮಾತುಳರು ನಿನಗಾವ ಮಾತುಳನೋ

ಸುರನದೀ ಅಗ್ರಜಳು ನಿನಗೆ ಅಗ್ರಜಳಾರು
ಶರನಿಧೀ ಭಾಗ ನಿನಗಾರೊ ಭಾವ

ಸ್ಮರನು ಕಿರಿ ಸಹಭವನು ನಿನಗೆ ಸಹಭವನಾರೊ
ಸುರರು ಬಂಧುಗಳೆನಗೆ ನಿನಗಾರು ಬಾಂಧವರೊ

ವರ ಇಳಾ ಸಾಮಾತೆ ನಿನಗೆ ಸಾಮಾತೆ ಯಾರೂ
ಮರುತ ದೇವರು ಗುರು ನಿನಗಾರು ಗುರುವೊ
ಸಿರಿಯರಸ । ವಿಜಯವಿಠಲರೇಯನೆ ನಿನ್ನ
ಚರಣ ಸೇವಕ ನಾನು ನೀನಾರ ಸೇವಕನೋ

ಭಕ್ತ ಭಗವಂತನನ್ನು ಕುರಿತು ನಾನು ಶ್ರೇಷ್ಠ ಎಂದು ಹೇಳುವ ಹಾಗೆಯೇ ನಾನೊಬ್ಬನೇ ಅಲ್ಲ ಎಲ್ಲ ಭಕ್ತರೂ ನಿನಗಿಂತ ಶ್ರೇಷ್ಠರು, ಮುಂದೆ ಸಾಗುವ ಹಿರಿಯರು ನೀನು ಅವರ ಹಿಂದೆ ಸಾಗುವ ಕಿರಿಯ ಎನ್ನುತ್ತಾನೆ. ಸಾಮಾನ್ಯವಾಗಿ ಮೆರವಣಿಗೆಯಲ್ಲಿ ದೊಡ್ಡವರು ಮುಂದೆ ಉಳಿದವರು ಹಿಂದೆ ತಾನೇ? ಹಾಗೆ ಭಕುತರು ಶ್ರೇಷ್ಠರಾದ್ದರಿಂದ ಅವರೇ ಮುಂದೆ ನೀನು ಹಿಂದೆ ಎಂದು ಭಗವಂತನನ್ನು ಕನಿಷ್ಠ ಮಾಡಿ ಬೆರಳು ತೋರಿಸುತ್ತಾರೆ. ಪುರಂದರರ ಕೀರ್ತನೆಯೊಂದರಲ್ಲಿ ಈ ಭಾವ ಸುವ್ಯಕ್ತವಾಗಿದೆ.

ಭಕುತಜನ ಮುಂದೆ ನೀನವರ ಹಿಂದೆ ಇದಕೆ
ಯುಕುತಿ ಕೈಕೊಳದಯ್ಯ ಗಯಾಗದಾಧರನೆ

ಕಟ್ಟೆರಡು ಕೂಡಿ ತಾ ನದಿ ಸೂಸಿ ಹರಿವಾಗ
ಕಟ್ಟುಕ್ಕಿದಾಗ ಹರಿಗೋಲ ಹಾಕೆ
ನೆಟ್ಟನೆ ಜಿಗಿಜಿಗಿದು ದಾಟಿ ತಾ ಪೋಪಾಗ
ಹುಟ್ಟು ಮುಂದಲ್ಲದಲೆ ಹರಿಗೋಲು ಮುಂದೆ?

ಕಾಳೆ ಹೆಗ್ಗಾಳೆ ದುಂಧುಭಿ ನಾನಾ ವಾದ್ಯದಿಂದ
ಓಲಗದಿಂದ್ಯೆದೆ ಅರಸು ತಾ ಬರುವಾಗ
ಸಾಲಾಗಿ ಬಳಿವಿಡಿದು ಸಂಭ್ರಮದಿ ಇರುವಾಗ
ಆಳು ಮುಂದಲ್ಲದೆ ಅರಸು ತಾ ಮುಂದೆ

ಉತ್ಸವ ಮೂರುತಿಯು ಬೀಡಿ ಮೆರೆಯುತ ಬರಲು
ಸತ್ಸಂಗತಿಗೆ ಹರಿದಾಸರೆಲ್ಲ
ಅಚ್ಚ ಸಿರಿಯರಸು ಸಿರಿಪುರಂದರ ವಿಠಲನೆ
ವತ್ಸ ಮುಂದಲ್ಲದೆ ಧೇನು ತಾ ಮುಂದೆ?

ಇಲ್ಲಿ ಕೊಟ್ಟಿರುವ ನಿದರ್ಶನಗಳು ಅಚ್ಚರಿ ಮೂಡಿಸುತ್ತವೆ ಹರಿಗೋಲಲ್ಲಿ ನದಿ ದಾಟುವಾಗ, ಪ್ರವಾಹ ಬಂದಾಗ ಹುಟ್ಟು ಮುಂದಲ್ಲದೆ ಹರಿಗೋಲು ಮುಂದಿರುವುದೇ? ಎಂದು ಪ್ರಶ್ನಿಸುತ್ತಾರೆ ದಾಸರು. ಮೆರವಣಿಗೆಯಲ್ಲಿ ಅರಸ ಹಿಂದೆ ಆಳು ಮುಂದೆ ಅಲ್ಲವೆ ಎನ್ನುತ್ತಾರೆ. ಉತ್ಸವಮೂರ್ತಿ ಬಂದಾಗ ಶ್ರೀಹರಿಭಜನೆಯ ಭಕುತರು ಮುಂದೆ ಬರುತ್ತಾ ಹಿಂದೆ ಮೂರ್ತಿ ಬರುತ್ತಾರೆ. ಹಸು ಮುಂದೆ ಕರು ಬರುತ್ತೆ ಹಸು ಹಿಂದೆ ಬರುತ್ತೇ ಎಂದಿದ್ದಾರೆ ದಾಸರು ತಮ್ಮ ಮಾತಿನ ಸಮರ್ಥನೆಗೆ.

ನದಿಯಲ್ಲಿ ಸಾಗುವ ಹರಿಗೋಲು, ರಾಜಮಾರ್ಗದಲ್ಲಿ ಸಾಗುವ ಮೆರವಣಿಗೆ, ಉತ್ಸವಮೂರ್ತಿ ಉತ್ಸವ ಇವುಗಳನ್ನು ಹರಿದಾಸರು ಲೋಕದ ವ್ಯವಹಾರಗಳ ವಾಸ್ತವ ನೋಟಗಳನ್ನು ನೀಡುವುದರ ಮೂಲಕ, ಪ್ರಯಾಣಿಕ–ನಾವಿಕ, ಆಳು–ಅರಸ, ದಾಸ–ಶ್ರೀಹರಿ ಸಂಬಂಧಗಳನ್ನು ಭಕ್ತ–ಭಗವಂತನ ಮಾದರಿಯಲ್ಲಿ ಕಂಡಿದ್ದಾರೆ. ಆದ್ದರಿಂದಲೇ ನಿಂದಾಸ್ತುತಿಯಲ್ಲಿ ಅವರನ್ನೆಲ್ಲಾ ಉದಾಹರಿಸಿದ್ದಾರೆ.

ಭಕ್ತ–ಭಗವಂತ ಭಾವದ ನಿಂದಾಸ್ತುತಿಯಲ್ಲಿ ಭಗವಂತನನ್ನು ಭಕ್ತ ಪ್ರಶ್ನಿಸುವ ಪರಿಪಾಟವನ್ನು ಕಾಣುತ್ತೇವೆ. ನಿನಗೆ ಅನೇಕ ಭಕ್ತರು ತೊಂದರೆ ಕೊಟ್ಟಿರಬಹುದು. ಆದರೆ ನಾನು ಆ ಕೆಲಸ ಮಾಡಿಲ್ಲ. ಆದರೆ ನೀನು ಅವರಿಗೆಲ್ಲ ಒಲಿದು ನನಗೆ ಒಲಿಯಲಿಲ್ಲ ಇದು ನ್ಯಾಯವೇ ಎನ್ನುತ್ತಾರೆ.

ತಾಯಿ ಗೋಪಿಯಂತೆ ನಿನ್ನ ಒರಳನೆಳೆಸಲಿಲ್ಲ
ವಾಲಿಯಂತೆ ಎದುರು ವಾದಿಸುತಿರಲಿಲ್ಲ
ಭೃಗುಮುನಿಯಂತೆ ನಿನ್ನ ಎದೆಯ ತುಳಿಯಲಿಲ್ಲ
ಭೀಷ್ಮನಂತೆ ನಿನ್ನ ಹಣೆ ಒಡೆಯಲಿಲ್ಲ
ಕೊಂಕಣಿಗರ ಎಮ್ಮೆಗೆ ಕೊಡತಿಯೆ ಮದ್ದೆಂದೆ
ಅವರ ಮದ್ದು ನಿನಗೆ ಪುರಂದರವಿಠಲ[10]

ಇಲ್ಲಿ ಭಾಗವತ ರಾಮಾಯಣ, ಭಾರತದ ನಿದರ್ಶನಗಳನ್ನು ನೀಡುತ್ತಾರೆ. ಲೋಕರೂಢಿಯಾದ ಗಾದೆಯೊಂದನ್ನು ದಾಸರು ಬಳಸಿದ್ದಾರೆ. ಕೊಂಕಣಿಗರ ಎಮ್ಮೆಗೆ ಕೊಡತಿಯೆ ಮದ್ದು, ಜಾಣನಿಗೆ ಮಾತಿನ ಪೆಟ್ಟು ಕೋಣನಿಗೆ ದೊಣ್ಣೆ ಪೆಟ್ಟು ಎಂಬಂತೆ ನಿನಗೆ ಎದುರು ಬೀಳುವವರೆ ಸರಿ ನನ್ನಂಥ ಸಾಧುಭಕ್ತ ಅಲ್ಲ ಎಂದು ಹೇಳುವಲ್ಲಿ ಇರುವ ವ್ಯಂಗ್ಯ ಮತ್ತು ನಿಂದೆಗಳು ಗಮನಾರ್ಹವಾಗಿದೆ. ಒಳಾರ್ಥದಲ್ಲಿ ಅವರೆ ಮದ್ದು ಎನ್ನುವಲ್ಲಿ ಅವರೇ ಶ್ರೇಷ್ಠಭಕ್ತರು ಎಂಬ ಅಂತರಾರ್ಥವೂ ಅಡಗಿದೆ. ನಿಂದಾಸ್ತುತಿಯಲ್ಲಿ ವಾಚ್ಯಾರ್ಥಕ್ಕಿಂತ ವ್ಯಂಗ್ಯಾರ್ಥ ಅಂತರಾರ್ಥ ಸತ್ಯವಾಗಿರುತ್ತದೆ.

ಹೀಗೆ ಪ್ರಶ್ನಿಸುತ್ತಲೇ ಎಚ್ಚರಿಕೆಯನ್ನು ನೀಡುತ್ತಾನೆ ಭಕ್ತ, ಬುದ್ಧಿ ಹೇಳುತ್ತಾನೆ ಭಗವಂತನಿಗೆ

ಆನೆಯ ಕಾಲಿದಾಗ ಜ್ಞಾನವಿದ್ದದ್ದೇನು?
ನಾನು ಒದರಲು ಈಗ ಕೇಳದಿದ್ದದ್ದೇನು?
ದಾನವಾಂತಕ ದೀನರಕ್ಷಕನೆಂಬೋ
ಮಾನವುಳಿಸಿಕೊಳ್ಳೋ ಶ್ರೀ ಪುರಂದರವಿಠಲ[11]

ಇಲ್ಲಿ ಗಜೇಂದ್ರಮೋಕ್ಷದ ಪ್ರಸಂಗ ಉಲ್ಲೇಖಿಸಿ ಆಗ ಭಕ್ತನನ್ನು ರಕ್ಷಿಸಿದಂತೆ ನನ್ನನ್ನು ರಕ್ಷಿಸು ಎಂದಿದ್ದಾರೆ.

ಮತ್ತೊಂದೆಡೆ ಭಗವಂತನನ್ನು ಪಕ್ಷಪಾತಿ, ಅವರಿಂದ ನೀಡಿದ ಲಂಚವೇನು? ನಾನು ಕೊಡದಿರುವುದೇನು ಎಂದು ವ್ಯಂಗ್ಯವಾಗಿ ಪ್ರಶ್ನಿಸುತ್ತಾನೆ.

ನಾರದಮುನಿ ನಿಮ್ಮ ನೆನೆವನಲ್ಲದೆ
ನಾಡುಗಳಷ್ಟು ಕೊಟ್ಟನು ಹೇಳೋ
ಪ್ರಹ್ಲಾದನು ನಿನಗೇನು ಕೊಟ್ಟನೋ ಹೇಳೋ
ನಾನೇನು ಕೊಡದೆ ಹೋದೆನೋ ಹೇಳು
ಅಂದಿನವರಿಗೆ ನೀನು ಏನ ಕೊಟ್ಟೆಯೊ
ಇಂದೇಕೆ ನನಗದು ದೊರಕದೆ ಹೋಯಿತು
ಅಂದು ನೀ ಸಿರಿವಂತನೇ ಇಂದು ಬಡವನೆ
ಇದು ಏನು ವಿಚಿತ್ರ ಪುರಂದರವಿಠಲ[12]

ಭಕ್ತರು ಉಡುಗೊರೆ ಪ್ರತಿಫಲ ಕೊಟ್ಟರೆ ಮೆಚ್ಚುವನಲ್ಲ. ಅವರ ಭಕ್ತಿ ಮೆಚ್ಚಿದವನು ನೀನು ಹಾಗಿದ್ದ ಮೇಲೆ ಅವರೇನು ಕೊಡದಿದ್ದರೂ ಅವನನ್ನು ಮೆಚ್ಚಿ ನೀನು ನನ್ನನೇಕೆ ಮೆಚ್ಚುತ್ತಿಲ್ಲ. ಅಂದು ನೀನು ಶ್ರೀಮಂತನಿದ್ದೆ ಅವರಿಂದ ಏನು ಬೇಕಾಗಿರಲಿಲ್ಲ ಇಂದು ನೀನು ಬಡವ, ನಿನಗೆ ಪ್ರತಿಫಲ ಬೇಕಾಗಿದೆ ಅದನ್ನು ನಾನು ಕೊಡಲಿಲ್ಲ ಅಂತ ನೀನು ನನಗೆ ಒಲಿದಿಲ್ಲವೆ ಎಂದು ಹಂಗಿಸುವುದನ್ನು ಕಾಣಬಹುದು.

ಅಂದು ಶ್ರೀಮಂತನಾದವನು ಸಿರಿಲೋಲ ಇಂದೂ ಸಿರಿಲೋಲನೇ ಬಡವನಲ್ಲ, ಆದರೂ ನನಗೇಕೆ ಒಲಿಯಲಿಲ್ಲ ಎಂಬುದು ನನಗೆ ಅಚ್ಚರಿ ಆಗಿದೆ ಎಂಬರ್ಥವು ಇಲ್ಲಿ ಅಡಗಿದೆ. ಭಗವಂತನ ನಿಂದಾಸ್ತುತಿ ಅಂತರಾರ್ಥದಲ್ಲಿದೆ.

ಭಕ್ತ–ಭಗವಂತ ಭಾವದ ನಿಂದಾಸ್ತುತಿಗಳಲ್ಲಿ ಭಕ್ತನಿಗೆ ಭಗವಂತನಿಗೆ ಸಮಾನ ಜವಾಬುದಾರಿ ಇರುತ್ತದೆ. "ಭಕ್ತಿ ಎಂಬ ಪ್ರಕ್ರಿಯೆಯಲ್ಲಿ ಭಕ್ತಿಯನ್ನು ಮಾಡುವವನಷ್ಟೇ ಮಾಡಿಸಿಕೊಳ್ಳುವವನೂ ಜವಾಬುದಾರ ಎಂದು" ಮುರಳೀಧರರ ಹೇಳುತ್ತಾರೆ.

ಈ ಕೀರ್ತನೆಯಲ್ಲಿ ಭಕ್ತನ ಜವಾಬ್ದಾರಿಯೂ ಇದೆ. ಭಗವಂತನ ಹೊಣೆಗಾರಿಕೆಯೂ ಇದೆ. ಭಗವಂತ–ಭಕ್ತರಿಬ್ಬರೂ ಅರಿಯಬೇಕು ಇದನ್ನು. ಆದ್ದರಿಂದ–

ಎನಗೂ ಆಣೆ ರಂಗ – ನಿನಗೂ ಆಣೆ
ಎನಗೂ ನಿನಗೂ ಇಬ್ಬರಿಗೂ ಭಕ್ತರಾಣೆ

ನಿನ್ನನ್ನು ಬಿಟ್ಟು ಅನ್ಯರ ಭಜಿಸಿದರೆನಗೆ ಆಣೆ – ರಂಗ
ಎನ್ನನು ನೀ ಕೈ ಬಿಟ್ಟು ಪೋದರೆ ನಿನಗೆ ಆಣೆ

ತನುಮನ ಧನದಲಿ ವಂಚಕನಾದರೆ ಎನಗೆ ಆಣೆ – ರಂಗ
ಮನಸು ನಿನ್ನೊಳು ನಿಲಿಸದಿದ್ದರೆ ನಿನಗೆ ಆಣೆ

ಕಾಕು ಮನುಜರ ಸಂಗವ ಮಾಡಿದರೆನಗೆ ಆಣೆ – ರಂಗ
ಲೌಕಿಕವನ್ನು ಬಿಡಿಸದಿದ್ದರೆ ನಿನಗೆ ಆಣೆ

ಶಿಷ್ಟರ ಸಂಗವ ಮಾಡದಿದ್ದರೆ ಎನಗೆ ಆಣೆ – ರಂಗ
ದುಷ್ಟರ ಸಂಗವ ಬಿಡಿಸದಿದ್ದರೆ ನಿನಗೆ ಆಣೆ

ಹರಿ ನಿನ್ನಾಶ್ರಯ ಮಾಡಿದಿದ್ದರೆ ಎನಗೆ ಆಣೆ – ರಂಗ
ಪುರಂದರವಿಠಲ ನೀನೊಲಿಯದಿದ್ದರೆ ನಿನಗೆ ಆಣೆ

ಆಣೆ ಇಟ್ಟು ಹೆದರಿಸಿ ಕೆಲಸ ಮಾಡಿಸಿಕೊಳ್ಳುವ ರೂಢಿ ಇಂದಿಗೂ ಉಂಟು, ದಾಸರು ಭಗವಂತನ ಒಲುಮೆಗಾಗಿ ಭಗವಂತನಿಗೆ ಆಣೆ ಇಡುವುದು ಇಲ್ಲಿನ ಸ್ವಾರಸ್ಯ. ವಿಧಿವಿಹಿತ ಕಾರ್ಯವನ್ನು ಮಾಡಲು ಪ್ರಯತ್ನಿಸುವುದು ತಮ್ಮ ಕರ್ತವ್ಯವೆಂದು ಭಾವಿಸುವ ದಾಸರು, ಆ ಸತ್ಕರ್ಮಗಳು ಫಲಕಾರಿಯಾಗುವಂತೆ ಭಗವಂತನೇ ಜವಾಬ್ದಾರಿ ವಹಿಸಿಕೊಳ್ಳಬೇಕೆಂದು ಭಗವಂತನಿಗೆ ಆಣೆ ಇಟ್ಟಿರುವ ಪರಿ ವೀರಭಕ್ತರ ಕ್ರಮವೆನಿಸುತ್ತದೆ. ಅನ್ಯ ದೈವಗಳನ್ನು ಭಜಿಸದೆ, ತನು ಮನ ಧನವನ್ನು ಭಗವಂತನಿಗೆ ಅರ್ಪಿಸಿ, ಶಿಷ್ಟರ ಸಂಗ ಮಾಡಿ ಹರಿಯನ್ನೇ ಆಶ್ರಯಿಸುವೆನೆಂದು ದಾಸರು ತಿಳಿಸಿ, ಇದಕ್ಕೆ ಪ್ರತಿಯಾಗಿ ದಾಸರನ್ನು ಕೈ ಬಿಟ್ಟರೆ, ಮನಸ್ಸನ್ನು ಭಗವಂತನಲ್ಲಿ ದೃಢವಾಗಿ ನಿಲ್ಲಿಸದಿದ್ದರೆ, ಲೌಕಿಕ

ಆಮಿಷಗಳನ್ನು ಹಾಗೂ ದುಷ್ಟರ ಸಂಗವನ್ನೂ ಬಿಡಿಸದಿದ್ದರೆ. ಪುರಂದರ ವಿಠಲನೊಲಿಯದಿದ್ದರೆ ಆಣೆ ಎಂದು ಹೇಳಿ ಆ ಎಲ್ಲ ಜವಾಬ್ದಾರಿಯನ್ನು ಭಗವಂತ ವಹಿಸಿಕೊಳ್ಳಬೇಕೆಂದು ಆಗ್ರಹ ಪಡಿಸಿರುವುದು. ಹೆಚ್.ಎನ್. ಮುರಳಿಧರರು ತಮ್ಮ ತಂಬೂರಿ ಮೀಟಿದವ ಮಹಾಪ್ರಬಂಧದಲ್ಲಿ[13] ಹೀಗೆ ಹೇಳುತ್ತಾರೆ:– "ಎನಗೂ ಆಣೆ ರಂಗ ನಿನಗೂ ಆಣೆ ಎನಗೂ ನಿನಗೂ ಇಬ್ಬರಿಗೂ ಭಕ್ತರಾಣೆ ಎನ್ನುವಲ್ಲಿ ಈ ಬಗೆಯ ಸಂಬಂಧ ವ್ಯಕ್ತವಾಗಿರುವುದನ್ನು ಕಾಣಬಹುದು. ಭಕ್ತರಾಣೆ ಎಂಬ ಮಾತಿನ ಮೂಲಕವೂ ಈ ಭಕ್ತ ತನ್ನ ಪರವಾಗಿ ವ್ಯಾಜ್ಯಕ್ಕೆ ನಿಲ್ಲಬಲ್ಲ ಪರಿವಾರವೊಂದನ್ನು ಸೂಚಿಸುತ್ತಿರುವನಷ್ಟೇ! ಹೀಗಾಗಿ, ದೇವರಾಣೆಗೆ ಅರ್ಥವಿಲ್ಲ. ಆದ್ದರಿಂದಲೇ ಇಲ್ಲಿ ಭಕ್ತವ ಕಡೆಯಿಂದ ಪ್ರಶ್ನೆಗಳು ಸಾಧ್ಯವಾಗುತ್ತವೆ".

ದುಷ್ಟರಿಂದ ಭಕ್ತರ ರಕ್ಷಣೆ ಸ್ಥಿರಚಿತ್ತವುಂಟು ಮಾಡುವುದು. ಈಷಣತ್ರಯದ ಮೋಹ ಬಿಡಿಸುವುದು, ಭಕ್ತನನ್ನು ಸದಾ ರಕ್ಷಿಸುವುದು ಇವೇ ಮೊದಲಾದ ಕಾರ್ಯ ನೀನು ಮಾತ್ರ ಮಾಡಬಲ್ಲೆ. ಆದ್ದರಿಂದ ಅವುಗಳು ಮಾಡದಿದ್ದರೆ ನಿನ್ನಾಣೆ ಎಂಬ ಮಾತುಗಳಲ್ಲಿ ಭಗವಂತನ ಸ್ತುತಿ ಇದೆ. ನನ್ನ ಪಾಲಿನ ಕರ್ತವ್ಯವೂ ಇದೆ ಎಂಬ ಭಕ್ತನ ವಿನಯವೂ ಇದೆ. ಹೊರನೋಟಕ್ಕೆ ಸವಾಲಾಗಿ ಕಾಣುವ ಪದ್ಯ ಅಂತ್ಯದಲ್ಲಿ ಭಗವಂತನ ಹಿರಿಮೆ ಭಕ್ತನ ಕರ್ತವ್ಯ ವ್ಯಕ್ತವಾಗಿದೆ.

ಭಕ್ತ ಸಂಸಾರಿ ಭಗವಂತನನ್ನು ತನ್ನಂತೆ ಸಂಸಾರಿ ಎಂದೂ ಭಾವಿಸುತ್ತಾನೆ. ಭಗವಂತ ವಿಶ್ವಕುಟುಂಬಿ ಆದರೂ ತನ್ನಂತೆ ಗೃಹಕುಟುಂಬಿ ಅಲ್ಲ ಎಂಬ ಅರಿವು ಭಕ್ತನಿಗಿದೆ. ಆದರೂ ತನ್ನಂತೆಯೇ ಆತನನ್ನು ಸಂಸಾರಿ ಎಂದು ಭಾವಿಸಿ ಆತನನ್ನು ಕುರಿತು ನೀನು ಹೀಗೆ ಮಾಡಬಹುದೇ ಎಂದು ನಿಂದಾರೂಪದಲ್ಲಿ ಕೇಳುತ್ತಾನೆ. ತಾನು ಭಗವಂತನನ್ನು ಹಾಗೆಲ್ಲ ಪ್ರಶ್ನಿಸಬಾರದು ಎಂದು ಒಳಮನಸ್ಸು ಹೇಳಿದರೂ ಮಾನವ ಸಹಜ ಸ್ವಭಾವ ತಡೆಯುವುದಿಲ್ಲ. ಆದ್ದರಿಂದ ಕೇಳು ಕೋಪಿಸಬೇಡ ಹೇಳಲಿಕೆ ಅಂಜುವೆನು ಎಂದು ಹೇಳು ಹೇಳುತ್ತಲೇ ಸಂಕೋಚದಿಂದಲೇ ಪ್ರಶ್ನಿಸುತ್ತಾನೆ.

ಕೇಳು ಕೋಪಿಸಬೇಡ ಹೇಳಲಂಜುವೆ
ಬಾಳು ಬಡತನವ ನಾನು

ತಲೆಗೊಯ್ಕ ಹಿರಿಯ ಮಗ ಇಳೆಗೆ ಪೂಜಿತನಲ್ಲ
ಬಲು ಭಂಡ ನಿನ್ನ ಕಿರಿಯ ಮಗ
ಲಲನೆಯು ಸೇರಿದಳು ಬಲು ಲೋಭಿಗಳ ಮನೆಯ
ಹೊಲೆ ಕುಲವರಿಯಳ ನಿನ್ನ ಸೊಸೆಯು ರಂಗ

ಮಗಳ ಮಾರ್ಗವು ಡೊಂಕು ಮೈದುನ ಗುರುದ್ರೋಹಿ
ಮಗನ ಮಗನು ಚಾಡಿಗಾರ
ಹಗರಣಕೆ ನೀಚರ ಹಣ್ಣು ಮೆದ್ದೆಂಜಲ
ಜಗದೊಡೆಯನೆನಿಸಿಕೊಂಡೆ – ನೀನುಂಡೆ

ಲಕ್ಷ್ಮೀಪತಿಯು ಎನಿಸಿ ಭಿಕ್ಷೆ ಬೇಡಲು ಪೋದೆ
ಪಕ್ಷಿಯಪೆಗಲೇರಿ ರಾಜನೆನಿಸಿದೆ
ಸಾಕ್ಷಾತು ಪುರಂದರವಿಠಲನೆ ನಿನ್ನ ಗುಣ
ಲಕ್ಷಣ ಪೇಳಲಳವೆ – ಕಳವೆ

ನಿನ್ನ ಬಾಳು ಹೊರಗಿನ ನೋಟಕ್ಕೆ ಶ್ರೀಮಂತ ಕುಟುಂಬ, ಆದರೆ ಒಳಗೆ ಗುಣ ಶ್ರೀಮಂತಿಕೆಯಿಲ್ಲದ ಬಡತನದ ಬಾಳಿನಲ್ಲಿ ಇದ್ದವರು ನೀಚಕೆಲಸಕ್ಕೆ ತೊಡಗಿ ಕೆಡುತ್ತಾರಲ್ಲಾ ಹಾಗಿದೆ.

ಹಿರಿಯ ಮಗ (ಬ್ರಹ್ಮ) ಲೋಕಸೃಷ್ಟಿಯನ್ನು ಮಾಡಿ ಜನರ ಹಣೆಯಬರಹ ಬರೆದ ವಿಧಾತ. ಆದರೆ ಶಿವನು ಸುಳ್ಳು ಹೇಳಿದ್ದಕ್ಕೆ ಒಂದು ತಲೆ ಕತ್ತರಿಸಿದ್ದಾನೆ. ಆದ್ದರಿಂದ ತಲೆಗೊಯ್ಕರ (ತಲೆ ತೆಗೆಸಿಕೊಂಡವನು ಎಂಬ ವ್ಯಂಗ್ಯ ನುಡಿ) ಭೃಗು ಮಹರ್ಷಿಯ ಶಾಪನಿಮಿತ್ತ ಭೂಮಿಯಲ್ಲಿ ಪೂಜಿಸಲು ಅನರ್ಹವಾದನು.

ಇನ್ನು ಕಿರಿಯ ಮಗ ಮನ್ಮಥ ಮೋಹಜನಕ ಕಾಮಾತುರಾಣಾಂ ನಭಯಂ ನಲಜ್ಜಾ ಎಂಬಂತೆ ಅವನಿಗೆ ರೀತಿನೀತಿಗಳಿಲ್ಲ. ಲಲನೆ ಸೇರಿದಳು ಬಲುಲೋಭಿಗಳ ಮನೆಯಲ್ಲಿ. ಲಕ್ಷ್ಮಿ ಸಿರಿದೇವತೆ ದಾನಿಗಳು ಲೋಕದಲ್ಲಿ ಶ್ರೇಷ್ಠರಾದರು ಅವರಲ್ಲಿ ನೆಲಸುವುದಿಲ್ಲ. ಲೋಭದಿಂದ ನಿನ್ನನ್ನು ಕೂಡಿ ಹಾಕುವ ಜಿಪುಣರಿಗೆ ಒಲಿಯುತ್ತಾಳೆ. ದುಷ್ಟರ ಸಹವಾಸಿ ಆಕೆ.

ಇನ್ನು ನಿನ್ನ ಸೊಸೆ ಸರಸ್ವತಿ ಹೊಲೆ ಕುಲವರಿಯಳು ವಿದ್ಯಾದೇವತೆ. ಯಾರಿಗಾದರೂ ಒಲಿಯುತ್ತಾಳೆ. ವಿದ್ಯೆ ಕಷ್ಟಪಟ್ಟವರ ಸಾಧನೆ ಮಾಡಿದವರ ಸೊತ್ತು. ಅದಕ್ಕೆ ಕುಲಭೇದಗಳಿಲ್ಲ. ಆಕೆಗೆ ನೀಚೋಚ್ಚ ಕುಲಭೇದವಿಲ್ಲ. ನಿನ್ನ ಸೊಸೆ ರತಿ ಎಂದು ಅಷ್ಟೆ. ಮೋಹ ಯಾರಲ್ಲಿ ಬೇಕಾದರೂ ಮೂಡಬಹುದು. ಅಂತರಜಾತಿ ವಿವಾಹಗಳಾಗಬಹುದು ಗೋಕುಲನಾಥರು ನಿನ್ನ ಸೊಸೆ ಸರಸ್ವತಿ ಎನ್ನುವ ಬದಲು 'ರತಿ' ಎಂದು ಅರ್ಥೈಸಿದ್ದಾರೆ.

ಮಗಳ ಮಾರ್ಗವು ಡೊಂಕು. ಮಗಳು ಎಂದರೆ ಗಂಗೆ, ಗಂಗೆ ನದಿ. ನದಿ ಹರಿಯುವುದು ಅಂಕುಡೊಂಕಾಗಿ ಅಂದರೆ ನಿನ್ನ ಮಗಳು ನೆಟ್ಟಗಿಲ್ಲ. ನೇರವಿಲ್ಲ. ಮೈದುನ ಗುರುದ್ರೋಹಿ (ನಿನ್ನ ಪತ್ನಿ ಲಕ್ಷ್ಮಿಯ ತಮ್ಮ ಚಂದ್ರ) ಬೃಹಸ್ಪತಿಯ ಪತ್ನಿ ತಾರೆಯೊಡನೆ ಸಹವಾಸ ಮಾಡಿ ಗುರುವಿನ ಶಾಪಕ್ಕೆ ಒಳಗಾದವನು.

ಮಗನ ಮಗನು ಚಾಡಿಕೋರ - ಮಗ ಬ್ರಹ್ಮ ಅವನ ಮಗ ನಿನ್ನ ಮೊಮ್ಮಗ ನಾರದ. ಲೋಕಗಳನ್ನು ಸುತ್ತಾಡಿ ಅಲ್ಲಿ ಸುದ್ದಿ ಇಲ್ಲಿ, ಇಲ್ಲಿ ಸುದ್ದಿ ಅಲ್ಲಿ ಹೇಳಿ ಕಲಹ ತಂದಿಡುವ ಕಲಹಕೋರ.

ಹಗರಣಕೆ ನೀಚರ ಹಣ್ಣ ಮೆದ್ದು ಎಂಜಲ ಜಗದೊಡೆಯ ಎನಿಸಿಕೊಂಡೆ = ವಂಶದ ಹಿರಿಮೆ ಹೇಳೋಣವೆಂದರೆ - ರಾಮಾವತಾರದಲ್ಲಿ ಹೀನಕುಲದ ಶಬರಿಯ ಎಂಜಲ ನೇರಿಳೆ ತಿಂದು ಪಗರಣವುಂಟು ಮಾಡಿ ಜಗದೊಡೆಯ ರಾಮನಾದೆ.

ಲಕ್ಷ್ಮೀಪತಿಯು ಎನಿಸಿ ಭಿಕ್ಷೆ ಬೇಡಲು ಪೋದೆ = ವಾಮನಾವತಾರದಲ್ಲಿ ವಟುವಾಗಿ ಬಲಿಚಕ್ರವರ್ತಿ ಬಳಿ ಲಕ್ಷ್ಮೀಪತಿಯಾದ ನೀನು ಗತಿವಿಹೀನನಂತೆ ಮೂರಡಿ ನೆಲ ಬೇಡಿದೆ ವಿಶ್ವಪತಿ ಆದ ನೀನು.

ಲೋಕದಲ್ಲಿ ರಾಜರು ಚಕ್ರವರ್ತಿಗಳು ಸಿಂಹಾಸನವನೇರುತ್ತಾರೆ ಪಲ್ಲಕ್ಕಿ ಏರುತ್ತಾರೆ. ಅಂಬಾರಿ ಏರುತ್ತಾರೆ. ನೀನು ಕ್ಷುದ್ರದೇವತೆಗಳು ಪ್ರಾಣಿಪಕ್ಷಿ ವಾಹನವೇರುವಂತೆ ಹದ್ದಿನ ಹೆಗಲೇರಿ ದೊರೆ ಎನಿಸಿಕೊಂಡೆ. ಹೀಗಿರುವಾಗ ನಿನ್ನ ಗುಣ ಲಕ್ಷಣಗಳನ್ನು ಏನೆಂದು ಹೊಗಳಲಿ ಎಂದು ಶ್ರೀಹರಿಯ ಪರಿವಾರವನ್ನು ನಿಂದಿಸುತ್ತಲೇ ಲೋಕಶ್ರೇಷ್ಠರಾದ ಲಕ್ಷ್ಮಿ, ಬ್ರಹ್ಮ, ನಾರದ, ಶಬರಿ, ರಾಮ, ವಾಮನ ಮೊದಲಾದವರನ್ನು ತೆಗಳುವ ಪರಿ ಅನ್ಯಾದೃಶವಾದುದು. ನಿಜಕ್ಕೂ ಇದೊಂದು ಶ್ರೇಷ್ಠ ನಿಂದಾಸ್ತುತಿ. ಮುಂಡಿಗೆ ರೂಪದಲ್ಲಿ ಇರುವ ನಿಂದಾಸ್ತುತಿ.

ಭಗವಂತನನ್ನು ಹಂಗಿಸಬಲ್ಲ ಭಕ್ತ ನಾಮಸ್ಮರಣೆಯ ಹಿರಿಮೆಯನ್ನು ಸಾರುವುದರ ಮೂಲಕ ಭಗವಂತನನ್ನು ನಿಂದಿಸುವ ಚಮತ್ಕಾರ ನಿಜಕ್ಕೂ ಮೆಚ್ಚುವಂತದ್ದು[14].

"ನಾಮಸ್ಮರಣೆಯಲ್ಲಿ ಭಕ್ತ ಸಕ್ರಿಯನಾಗುತ್ತಾನೆ. ನಾಮದ ಹಿರಿಮೆ ಬಗ್ಗೆ ಮುರಳೀಧರರ ಮಾತುಗಳು ಮನನೀಯವಾಗಿದೆ ಇನ್ನು ನಾಮದ ವಿಚಾರ ಇಲ್ಲಿ ದೇವರು ನಿಜವಾಗುವುದು ನಾಮದ ನಿಜದಲ್ಲಿ. ಇದು ನಾಮದ ವಿನ್ಯಾಸಗಳ ಮೂಲಕವೇ ರೂಪದ ವಿನ್ಯಾಸಗಳನ್ನು ಕಂಡರಿಸುತ್ತಾ ಹೋಗುವ ಕ್ರಮವೂ ಹೌದು. ಕೀರ್ತನೆಗಳ

ಒಟ್ಟಾರೆ ಅಭಿವ್ಯಕ್ತಿಯೇ ನಾಮದ ವಿನ್ಯಾಸಗಳನ್ನು ಸೃಷ್ಟಿಸುವುದರ ಕಡೆಗೆ ಹರಿದಿರುವಂಥದ್ದು ನಾಮವೆನ್ನುವುದು ಲೌಕಿಕದಲ್ಲಿ ನಿಜವಾಗುವುದರೊಂದಿಗೆ ತನ್ನಷ್ಟಕ್ಕೆ ತಾನೇ ಒಂದು ಪರಂಪರೆಯನ್ನು ಹೊಂದಿದೆ. ದಾಸರು ಈ ಪರಂಪರೆಯೊಂದಿಗೆ ತಮ್ಮನ್ನು ಗುರುತಿಸಿಕೊಂಡರು. ಅದರಿಂದಲೇ ಬಲಗೊಂಡವರು". ಆದ್ದರಿಂದ ಭಕ್ತರಿಗೆ ಭಗವನ್ನಾಮ ಒಂದು ಪ್ರಬಲ ಅಸ್ತ್ರ. ಭಗವಂತನೊಡನೆ ಸರಸ–ವಿರಸಗಳಾಡಲು ಮತ್ತು "ವ್ಯವಸ್ಥೆಯ ಸ್ಥಾಯಿತ್ವ ನಿರಾಕರಿಸಲು ದಾಸರಿಗೆ ಬಲ ನೀಡಲು ನಾಮದ ಬಲ ನೆರವಾಗಿದೆ".

ನಾಮಸ್ಮರಣೆಯ ಬಲವನ್ನು ಕುರಿತು ಗಿರಡ್ಡಿ ಗೋವಿಂದರಾಜು ತಮ್ಮ ವಚನ ವಿನ್ಯಾಸ ಗ್ರಂಥದಲ್ಲಿ ಹೇಳಿರುವ ಮಾತುಗಳು ಗಮನಾರ್ಹವಾಗಿವೆ.

"ದೇವರ ಹಾಗೆ ಬೇಡವೆನ್ನುವ ಪುರಂದರದಾಸರ ಧೈರ್ಯಕ್ಕೆ ದೇವರ ನಾಮದ ಮೇಲಿರುವ ವಿಶ್ವಾಸವೇ ಕಾರಣವಾಗಿದೆ. ಆ ನಾಮವನ್ನು ಭಕ್ತಿಯಿಂದ ಸ್ಮರಿಸಿದರೆ ದೇವರು ತನ್ನೆಲ್ಲ ಬಿಂಕ, ಸೆಡವು, ಸಿಟ್ಟು ಬಿಟ್ಟು ಅನಿವಾರ್ಯವಾಗಿ ಒಲಿಯಲೇಬೇಕು. ಇಂಥ ಜಗಳ ಭಕ್ತಿಯ ಪಾರಮ್ಯದಲ್ಲಿ ಮಾತ್ರ ನಡೆಯತಕ್ಕದ್ದು"

ನೀನ್ಯಾಕೋ ನಿನ್ನ ಹಂಗ್ಯಾಕೋ
ನಿನ್ನ ನಾಮದ ಬಲವೊಂದಿದ್ದರೆ ಸಾಕೋ

ಆ ಮರ ಈ ಮರ ಧ್ಯಾನಿಸುತಿರುವಾಗ
ರಾಮ ರಾಮ ಎಂಬ ನಾಮವೇ ಕಾಯ್ತೊ

ಬಾಲೆಯ ಸಭೆಯಲಿ ಸೀರೆಯ ಸೆಳೆವಾಗ
ಬಾಲಕೃಷ್ಣನೆಂಬ ನಾಮವೆ ಕಾಯ್ತೊ

ಯಮನ ದೂತರು ಬಂದು ಅಜಾಮಿಳನೆಳೆವಾಗ
ನಾರಾಯಣನೆಂಬ ನಾಮವೆ ಕಾಯ್ತೊ

ಪ್ರಹ್ಲಾದನ ಪಿತ ಬಾಧಿಸುತಿರುವಾಗ
ನಾರಸಿಂಹನೆಂಬ ನಾಮವೇ ಕಾಯ್ತೊ

ಹಸುಳೆ ಆ ಧ್ರುವರಾಯ ಅಡವಿಗೆ ಪೋಪಾಗ
ವಾಸುದೇವನೆಂಬ ನಾಮವೆ ಕಾಯ್ತೊ

ನಿನ್ನ ನಾಮಕೆ ಸರಿ ಯಾವುದು ಕಾಣೆನೊ
ಘನ್ನ ಮಹಿಮ ಸಿರಿ ಪುರಂದರವಿಠಲ

ಈ ಕೀರ್ತನೆಯಲ್ಲಿ ನಾಮಸ್ಮರಣೆಯಿಂದ ಕಷ್ಟಗಳಿಂದ ಪಾರಾದವರ ಕಥೆಗಳಿವೆ. ವಾಲ್ಮೀಕಿ, ದ್ರೌಪದಿ, ಅಜಾಮಿಳ, ಗಜೇಂದ್ರ, ಪ್ರಹ್ಲಾದ, ಧ್ರುವ ಇವರು ನಾಮದ ಸ್ಮರಣೆಯಿಂದ ತಮಗೊದಗಿದ ಪ್ರಾಣಹರಣ ಅಥವಾ ಮಾನಹರಣ ಸಂದರ್ಭದಲ್ಲಿ ಹೇಗೆ ಪಾರಾದರು ಎಂದು ಹೇಳಿ ಅಂಥ ಸಂದರ್ಭಗಳಲ್ಲಿ ಭಗವಂತ ಭಕ್ತರ ಕಷ್ಟಗಳಿಗೆ ನೆರವಾದದ್ದು ತಾನೇ ಬಂದಿದ್ದ ಎಂಬಲ್ಲಿ ಭಕ್ತ ನಾಮಸ್ಮರಣೆಯ ಬಲದಿಂದ ಬಳಿಗೆ ಬಂದು ನೆರವು ನೀಡುವಂತೆ ಮಾಡಿದ್ದರಿಂದ ಎಂಬುದು ಇಲ್ಲಿ ವ್ಯಕ್ತವಾಗಿದೆ. ನವವಿಧಭಕ್ತಿಗಳಲ್ಲಿ ಒಂದಾದ (ನಾಮ) ಸ್ಮರಣ ಭಕ್ತಿಯ ಹಿರಿಮೆಯನ್ನು ಕಾಣುತ್ತೇವೆ. ನಾಮಸ್ಮರಣೆಯ ಕೀರ್ತನಗಳನ್ನು ಶ್ರೀಪಾದರಾಜರಾದಿಯಾಗಿ ಎಲ್ಲ ಹರಿದಾಸರು ಹಾಡಿದ್ದರೂ ವ್ಯಾಜಸ್ತುತಿಯ ಹಾಡುಗಳು ಅಪರೂಪ. ನೇರವಾದ ಉಪದೇಶ, ಬಿನ್ನಹದ ನಾಮದ ಹಿರಿಮೆ ಹಾಡುಗಳೇ ಅಧಿಕವಾಗಿದೆ.

ದಾಸಸಾಹಿತ್ಯದ ಮೊದಲ ಮತ್ತು ಎರಡನೇ ಘಟ್ಟದ ದಾಸರ ಕೃತಿಗಳಲ್ಲಿ ನಿಂದಾಸ್ತುತಿಯ ಹಾಡುಗಳು ಪೌರಾಣಿಕ ವಸ್ತುವನ್ನು ರಾಮಾಯಣ, ಭಾರತ, ಭಾಗವತ ಕಥನಗಳನ್ನು ಉದಾಹರಿಸಿವೆ ಅಥವಾ ದಾಸರು ತಮ್ಮ ಬಡತನ, ವೈಯಕ್ತಿಕ ಸಂಗತಿಗಳ ಹಿನ್ನೆಲೆಯಲ್ಲಿ ನಿಂದಾಸ್ತುತಿ ಮಾಡಿದ್ದಾರೆ. ಆದರೆ 20ನೇ ಶತಮಾನದ ಹರಿದಾಸರು ಹರಿದಾಸರನ್ನೇ ಕುರಿತು ನಿಂದಾಸ್ತುತಿ ರಚಿಸಿರುವುದು ಒಂದು ವಿಶೇಷ ಎನ್ನಬಹುದು.

ಹುಯಿಲಗೋಳ ನಾರಾಯಣರಾಯರು ಪುರಂದರದಾಸರನ್ನೇ ಕುರಿತು ನಿಂದಾಸ್ತುತಿ ರಚಿಸಿದ್ದಾರೆ[15].

ಜಿಪುಣರೈ ನೀವೆಂದು ಹೇಳಿದುದು ಸುಳ್ಳಲ್ಲ
ಜಿಪುಣರೈ ನೀವೆಂದು ಹೇಳಿದುದು ಸುಳ್ಳಲ್ಲ
ವನಜನಾಭನ ಸ್ತುತಿಗೆ ಶಬ್ದ ಸಂಪತ್ತೆಲ್ಲ
ಒಸೆದು ನೀವೇ ಬಳಸಿ ನನಗೇನು ಕೊಡಲಿಲ್ಲ
– – – – – – – – – – – – – – –
ನಿಮ್ಮ ಖಂಜೂತನದ ಕತೆಯನ್ನು ಹೇಳಲಾಸಲ್ಲ
ಕಂಜನಾಭನ ಮಹಿಮೆ ಬಣ್ಣಿಸುವ ನೆವದಲ್ಲಿ
ರಂಜನೆಯ ಶಬ್ದಗಳ ಸವಿದುಂಡೆಯಲ್ಲಿ
ಎಂಜಲವ ಉಳಿದೆನಗೆ ಕಿಂಚಿತ್ತು ಬಿಡಲಿಲ್ಲ

ಹುಯಿಲಗೋಳರು ದಾಸರನ್ನು ನಿಂದಿಸುವುದರ ಮೂಲಕ ಪುರಂದರರ ಹಿರಿಮೆಯನ್ನು ಸಾರಿದ್ದಾರೆ.

ಮುರಳೀಧರರು ಭಗವಂತನ ನಿಂದಾಸ್ತುತಿಗಳನ್ನು ಎರಡು ಮಾದರಿಗಳಲ್ಲಿ ಗುರುತಿಸಿದ್ದಾರೆ[16]. ಭಕ್ತ ತನ್ನ ಅಂತರಂಗವನ್ನು ಉದ್ದೇಶಿಸಿ ಹೇಳಿದ್ದು, ಇನ್ನೊಂದು ಬಹಿರಂಗವನ್ನು ಉದ್ದೇಶಿಸಿ ಹೇಳಿದ್ದು. ಬಹಿರಂಗದ ಮಾದರಿಯ ನಿಂದಾಸ್ತುತಿಗಳಲ್ಲಿ ದೇವರ ಲೀಲೆ ಅಥವಾ ಅವತಾರಗಳನ್ನು ಕುರಿತು ಕಟಕಿ ಆಡುವುದನ್ನು ಕಾಣುತ್ತೇವೆ ಎನ್ನುತ್ತಾರೆ. ಅದಕ್ಕೆ ನಿದರ್ಶನವಾಗಿ ಈ ಕೀರ್ತನೆಯನ್ನು ಉದಾಹರಿಸಲಾಗಿದೆ.

ಆರು ಬದುಕಿದರಯ್ಯ ಹರಿ ನಿನ್ನ ನಂಬಿ
ತೋರು ಈ ಜಗದೊಳಗೆ ಒಬ್ಬರನು ಕಾಣೆ

ಕಲಹಬಾರದ ಹಾಗೆ ಕರ್ಣನನು ನೀ ಕೊಂದೆ
ಸುಲಭದಲಿ ಕೌರವರ ಮನೆಯ ಮುಂದೆ
ನೆಲವ ಬೇಡಲು ಪೋಗಿ ಬಲಿಯ ತಲೆಯನು ತುಳಿದೆ
ಮೊಲೆಯನುಣಿಸಲು ಬಂದ ಪೂತನಿಯ ಕೊಂದೆ

ಕರಪತ್ರದಿಂದ ತಾಮ್ರಧ್ವಜನ ತಂದೆಯನು
ಕೊರಳ ಕೊಯಿಸಿದೆ ನೀನು ಕುಂದಿಲ್ಲದೆ
ಮರುಳನಂದದಿ ಪೋಗಿ ಭೃಗುಮುನಿಯ ಕಣ್ಣೊಡೆದೆ
ಅರಿತು ನರಕಾಸುರನ ಹೆಂಡಿರನು ಬೆರೆದೆ

ತಿರಿದುಂಬ ದಾಸರ-ಕೈಲಿ ಕಪ್ಪವಕೊಂಬೆ
ಗರುಡವಾಹನ ನಿನ್ನ ಚರಿಯವರಿಯೆ
ದೊರೆ ಪುರಂದರ ವಿಠಲ ನಿನ್ನನು ನಂಬಿದರೆ
ತಿರುಪೆಯೂ ಹುಟ್ಟಲೊಲ್ಲದು ಕೇಳೊ ಹರಿಯೆ

"ಬಹಿರಂಗದ ಮಾದರಿ ನಿಂದಾಸ್ತುತಿಗಳಲ್ಲಿ ರಾಮಾಯಣ, ಮಹಾಭಾರತ, ಭಾಗವತವೇ ಮೊದಲಾದವುಗಳಿಂದ ತನ್ನ ವಾದಕ್ಕೆ ಸಮರ್ಥನೆ ಆಗುವಂತೆ ಘಟನಾವಳಿ ಜೋಡಿಸುವುದು ಇಲ್ಲಿನ ವಿಧಾನ. ಈ ಜೋಡಣೆಯಲ್ಲಿ ಘಟನೆಗಳ ಕಾಲವಾಗಲಿ, ಕಾಲ್ಪನಿಕತೆಯಾಗಲಿ ಇಲ್ಲಿ ಪರಿಗಣಿತವಾಗುವುದಿಲ್ಲ. ಎಲ್ಲವನ್ನು ಸಮಕಾಲೀನ ವಾಸ್ತವತೆಯಂತೆ ನಿರೂಪಿಸಲಾಗುತ್ತದೆ. ಹೆಚ್ಚಿನ ಕೀರ್ತನೆಗಳ ಈ ವಿಧಾನವನ್ನು ಅನುಸರಿಸಿವೆ" ಎಂಬ ಮುರಳೀಧರರ ಮಾತು ಒಪ್ಪತಕ್ಕದ್ದಾಗಿದೆ[17].

ಇಲ್ಲಿಯ ಭಾಗವತದ ಕಥೆಗಳ ನಿಂದಾಸ್ತುತಿಯಲ್ಲಿ ಪೌರಾಣಿಕ ಸಂಗತಿಗಳನ್ನು ಕುರಿತು ಎಸ್ಕೆ.ರಾಮಚಂದ್ರರಾಯರು ಹೇಳಿರುವ ಮಾತುಗಳು ಗಮನಾರ್ಹವಾಗಿದೆ[18].

"ಇದು ನಿಂದಾಸ್ತುತಿ. ಜನರ ಕಣ್ಣಿಗೆ ತಪ್ಪೆಂದು ಮೋಸವೆಂದು ಕ್ರಾರ್ಯವೆಂದು ಕಂಡರೂ ಹರಿಯ ಲೀಲೆಯಲ್ಲಿ ಲೋಕೋಪಕಾರ ಬುದ್ಧಿಯೇ ಇರುವುದು. ಲೋಕಕಂಟಕರಾದವರ ಬಲಗುಂದಿಸಲು ಅವರನ್ನು ತೊಲಗಿಸಲು ಹರಿಯ ಲೀಲೆ. ಶಿಷ್ಟರಕ್ಷಣೆಯ ಸಲುವಾಗಿ ದುಷ್ಟಶಿಕ್ಷಣ, ಇಲ್ಲಿ ದುಷ್ಟಶಿಕ್ಷಣವನ್ನೇ ಎತ್ತಿ ತೋರಿಸಿದ್ದಾರೆ".

ಈ ಕೀರ್ತನೆಯಲ್ಲಿ ತಾಮ್ರಧ್ವಜ, ಭೃಗುಮುನಿ, ಕರ್ಣ, ದುರ್ಯೋಧನ, ಬಲಿ, ಪೂತನಿ ಇವರೆಲ್ಲರ ಅನ್ಯಾಯದ, ಉದ್ಧಟತನದ ದುಷ್ಟತನಕ್ಕೆ ಶ್ರೀಹರಿ ಶಿಕ್ಷೆ ವಿಧಿಸಿದ್ದನ್ನು ತಿಳಿಸಿದ್ದಾರೆ. ಭೂಲೋಕದಲ್ಲಿ ದುಷ್ಟವ್ಯಕ್ತಿಗಳು ಅಧರ್ಮದಿಂದ ವರ್ತಿಸಿದಾಗ ನಿರ್ದಾಕ್ಷಿಣ್ಯವಾಗಿ ಶಿಕ್ಷಿಸುವ ಭಗವಂತನ ಲೀಲೆಯನ್ನು ಇಲ್ಲಿ ಕಾಣಬಹುದು. ಭಾರತ-ಭಾಗವತದ ಕಥೆಗಳನ್ನು ಇಲ್ಲಿ ಜೋಡಿಸಿದ ಜಾಣ್ಮೆ ಮೆಚ್ಚುವಂತಹದ್ದು. ಕರಪತ್ರದಿಂದ ತಾಮ್ರಧ್ವಜನ ತಂದೆಯು ಕೊರಳ ಕುಯಿಸಿದೆ=ಮಣಿಪುರದ ರಾಜ ಮಯೂರಧ್ವಜನ ಮಗ ತಾಮ್ರಧ್ವಜನು ಯುಧಿಷ್ಠಿರನ ಅಶ್ವಮೇಧಯಾಗದ ಯಜ್ಞಾಶ್ವವನ್ನು ಅಡ್ಡಗಟ್ಟಿ ಸೆಣಸಲು ಬಂದ ಅರ್ಜುನನನ್ನು ಸೋಲಿಸಿದ. ಆಗ ಮಯೂರಧ್ವಜನ ಭಕ್ತಿಯನ್ನು ಅರ್ಜುನನಿಗೆ ಮನದಟ್ಟು ಮಾಡಿಸಲು ಮತ್ತು ಯಾಗ ಸಂರಕ್ಷಣೆಯ ಕರ್ತವ್ಯ ನೆರವೇರಿಸಲು ವಿಪ್ರವೇಷಧಾರಿಯಾಗಿ ಕೃಷ್ಣನು ಮಯೂರಧ್ವಜನ ಬಳಿ ಹೋಗಿ ಮಯೂರಧ್ವಜ ತನ್ನ ಮಗನನ್ನು ಬದುಕಿಸಲು ಮಯೂರಧ್ವಜನ ಅರ್ಧದೇಹ ಬೇಕೆಂದು ಕೇಳಿದನು. ಆಗ ಮಯೂರಧ್ವಜನು ಅದಕ್ಕೆ ಒಪ್ಪಿ ಕರಪತ್ರ (ಗರಗಸ)ದಿಂದ ತನ್ನ ಅರ್ಧದೇಹ ಕತ್ತರಿಸಿಕೊಂಡು ಕೊಡಲು ಒಪ್ಪುತ್ತಾನೆ. ಆಗ ಕೃಷ್ಣ ಅವನ ಭಕ್ತಿಗೆ ಮೆಚ್ಚಿ ತನ್ನ ನಿಜಸ್ವರೂಪ ತೋರಿಸುತ್ತಾನೆ.

ಇಲ್ಲಿ ಮಯೂರಧ್ವಜನ ಕೃಷ್ಣಭಕ್ತಿಯನ್ನು ತಿಳಿದೂ ಸಹ ದಾಸರು ನಂಬಿದ ಭಕ್ತನ ಕೊರಳ ಕೊಯ್ದು ವಂಚಕ ಎಂದು ನಂಬಿಸುತ್ತಾರೆ.

ಭೃಗುಮುನಿಯ ಕಣ್ಣೊಡೆದೆ ಮರುಳನಂದದಿ ಪೋಗಿ=ಬಲಿಚಕ್ರವರ್ತಿಯ ದಾನಗುಣ ಪರೀಕ್ಷಿಸಲು ವಟುರೂಪದಲ್ಲಿ ಬಂದ ಶ್ರೀಹರಿ ಮೂರಡಿ ನೆಲ ಬೇಡಿದಾಗ ಅದನ್ನು ಧಾರಾಪೂರ್ವಕ ಕೊಡಲು ಗಿಂಡಿಯಿಂದ ನೀರನ್ನು ಕೈಗೆ ಹಾಕಿಕೊಳ್ಳುವಾಗ, ಬಲಿಯು ದಾನವನ್ನು ನೀಡುವುದನ್ನು ವಿರೋಧಿಸಿದ ಗುರು ಶುಕ್ರಾಚಾರ್ಯರು ನೀರಿನ ಗುಂಡಿ ಒಳಗೆ ಅಂತರ್ಧಾನವಾಗಿ ಕುಳಿತು ಅದರ ಬಾಯಿಂದ ನೀರು ಬರದಂತೆ ಮಾಡಿದರು. ಆಗ ವಾಮನ ದರ್ಭೆಯಿಂದ ಆ ನೀರಿನ ಕಿಂಡಿಯನ್ನು ಚುಚ್ಚಿದಾಗ ಶುಕ್ರಚಾರ್ಯರ ಒಂದು ಕಣ್ಣು ನಾಶವಾಯಿತು. ನಿಷ್ಠಾವಂತನಾಗಿ ರಾಜಗುರು ತನ್ನ ಶಿಷ್ಯನನ್ನು

ಕಾಪಾಡಲು ಶುಕ್ರಾಚಾರ್ಯ ತೋರಿದ ರಾಜನಿಷ್ಠೆಯನ್ನು ಹೊಗಳುತ್ತಲೇ ಅದರ ಕೃತ್ಯವನ್ನು ನಿಂದಾರೂಪವಾಗಿ ವರ್ಣಿಸಿರುವುದನ್ನು ಇಲ್ಲಿ ಕಾಣಬಹುದು.

ಗೋಕುಲನಾಥರು ತಮ್ಮ ಟಿಪ್ಪಣಿಯಲ್ಲಿ ಭೃಗುವನ್ನು ಶುಕ್ರಾಚಾರ್ಯರು ಎಂದಿದ್ದಾರೆ. ಇದು ಸರಿಯಲ್ಲ ಭೃಗುವೇ ಶುಕ್ರಾಚಾರ್ಯರಲ್ಲ, ಭೃಗುವಿನ ಮಗ ಶುಕ್ರಾಚಾರ್ಯ ಎಂಬುದನ್ನು ಗಮನಿಸಬೇಕು[19]. ಈ ಮಾತಿಗೆ ಗೋಕುಲನಾಥರು ಮೇಲಿನ ವಿವರಣೆ ನೀಡಿದರೆ ಎಸ್ಕೆ ರಾಮಚಂದ್ರರಾಯರು ಬೇರೆ ಪ್ರಸಂಗವನ್ನು ಉದಾಹರಿಸುತ್ತಾರೆ[20]. ಹರಿದಾಸರ ಕೀರ್ತನೆಗಳಲ್ಲಿ ಬರುವ ಪ್ರಸಂಗಗಳ ಪೂರ್ವಕಥೆಗಳು ಯಾವುವು ಎಂದು ಖಚಿತವಾಗಿ ಹೇಳಲು ಬರುವುದಿಲ್ಲ ಎಂಬುದನ್ನು ಇಲ್ಲಿ ಕಾಣಬಹುದು.

ಎಸ್ಕೆ ರಾಮಚಂದ್ರರಾಯರು ಹೇಳುವ ಪೂರ್ವಕಥೆ ಹೀಗಿದೆ: "ಸರಸ್ವತೀ ನದಿಯ ದಡದ ಮೇಲೆ ಋಷಿಗಳು ಯಜ್ಞಮಾಡುತ್ತ ಅಗ್ರಪೂಜೆಯನ್ನು ಮಾಡುತ್ತ ಯಾವ ದೇವತೆಗೆ ಸಲ್ಲಿಸಬೇಕೆಂಬ ವಿಚಾರವಾಗಿ ವಿವಾದವೊದಗಿ, ಭೃಗುಮುನಿಯು ತ್ರಿಮೂರ್ತಿಗಳ ಸತ್ವಪರೀಕ್ಷೆ ಮಾಡಲು ಹೊರಟಾಗ ವೈಕುಂಠದಲ್ಲಿ ನಾರಾಯಣನು ಲಕ್ಷ್ಮಿಯೊಂದಿಗೆ ಸುಖನಿದ್ರೆಯೊಳಿದ್ದು ತಾನು ಬಂದದನ್ನು ಅರಿಯದೆ ಇರಲು ಭೃಗುಮುನಿಯು ಸಿಟ್ಟಗೆದು ನಾರಾಯಣನನ್ನು ತನ್ನ ಬಲಗಾಲಿನಿಂದ ಒದ್ದ. ಒಡನೆಯೇ ನಾರಾಯಣನು ಎದ್ದು ಕ್ಷಮೆಯನ್ನು ಬೇಡುತ್ತ ಮುನಿಯ ಕಾಲಿಗೆಷ್ಟು ನೋವಾಯಿತೋ ಎಂದು ಅವನ ಕಾಲುಗಳನ್ನು ಒತ್ತುತ್ತ ಕಾಲಿನಲ್ಲಿದ್ದ ಕಣ್ಣನ್ನು ಕಿತ್ತುಬಿಟ್ಟ. ಕಾಲಲ್ಲಿ ಕಣ್ಣಿದೆ ಎಂಬ ಅಹಂಕಾರವಿದ್ದ ಭೃಗುಮುನಿಗೆ ತಕ್ಕ ಶಾಸ್ತಿ ಆಯಿತು".

ಇಲ್ಲಿ ಭಕ್ತರು ಅಹಂಕಾರದಿಂದ ಮೆರೆದರೆ ಅವರಿಗೆ ತಕ್ಕ ಬುದ್ಧಿಯನ್ನು, ತಾನೇ ನೇರವಾಗಿ ಶಿಕ್ಷಿಸುತ್ತಾನೆ. ಆ ಮೂಲಕ ಸಜ್ಜನಭಕ್ತರನ್ನು ರಕ್ಷಿಸುತ್ತಾನೆ ಎಂದು ಹೊಗಳಿಕೆ ಅಂತರಾರ್ಥದಲ್ಲಿಟ್ಟು ಹೊರಗೆ ಈ ಕೃತ್ಯವನ್ನು ವಾಚ್ಯವಾಗಿ ಭೃಗುಮುನಿಯ ಕಣ್ಣೊಡೆದೆ ಎಂದಿದ್ದರೆ ಇಲ್ಲಿ ಮರುಳನಂದದಿ ಪೋಗಿ ಎಂದಿದೆ ಪಾಠ (ಎಸ್ಕೆಆರ್. ಮತ್ತು ಗೋಕುಲನಾರ್ಥ ಪ್ರತಿಗಳಲ್ಲಿ). ಆದರೆ ಇಲ್ಲಿ ಪೋಗಿ ಬದಲಿ ಬಾಗಿ ಎಂಬ ಪಾಠಾಂತರ ಸೂಕ್ತ ಎನಿಸುತ್ತದೆ.

ಇದೇ ರೀತಿಯಾಗಿ ಅರಿತು ನರಕಾಸುರನ ಹೆಂಡಿರನು ಬೆರೆದೆ, ಕಲಹಬಾರದ ಮುನ್ನ ಕರ್ಣನನನು ನೀ ಕೊಂದೆ, ಮೊಲೆಯಣಿಸಲು ಬಂದ ಪೂತನಿಯ ಕೊಂದೆ – ಓಿಗೆ ಸಾಲುಸಾಲಾಗಿ ದೃಷ್ಟಾಂತಗಳನ್ನು ನೀಡುತ್ತಾ ದೃಷ್ಟಾಂತಾಲಂಕಾರದಲ್ಲಿ ನಿಂದಾಸ್ತುತಿ ಬರುತ್ತದೆ ಎಂಬುದನ್ನು ತಿಳಿಸಲಾಗಿದೆ. ಹರಿದಾಸರು ನಿಂದಾಸ್ತುತಿಗೆ ಪುರಾಣದ ಪ್ರಸಂಗಗಳನ್ನು ಧಾರಾಳವಾಗಿ ಬಳಸಿಕೊಂಡಿರುವುದನ್ನು ಇಲ್ಲಿ ಕಾಣಬಹುದು.

ಹರಿದಾಸರ ನಿಂದಾಸ್ತುತಿಗಳಲ್ಲಿ ದಾಸರ ತೀರ್ಥಯಾತ್ರೆ ಅಥವಾ ಪುಣ್ಯಕ್ಷೇತ್ರ ಯಾತ್ರೆಗೆ ಸಂಬಂಧಿಸಿದ ನಿಂದಾಸ್ತುತಿಗಳಲ್ಲಿ ದಾಸರ ಬದುಕಿನ ಘಟನೆಗಳು ಮತ್ತು ಆಯಾ ಕ್ಷೇತ್ರದ ಹಿರಿಮೆ ಮೊದಲಾದವು ಪ್ರತಿಪಾದಿತವಾಗಿವೆ.

ಹರಿದಾಸರು 'ದೇಶವನು ಚರಿಸಿದವ ಪಂಡಿತನಲ್ಲ' ಎಂಬಂತೆ, ಯಾತ್ರೆ ಮಾಡದವ ಹರಿದಾಸನಲ್ಲ ಎಂಬ ಪಂಥದವರು. ಪ್ರತಿಯೊಬ್ಬ ಹರಿದಾಸರೂ ಅನಿಕೇತರು, ಕುಟೀಚಕರಲ್ಲ. ಕರ್ನಾಟಕದ ಹಾಗೂ ದಕ್ಷಿಣ ಭಾರತದ ಪುಣ್ಯಕ್ಷೇತ್ರಗಳನ್ನು ಕಾಲ್ನಡಿಗೆಯಲ್ಲಿ ಮಧುಕರಿವೃತ್ತಿಯಲ್ಲಿ ಸಂಚರಿಸಿ ಭಗವಂತನನ್ನು ದರ್ಶಿಸಿದ್ದಾರೆ. ಹೀಗೆ ಲೋಕಸಂಚಾರ ಗೈಯುತ್ತ ಹರಿನಾಮಸ್ಮರಣೆಯನ್ನು ಕೀರ್ತನ ಮಾಧ್ಯಮದಲ್ಲಿ ಪ್ರಸಾರ ಮಾಡಿದ್ದರಿಂದ. ನಾಡಿನುದ್ದಕ್ಕೂ ಹರಿದಾಸ ಸಾಹಿತ್ಯ ಹರಡಲು ಸಾಧ್ಯವಾಯಿತು. ಜೈನ ವೈಷ್ಣವ ಕಾವ್ಯಗಳನ್ನು ಕವಿಗಳು ರಚಿಸಿದಾಗ ಆ ಕಾವ್ಯಗಳ ಪ್ರತಿಗಳನ್ನು ಗಮಕಿಗಳು ವಾಚಿಸಿ ಜನರಲ್ಲಿ ಧಾರ್ಮಿಕಜಾಗೃತಿ ಉಂಟುಮಾಡಿದರು. ಶರಣ ಸಾಹಿತ್ಯದಲ್ಲಿ ಎಲ್ಲ ವರ್ಗದ ಜನ ವಚನಸಾಹಿತ್ಯ ರಚನೆಯಲ್ಲಿ ಪಾಲ್ಗೊಂಡದ್ದರಿಂದ ಅದು ಪ್ರಸಾರವಾಯಿತು. ಆದರೆ ಹರಿದಾಸ ಪದ್ಯದಲ್ಲಿ ಆಶುಕವಿತ್ವದಲ್ಲಿ ಸ್ವತಃ ಕವಿಯೇ ಅರ್ಥಾತ್ ಹರಿದಾಸರೇ ಎಲ್ಲ ಕಡೆ ಸಂಚರಿಸಿ ಕೀರ್ತನೆಗಳ ಮೂಲಕ ಹರಿಭಕ್ತಿ ಹರಡಿದರು.

ಹೀಗಾಗಿ ವೈವಿಧ್ಯಮಯ ವಿಷಯಗಳನ್ನು ಕುರಿತು ನಾನಾ ರೀತಿಯ ಸಾಮಾಜಿಕ ಪರಿಸ್ಥಿತಿಯನ್ನು ಗಮನಿಸಿ ವಾಸ್ತವಿಕ ನೆಲಗಟ್ಟಿನಲ್ಲಿ ಕೀರ್ತನೆಗಳನ್ನು ರಚಿಸಿದ್ದ ಜನರ ಮನಸ್ಸಿಗೆ ನೇರವಾಗಿ ನಾಟಿತು. ಅವರ ಹೃದಯವನ್ನು ಮೀಟಿತು. ಹೀಗಾಗಿ ಒಂದೇ ವಸ್ತು ತನ್ನ ಅರ್ಥಾತ್ ಒಂದೇ ದೇವರನ್ನು ಅಥವಾ ಒಂದೇ, ಸ್ಥಳದ ಅಧಿದೇವತೆಯನ್ನು ಹತ್ತಾರು ಮಂದಿ ಹರಿದಾಸರು ಬಣ್ಣಿಸಿದ್ದರೂ ಅವು ವೈಶಿಷ್ಟ್ಯ ವಿಶೇಷತರನಾಗಿದೆ. ವಿಭಿನ್ನ ಸ್ವಂತಿಕೆಯಿಂದ ಕೂಡಿವೆ.

ಹರಿದಾಸರೆಲ್ಲ ತಪ್ಪದೆ ಸಂದರ್ಶಿಸಿರುವ ಕ್ಷೇತ್ರಗಳಲ್ಲಿ ತಿರುಪತಿ ಒಂದು. ಎಲ್ಲ ಪ್ರಮುಖ ಹರಿದಾಸರೂ ತಿರುಪತಿ ತಿಮ್ಮಪ್ಪನನ್ನು ದರ್ಶಿಸಿದ್ದಾರೆ. ಅವನ ಭಕ್ತರಾಗಿದ್ದಾರೆ. ನಿಂದಾಸ್ತುತಿಗಳಲ್ಲಿ ತಿರುಪತಿಯನ್ನು ಕುರಿತ ಸಂಗತಿಗಳು ದೊರೆಯುತ್ತವೆ.

ಉದಾಹರಣೆಗೆ ಒಂದೆರಡು ಪ್ರಸಂಗಗಳನ್ನು ಪರಿಶೀಲಿಸಬಹುದು. ಆದು ಬದುಕಿದರಯ್ಯ ಹರಿ ನಿನ್ನ ನಂಬಿ ಎಂಬ ಕೀರ್ತನೆಯಲ್ಲಿ ಪುರಂದರದಾಸರು ತಿರುಪತಿ ಸಂದರ್ಶಿಸಿದಾಗ ರಚಿಸಿದ ಕೀರ್ತನೆ ಆಗಿದೆ.

ತಿರಿದುಂಬ ದಾಸರ ಕೈಲಿ ಕಪ್ಪವ ಕೊಂಬೆ
ಗರುಡವಾಹನ ನಿನ್ನ ಚರಿಯವರಿಯೆ
ದೊರೆ ಪುರಂದರವಿಠಲ ನಿನ್ನನು ನಂಬಿದರೆ
ತಿರುಪೆಯೂ ಹುಟ್ಟಲೊಲ್ಲದು ಕೇಳೊ ಹರಿಯೆ

ಎನ್ನುತ್ತಾರೆ.

ಭಕ್ತರು ತಿರುಪತಿ ತಿಮ್ಮಪ್ಪನಿಗೆ ಕಪ್ಪಕಾಣಿಕೆ ಒಪ್ಪಿಸುವುದು ಎಲ್ಲರೂ ಬಲ್ಲರು, ಎಲ್ಲ ಭಕ್ತರೂ ಕಾಣಿಕೆ ಅರ್ಪಿಸುತ್ತಾರೆ. ಆ ಪೈಕಿ ಹರಕೆ ಹೊತ್ತವಂತೂ ತಪ್ಪದೆ ಕಾಣಿಕೆ ಒಪ್ಪಿಸುತ್ತಾರೆ. ಹಾಗೆ ಹರಕೆ ಹೊತ್ತವರು, ಮುಡಿಪು ಕಟ್ಟಿಟ್ಟವರು ಒಪ್ಪಿಸದಿದ್ದರೆ ತಿಮ್ಮಪ್ಪ ಅದನ್ನು ಬಿಡದೆ ವಸೂಲಿ ಮಾಡುತ್ತಾನೆ ಎಂಬ ನಂಬಿಕೆ ಭಕ್ತರಲ್ಲಿ ಬಲವಾಗಿದೆ. ಇದು ದಾಸರ ಕಾಲದಲ್ಲೂ ಇತ್ತು. ಹರಿದಾಸರೂ ಹೊರತಾಗಿಲ್ಲ. ಹರಿದಾಸರು ಮಧುಕರಿ ವೃತ್ತಿಯಿಂದ ಉಳಿದವರಂತೆ ಸಂಪಾದಿಸುವವರಲ್ಲ, ಉಳ್ಳವರಲ್ಲ, ಆದರೂ ನೀನು ಅವರಿಂದಲೂ ವಸೂಲಿ ಮಾಡುವೆ ಎಂದಿದ್ದಾರೆ.

ದೊರೆ ಪುರಂದರ ವಿಠಲ ನಿನ್ನನು ನಂಬಿದರೆ ತಿರುಪೆಯೂ ಹುಟ್ಟಲೊಲ್ಲದು ಕೇಳೋ ಹರಿಯೆ ಎಂಬ ಮಾತಿನಲ್ಲಿ ಗೋವಿಂದ ನಾಮಸ್ಮರಣೆ ಮಾಡಿದರೆ ಸಿರಿ ಸಿಗುವುದಿಲ್ಲ ಅಷ್ಟೇ ಅಲ್ಲ ಹೊಟ್ಟೆಪಾಡಿಗೆ ಬೇಕಾದ ಭಿಕ್ಷೆಯೂ ಹುಟ್ಟುವುದಿಲ್ಲ ಎಂದು ನಿಂದಿಸುತ್ತಾರೆ. ಆದರೆ ಇದರ ಅಂತರಾರ್ಥ ವಾಚ್ಯಾರ್ಥಕ್ಕಿಂತ ಭಿನ್ನವಾಗಿದೆ ಎಂದು ಹೇಳುತ್ತ ಗೋಕುಲನಾಥರು ಹೀಗೆ ಅರ್ಥೈಸಿದ್ದಾರೆ.

'ನಿನ್ನನ್ನು ನಂಬಿದರೆ ತಿರುಪೆಯೂ ಹುಟ್ಟಲೊಲ್ಲದು' ಎಂಬ ವಾಕ್ಯ ಅರ್ಥಗರ್ಭಿತವಾದುದು. ಜೀವರು ತಮ್ಮ ಕರ್ಮಾನುಗುಣವಾಗಿ ದುಃಖಾನುಭವ ಪಡೆಯುವಂತೆ ಭಗವಂತನು ನಿಯೋಜಿಸುವನೇ ವಿನಾ ಅವನ ನಾಮಸ್ಮರಣೆ ಮಾಡಿದಾಕ್ಷಣ ಜೀವರ ಸಕಲ ದುಃಖಗಳನ್ನು ಪರಿಹಾರ ಮಾಡುವುದಿಲ್ಲವಾದುದರಿಂದ ದಾಸರು ಈ ರೀತಿ ಹೇಳಿರುವರು. ಸತ್ಕರ್ಮಗಳನ್ನು ಹಿಂದಿನ ಜನ್ಮದಲ್ಲಿ ಮಾಡಿದ್ದರೆ ಸುಖವೂ, ದುಷ್ಕರ್ಮಗಳನ್ನು ಮಾಡಿದ್ದರೆ ದುಃಖವೂ ಕಟ್ಟಿಟ್ಟ ಬುತ್ತಿ ಎಂಬುದನ್ನು ಭಗವಂತನು ದಯಾವಂತನೆನಿಸಿದ್ದರೂ ಕರ್ಮವನ್ನು ಮೀರಿ ಕೆಲಸ ಮಾಡುವುದಿಲ್ಲ ಎಂಬುದನ್ನು ದಾಸರು ಈ ವಾಕ್ಯದಲ್ಲಿ ಧ್ವನಿಸುವರು.

ತಿಮ್ಮಪ್ಪನನ್ನು ಒಂದು ಬಗೆಯಲ್ಲಲ್ಲ ಹತ್ತಾರು ರೀತಿಯಲ್ಲಿ ಹರಿದಾಸರು ವ್ಯಾಜಸ್ತುತಿ ಮಾಡಿದ್ದಾರೆ. ಇನ್ನೊಂದೆಡೆ ತಿರುಪತಿ ಕ್ಷೇತ್ರದಲ್ಲಿ ಆ ಕಾಲದಲ್ಲಿ ನಡೆಯುತ್ತಿದ್ದ ವಿದ್ಯಮಾನಗಳನ್ನು ಕುರಿತು ಹೇಳುತ್ತಾ ತಿಮ್ಮಪ್ಪನನ್ನು ನಿಂದಿಸುತ್ತಾರೆ.

ಧಣಿಯ ನೋಡಿದೆನೋ ವೆಂಕಟನ ಮನ
ದಣಿಯ ನೋಡಿದೆ ಶಿಖಾಮಣಿಯ ನಿರ್ಮಲನ

ಕೇಸಕ್ಕಿ ಅನ್ನ ತಿಂಬುವನ ಬಡ್ಡಿ
ಕಾಸು ಬಿಡದೆ ಹೊನ್ನ ಬಳಸಿಕೊಂಬುವನ
ದೋಸೆ ಅನ್ನ ಮಾರಿಸುವನ, ತನ್ನ
ದಾಸರ ಮೇಳದಿ ಕುಣಿದಾಡುತಿಹನ

ಗಂಟಿನೊಲ್ಲಿಯ ಪೊದ್ದಿಹನ ಹೊರ
ಹೊರಟು ಹೋಗಿ ಬೇಟೆಯಾಡುತಲಿಹನ
ಘಂಟೆನಾದಕೆ ಒಲಿಯುವವನ, ಭತಾ ವೈ
ಕುಂಠವಿದೆಂದು ಹಸ್ತವ ತೋರಿದವನ

ಬೆಟ್ಟದೊಳಗೆ ಇರುತಿಹನ, ಮನ
ಮುಟ್ಟಿ ಭಜಿಪ ಭಕುತರಿಗೊಲಿದವನ
ಕೊಟ್ಟ ವರವ ತಪ್ಪದವನ ಈ
ಸೃಷ್ಟಿಗಧಿಕ ಪುರಂದರ ವಿಠಲನ

ಈ ಕೀರ್ತನೆಯಲ್ಲಿ ದಾಸರು ಸರ್ವಗುಣಸಂಪನ್ನನ, ಸರ್ವಾಂಗ ಪರಿಪೂರ್ಣನ ವೈಭವೋಪೇತ ವೆಂಕಟೇಶ್ವರನ ದರ್ಶನ ಮಾಡಿದಾಗ ಲೌಕಿಕ ವ್ಯಾಪಾರದ ವ್ಯಕ್ತಿಯಂತೆ ತನ್ನ ವೆಂಕಟನನ್ನು ಕಂಡು ನಿಂದಾದೃಷ್ಟಿಯಿಂದ ಬಣ್ಣಿಸಿದ್ದಾರೆ. ಕೊಟ್ಟಣದ ಕೆಂಪಕ್ಕಿ ಆ ಕಾಲದಲ್ಲಿ ತಿಮ್ಮಪ್ಪನಿಗೆ ನೈವೇದ್ಯ ಮಾಡುತ್ತಿದ್ದರು ಅಂತ ಕಾಣುತ್ತೆ. ಸಾಮಾನ್ಯರು ಆ ಕಾಲದಲ್ಲಿ ಬಳಸುತ್ತಿದ್ದ ಅಕ್ಕಿ ಅದು. ಸಿರಿವಂತರು, ಗಂಧಶಾಲಿಯಂಥ ಅಕ್ಕಿ ಬಳಸುತ್ತಿದ್ದರು. ಬಡ್ಡಿ ಕಾಸು ಬಿಡದೆ ಹೊನ್ನು ಬಳಸಿಕೊಳ್ಳುವ ಸಿರಿವಂತ ಕೇಸಕ್ಕಿ ಅನ್ನ ತಿಂಬರೆ! ಎಂದು ನಿಂದಿಸುತ್ತಾರೆ. ಈ ನಿಂದೆ ಹಿಂದೆ ಭಕ್ತರಿಗೆ ಪ್ರಿಯವಾದ (ಹರಿದಾಸರು ಉಣ್ಣುತ್ತಿದ್ದ ಕೇಸಕ್ಕಿ ಅನ್ನ ನೀನು ಉಣ್ಣುತ್ತಿರುವುದು) ನೀನು ಭಕ್ತಪ್ರಿಯ ಎಂಬ ಹೊಗಳಿಕೆ ಈ ಮಾತಿನಲ್ಲಿದೆ. ಇನ್ನು ಇಷ್ಟು ಸಿರಿವಂತ ತಿಮ್ಮಪ್ಪನ ನೆಲೆಯಲ್ಲಿ ಅಡಗೂಲಜ್ಜಿ ಮನೆಯೊಳಿದ್ದು ಹಣ ಪಡೆದು ಆ ಕಾಲದಲ್ಲಿ ತಿರುಪತಿಯಲ್ಲಿ ಊಟ ಹಾಕುತ್ತಿರಬಹುದು. ಅನ್ನದಾನವನ್ನು ಉಚಿತವಾಗಿ ಅಧಿಕ ಪ್ರಮಾಣದಲ್ಲಿ ಮಾಡುತ್ತಿರಲಿಲ್ಲ ಅಂತ ಕಾಣುತ್ತೆ. ಅದಕ್ಕಾಗಿ ದೋಸೆ ಅನ್ನ ಮಾರಿಸುವನ ಎಂದಿದ್ದಾರೆ. ನೃತ್ಯವಾದ್ಯಗೀತ ನಿಪುಣರಾದ ರಂಭೆ ಊರ್ವಶಿ, ತುಂಬರ, ನಾರದ ಮೊದಲಾದವರಿಂದ ಕಲಾ ಸೇವೆ ಪಡೆಯುವ ಸಕಲಕಲಾನಿಪುಣ ವೆಂಕಟೇಶ ಜಾನಪದರಂತೆ ಮುಗ್ಧಭಕ್ತಿಯಿಂದ ಹರಿದಾಸರು ಭಜನಮೇಳದಲ್ಲಿ ನರ್ತಿಸುತ್ತಿದ್ದಾರೆ

ಅವರಿಗೆ ಒಲಿದು ನೀನು ಅವರಂತೆ ಕುಣಿದಾಡುವೆ ಎಂದರೆ, ಸಾಮಾನ್ಯರ ನಡುವೆ ಪಾಮರನಂತೆ ನಲಿಯುವೆಯಲ್ಲಾ ಎಂದು ವಾದಿಸಿದ್ದಾರೆ. ಆದರೆ ಒಳಾರ್ಥದಲ್ಲಿ ನಿಷ್ಕಲ್ಮಶಭಾವದಿಂದ, ಗಾನನೃತ್ಯಗಳಲ್ಲಿ ಪಾಮರರು ನಲಿದಾಡಿದಾಗ ಕಲಾಪ್ರಪೂರ್ಣ ನೀನು ಅವರ ಜಾನಪದ ನೃತ್ಯಗೀತೆಗಳಲ್ಲಿ ಪಾಲ್ಗೊಂಡು ನಿನ್ನ ಭಕ್ತಪ್ರೇಮ ವ್ಯಕ್ತಪಡಿಸುವೆ ಎಂದಿದ್ದಾರೆ.

ಹರಿದಾಸರ ಕೀರ್ತನೆಗಳಲ್ಲಿ ನಿಂದಾಸ್ತುತಿ ಇಡೀ ಕೀರ್ತನೆ ಉದ್ದಕ್ಕೂ ಕಂಡುಬಂದಂತೆ ಪ್ರಾಸಂಗಿಕವಾಗಿ ಒಂದೆರಡು ಚರಣಗಳಲ್ಲಿ ಕಂಡುಬರುವುದುಂಟು. ಈ ಕೀರ್ತನೆಯಲ್ಲಿ ಮೊದಲ ಚರಣದಲ್ಲಿ ಮಾತ್ರ ನಿಂದಾಸ್ತುತಿ ಕಾಣುತ್ತದೆ.

ಕನಕದಾಸರು ತಿರುಪತಿ ತಿಮ್ಮಪ್ಪನನ್ನು ಕುರಿತ ನಿಂದಾಸ್ತುತಿಯಲ್ಲಿ ತಿಮ್ಮಪ್ಪನನ್ನು ಗೋವಿಂದಶೆಟ್ಟಿ ಎಂದು ಕರೆದಿದ್ದಾರೆ. ಶೆಟ್ಟಿ ಎಂದರೆ ವ್ಯಾಪಾರಿ. ಇಲ್ಲಿ ತೀರ್ಥಪ್ರಸಾದಗಳನ್ನು ಮಾರುವ ಪದ್ಧತಿಯನ್ನು ಕುರಿತು ಟೀಕಿಸಿದ್ದಾರೆ. ಪ್ರಸಾದವನ್ನು ಉಚಿತವಾಗಿ ಕೊಡಬೇಕು, ಆದರೆ ತಿರುಪತಿಯಲ್ಲಿ ಮಾರಲಾಗುತ್ತದೆ ಇಂದೂ ಸಹ. ಇದರ ಬಗ್ಗೆ ಮಾರಾಟಕ್ಕಿಟ್ಟಾಗ ಅಪ್ಪಾಲು, ಅತಿರಸ, ಕಜ್ಜಾಯ ಇತ್ಯಾದಿ ಭಕ್ಷ್ಯಭೋಜ್ಯಗಳನ್ನು ನಾಮದುಂಡೆಯನ್ನು ಅನ್ನವನ್ನು ಎಲ್ಲವನ್ನು ಛಪ್ಪನ್ನ ದೇಶಕ್ಕೆ ಮಾರುವವರನ್ನು ಕಂಡರು ಎಂದರೆ ದೂರದ ದೇಶಗಳಿಂದ ಬಂದವರಿಗೆ ಮಾರುತ್ತಿದ್ದದ್ದನ್ನು ಕಂಡು ಕಡುಲೋಭಿ ನೀನು ಎಂದು ದೂರಿದರು. ಆಸೆಯಿಂದ ಧನಮೋಹಿಯಾದ "ಹಣಕಾಸು ಗಳಿಸುವ ಆದಿಕೇಶವ ನಾರಾಯಣನೆಂಬ ಶೆಟ್ಟಿ" ಎಂದು ನಿಂದಿಸಿದ್ದಾರೆ. ಬಡಪಾಯಿ ಕನಕದಾಸರಂಥ ಭಕ್ತರಿಗೆ ಉಚಿತ ಆಹಾರ ಪ್ರಸಾದ ದೊರಕದಿಂದ ದೇವಸ್ಥಾನದ ವ್ಯವಸ್ಥೆಯನ್ನು ಟೀಕಿಸಿದ್ದಾರೆ. ಇನ್ನೊಂದು ಅರ್ಥದಲ್ಲಿ ಭಗವಂತನ ಪ್ರಸಾದ ಸೌಲಭ್ಯದಲ್ಲಿ ಉಚಿತದಲ್ಲಿ ದೊರಕುವುದಿಲ್ಲ. ಪುಣ್ಯಧನ ಉಳ್ಳವರಿಗೆ ದೊರಕುವುದು ಎಂಬ ದನಿ ಇಲ್ಲಿದೆ.

ಒಡೆದ ಮಡಕೆಯನ್ನು ಇಡದೆ ನಾಮನ ಮಾಡಿ
ಕೊಡುವೆ ನೀ ಕಾಸಿಗೆ ಒಂದೊಂದನು
ಒಡಲು ತುಂಬಿ ಮಿಕ್ಕ ಅನ್ನವ ಮಾರಿಸಿ
ಒಡವೆಯ ಗಳಿಸುವ ಕಡುಲೋಭಿಶೆಟ್ಟಿ

ಎಂಬುದು ತಿರುಪತಿಯಲ್ಲಿ ದಾಸರ ಕಾಲದ ಆಚರಣೆಗಳನ್ನು ತಿಳಿಸುತ್ತದೆ.

ಇನ್ನು ತಿಮ್ಮಪ್ಪನಿಗೆ ಮಾಡುತ್ತಿದ್ದ ನೈವೇದ್ಯದ ವಿವರ ಕೀರ್ತನೆಯ ಮೊದಲ ಚರಣದಲ್ಲಿದೆ.

ಅಪ್ಪಾಲು ಅತಿರಸ ತುಪ್ಪ ಕಜ್ಜಾಯವು
ಒಪ್ಪುವ ಯಾಲಕ್ಕಿ ಶುಂಠಿ ಮೆಣಸು

ಅಷ್ಟರೂಪವಾದ ಕಜ್ಜಾಯರಾಶಿಗಳ
ಛಪ್ಪನ್ನ ದೇಶಕ್ಕೆ ಮಾರುವ ಶೆಟ್ಟಿ

ಎಂಬ ಮಾತುಗಳು ಗಮನಾರ್ಹವಾಗಿವೆ.

ತಿರುಪತಿಯ ಅನುಭವ ಪ್ರತಿಯೊಬ್ಬ ಹರಿದಾಸರಿಗೂ ವಿಶಿಷ್ಟ ಅನುಭವ ಆಗಿದೆ. ಒಬ್ಬರಿಗಾದ ಅನುಭವ ಇನ್ನೊಬ್ಬರಿಗೆ ಆಗಿಲ್ಲ. ಹಲವಾರು ನಿಂದಾಸ್ತುತಿಗಳನ್ನು ಈ ಬಗ್ಗೆ ನೋಡಬಹುದು. ಈ ಪೈಕಿ ಬಹಳ ಪ್ರಸಿದ್ಧವಾದ ನಿಂದಾಸ್ತುತಿಗಳಲ್ಲಿ ಒಂದು ಎಂದರೆ ವಿಜಯದಾಸರ ತಿರುಪತಿ ಅನುಭವದ ಕೀರ್ತನೆ ಸೊಗಸಾದ ನಿಂದಾಸ್ತುತಿ ಇದು. ಇದರ ಪಠ್ಯ ಹೀಗಿದೆ:

ನಿನ್ನ ದರುಶನಕೆ ಬಂದವನಲ್ಲವೊ
ಪುಣ್ಯವಂತರ ದಿವ್ಯಚರಣ ನೋಡಲಿ ಬಂದೆ

ಎಲ್ಲೆಲ್ಲಿ ನಿನ್ನ ವ್ಯಾಪ್ತತನವಿರಲಿಕ್ಕೆ
ಇಲ್ಲಿಗೆ ಬರುವ ಕಾರಣವಾವುದೋ
ಸೊಲ್ಲಿಗೆ ಕಂಭದೊಳು ತೋರಿದ ಮಹಾಮಹಿಮ
ಅಲ್ಲಿ ಇಲ್ಲೇನಯ್ಯ ಬಲ್ಲ ಭಕುತರಿಗೆ

ಕರೆವಾಗಲೇ ಓಡಿ ಬಂದೊದಗುವೋ ದೇವ
ಮರಳಿ ಗಾವುದವೆಣಿಸಿ ಬರಲ್ಯಾತಕೋ
ನೆರೆನಂಬಿದವರಿಗಾವಲ್ಲಿಯಾದರೆ ಏನೋ
ಅರಿತವರ ಮನದಲ್ಲಿ ನಿಂದಾಡುವ ಚೆಲ್ವ

ಧ್ಯಾನಕ್ಕೆ ಸಿಕ್ಕುವ ನಿನ್ನ ಕಾಣಲಿಬಹುದೊ
ಜ್ಞಾನಿಗಳು ಎಂತು ಬರುವರೊ ಅಲ್ಲಿಗೆ
ಅನಂತ ಜನುಮದಲ್ಲಿ ಜಪತಪ ವ್ರತಹೋಮ
ಏನೇನು ಮಾಡಿದರಷ್ಟು ಜನ ಕೊಡುವುದೋ ದೇವ

ಕಠಿಣವೊ ನಿನ್ನ ಭಕ್ತರ ದರುಶನ ಲಾಭ
ಸಟೆಯಲ್ಲಿ ವೇದಗಳು ಸಾರುತಿದೆಕೋ
ವಟುವೇ ಮೊದಲಾದ ವೈಷ್ಣವರಂಘ್ರಿಗಳು ಲವ
ತೃಟಿಯಾದರೂ ಸೋಂಕಲದು ಗತಿಗೆ ದಾರಿ

ನೀನಿದ್ದ ಸ್ಥಾನದಲಿ ಸರ್ವ ಪುಣ್ಯಕ್ಷೇತ್ರ
ನೀನಿದ್ದ ಸ್ಥಾನದಲಿ ಸಕಲ ತೀರ್ಥ
ನೀನಿದ್ದ ಸ್ಥಾನದಲಿ ಸಮಸ್ತ ತಾತ್ತ್ವಿಕರು
ನಾನಿತ್ತ ಬಂದದ್ದು ನಿನಗೆ ತಿಳಿಯದೆ ಸ್ವಾಮಿ

ಇದೇನೆ ಲಾಲಿಸು ಜೀಯ ನಿನ್ನದೊಂದೇ ಮೂರ್ತಿ ನಿ
ನ ದರುಶನವಿಲ್ಲದೆ ಮಿಗಿಲಾವುದೊ
ಪದೆಪದೆಗೆ ಮಧ್ವಮತ ಪೊಂದಿದ ಸುರಜನರ
ಹೃದಯದಲಿ ಒಂದೊಂದು ಪರಿ ನಿನ್ನ ರೂಪಗಳು

ಭಳಿರೆ ತಿರುಮಲರಾಯ ನಿನ್ನ ಕರುಣಾರಸಕೆ
ನೆಲೆಗಾಣೆ ನೆಲೆಗಾಣೆ ನೆರೆಹೊರೆಯಲಿ
ಒಲಿದು ಭಕ್ತರಿಗಾಗಿ ಮನೆ ಹವಣಿಸಿಕೊಂಡೆ
ಸುಲಭ ದೇವರ ದೇವ ವಿಜಯವಿಠಲರೇಯ

ವಿಜಯದಾಸರು ಹತ್ತಾರು ಬಾರಿ ತಿರುಪತಿಗೆ ಹೋಗಿ ಬಂದಿದ್ದಾರೆ. ಒಂದೊಂದು ಬಾರಿ ಒಂದೊಂದು ಬಗೆಯ ಅನುಭವವಾಗಿದೆ. ಒಮ್ಮೆ ತಿರುಪತಿಯ ಉತ್ಸವಕಾಲದ ನೂಕುನುಗ್ಗಲಿನಲ್ಲಿ ತಿಮ್ಮಪ್ಪನ ದರುಶನ ವಿಜಯದಾಸರಿಗಾಗಲಿಲ್ಲ. ಎಷ್ಟೇ ಪ್ರಯತ್ನಿಸಿದರೂ ಅವರನ್ನು ಒಳಕ್ಕೆ ಬಿಡಲಿಲ್ಲ. ಉಳಿದ ಗಣ್ಯರನ್ನು ಒಳಗೆ ಬಿಡಲಾಗುತ್ತಿತ್ತು. ಆಗ ದಾಸರು ವ್ಯಂಗ್ಯವಾಗಿ ವೆಂಕಟನನ್ನು ನಿಂದಿಸುತ್ತಾರೆ.

ನೀ ನನ್ನ ನೋಡಲಾರೆ ನನ್ನ ದರುಶನ ನಿನಗಷ್ಟು ಸುಲಭವಲ್ಲ ಎಂದು ಹೇಳುತ್ತಿರುವೆಯಾ ಅದಕ್ಕಾಗಿ ನನ್ನನ್ನು ರಥೋತ್ಸವದ ನೂಕುನುಗ್ಗಲಿನಲ್ಲಿ ನನ್ನನ್ನು ಹಿಂದುಳಿಯುವಂತೆ – ನಿನ್ನ ದರುಶನವಾಗದಂತೆ ಮಾಡಿದೆ. ಇಷ್ಟಕ್ಕೂ ನಿನ್ನನ್ನಾರು ನೋಡಲು ಬಂದಿದ್ದಾರೆ. ನಾನಂತು ಬಂದಿಲ್ಲ. ನಾನು ನೋಡಲು ಬಂದಿರುವುದು ನಿನ್ನನ್ನಲ್ಲ. ನಿನ್ನ ಅನುಗ್ರಹಕ್ಕೆ ಒಳಗಾದ ಪುಣ್ಯವಂತರ ಚರಣಗಳ ದರುಶನಕ್ಕೆ ಬಂದೆ ಎಂದಿದ್ದಾರೆ. ನಿನಗಿಂತ ನಿನ್ನ ಭಕ್ತರು ಹೆಚ್ಚು ಎಂದು ಕೊಂಡಾಡುವುದರ ಮೂಲಕ ವೆಂಕಟೇಶನನ್ನು ನಿಂದಿಸಿದ್ದಾರೆ.

ನೀನು ಸರ್ವವ್ಯಾಪಿಯಾಗಿರುವೆ ಭಕ್ತರಿಗೆ ಇದ್ದಲ್ಲೆ ದರುಶನ ಕೊಡುವವನು ನೀನು. ನಿನ್ನನ್ನು ಇಲ್ಲಿ ಬಂದು ನೋಡುವ ಪ್ರಮೇಯವೇನಿದೆ. ಪ್ರಹ್ಲಾದನಿಗೆ ಕಂಬದಲ್ಲಿ ಕಾಣಿಸಿಕೊಂಡವನು ನೀನಲ್ಲವೇ ಅದಕ್ಕಾಗಿ ನಾ ನಿನ್ನ ಇಲ್ಲಿ ನೋಡಬಂದವನಲ್ಲ ಎಂದಿದ್ದಾರೆ.

ಅಂತರಂಗವಾಸಿಯಾದ ನಿನ್ನನ್ನು ಬಹಿರಂಗದಲ್ಲಿ ನೋಡಲು ಯಾಕೆ ಬರಬೇಕು? ಧ್ಯಾನಕ್ಕೆ ಸಿಕ್ಕುವ ನಿನ್ನನ್ನು ಕಾಣಲಾಗದವರು ಇಲ್ಲಿಗೆ ಬರುತ್ತಾರೆ ಅಷ್ಟೆ.

ನಿನ್ನ ಭಕ್ತರು ಇಷ್ಟೊಂದು ಸಂಖ್ಯೆಯಲ್ಲಿ ಸೇರಿರುವಾಗ ಅವರನ್ನು ನೋಡುವುದೇ ಅಪರೂಪದ ಭಾಗ್ಯ. ಹಾಗಿರುವಾಗ ನಿನ್ನ ನೋಡಬೇಕೇಕೆ? ಈ ಭಕ್ತರಾದರೋ ಪುಣ್ಯಶಾಲಿಗಳು ಗಣ್ಯಶಾಲಿಗಳು ಧನ್ಯಶಾಲಿಗಳು. ಅನಂತಜನುಮದಲ್ಲಿ ಜಪ ತಪ ಹೋಮ ಮಾಡಿದವರು ಇಂಥವನ್ನು ಇಷ್ಟು ಸಂಖ್ಯೆಯಲ್ಲಿ ನೋಡಿ ಧನ್ಯನಾಗುವ ನನಗೆ ನಿನ್ನ ದರುಶನ ಯಾಕೆ ಬೇಕಾಗಿದೆ ನೀನೇ ಹೇಳೋ.

ಕೇಳಿಲ್ಲಿ ತಿರುಮಲರಾಯ ನಿನಗೆ ನಾನು ಚಿರಋಣಿ. ಏಕೆ ಎನ್ನುವಿಯೋ ನೀನು ಸಾವಿರ ಸಾವಿರ ರೂಪದಲ್ಲಿ ಈ ಭಕ್ತರ ರೂಪದಲ್ಲಿ ಕಾಣಿಸುತ್ತಿರುವೆ ಜೀವಂತವಾಗಿ. ಹೀಗಿರುವಾಗ ಶಿಲಾರೂಪದಲ್ಲಿ ನಿನ್ನನೇಕೆ ನಾನು ನೋಡಲಿ. ಶ್ರೀನಿವಾಸ ಕಲ್ಯಾಣ ಉತ್ಸವದ ನೆಪದಲ್ಲಿ ಇಷ್ಟೊಂದು ಜನರನ್ನು ನೀನಿಲ್ಲಿ ಸಂದರ್ಶಿಸಿರುವೆ ನಿನಗೆ ನಿನ್ನ ಕಲ್ಯಾಣೋತ್ಸವ ಮುಖ್ಯವಲ್ಲ ಆ ನೆಪದಲ್ಲಿ ಇಷ್ಟೊಂದು ಭಕ್ತರನು ಕಾಣುವ ಹಂಬಲ ನಿನ್ನದು, ಆದರೆ ಈ ಸಂದರ್ಭದಲ್ಲಿ ಬಂದ ನಾನು ಅನಾಯಾಸವಾಗಿ ನಿನ್ನನ್ನು ಇವರ ರೂಪದಲ್ಲಿ ಕಂಡೆನಲ್ಲಾ, ನಿಜಕ್ಕೂ ನೀನು ಸುಲಭದೇವರ ದೇವ. ನನ್ನ ದರುಶನ ಸುಲಭವಲ್ಲ ಎಂಬಂತೆ ಜನಸಂದಣಿಯಲ್ಲಿ ನನಗೆ ನೀನು ಕಾಣಿಸಿಲಿಲ್ಲ ಅಲ್ಲವೇ? ಆದರೆ ನಿನ್ನನ್ನು ಜಡಶಿಲಾಮೂರ್ತಿ ರೂಪದಲ್ಲಿ ನೋಡಲು ನಾನು ಬರಲಿಲ್ಲ. ಮುಖ್ಯ ನಿನ್ನ ಪುಣ್ಯವಂತ ದಿವ್ಯಚರಣ ನೋಡಲು ಬಂದೆ ಅದು ಸಿಕ್ಕಿತು. ಎಂದಿದ್ದಾರೆ.

ಚಮತ್ಕಾರಿಕವಾಗಿ ಶ್ರೀನಿವಾಸಕಲ್ಯಾಣೋತ್ಸವ ಜನಜಂಗುಳಿಯಲ್ಲಿ ಶ್ರೀನಿವಾಸನ ದರುಶನವಾಗದಿದ್ದನ್ನು ಈ ರೀತಿ ನಿಂದಾರೂಪದಲ್ಲಿ ಹೊಗಳಿ ವಿಜಯದಾಸರು ಅದ್ಭುತಕಾವ್ಯಪ್ರತಿಭೆ ತೋರಿದ್ದಾರೆ. ಹರಿದಾಸರ ಶ್ರೇಷ್ಠನಿಂದಾಸ್ತುತಿಗಳಲ್ಲಿ ವಿಜಯದಾಸರ ಎಂಟು ನಿಂದಾಸ್ತುತಿಗಳು ಒಂದೊಂದು ವೈಶಿಷ್ಟ್ಯಪೂರ್ಣವಾಗಿದೆ. ಮಂಗಳ ಹಾಡುವ ಕೀರ್ತನೆ ಇದಕ್ಕೆ ಮತ್ತೊಂದು ನಿದರ್ಶನವಾಗಿದೆ[22].

ಹರಿದಾಸರ ಬದುಕಿನ ಹಿನ್ನೆಲೆಯಲ್ಲಿ ನಿಂದಾಸ್ತುತಿಗಳು

ತೀರ್ಥಕ್ಷೇತ್ರಗಳ ಅನುಭವ ಒಂದು ರೀತಿ ಹರಿದಾಸರ ಜೀವನಾನುಭವವೇ ಆದರೂ ಅವರ ತೀರ ವೈಯಕ್ತಿಕ ಜೀವನದ ಪ್ರಸಂಗಗಳ ಸನ್ನಿವೇಶಗಳು ನಿಂದಾಸ್ತುತಿಗಳ ರೂಪದಲ್ಲಿ ಕಾಣಿಸಿಕೊಂಡಿವೆ.

ಅನಾರೋಗ್ಯದ ಸಂದರ್ಭದಲ್ಲಿ ಅಶಕ್ತರಾದಾಗಲೂ ಭಿಕ್ಷೆ ಬೇಡುವುದು ತಪ್ಪಲಿಲ್ಲ ವಿಜಯದಾಸರಿಗೆ. ಆ ಸಂದರ್ಭದಲ್ಲಿ ನಾನೇಕೆ ಬೇಸರಿಸಬೇಕು, ಆದರೂ ಈ ಭಿಕ್ಷೆ ಬೇಡುವುದು ತಪ್ಪಲಿಲ್ಲ ಎಂದು ಚಿಂತಿಸುತ್ತಾ ಭಗವಂತನನ್ನೇ ನಿಂದಾಸ್ತುತಿ ಮಾಡುತ್ತಾರೆ. ನೀನೇ ತಿರುಪೆಯವನು ನನ್ನ ಹೃದಯದಲ್ಲಿ ಇದ್ದ ಮಾತ್ರಕ್ಕೆ ನಿನ್ನ ತಿರುಪೆ ಬುದ್ಧಿ ಎಲ್ಲಿ ಹೋದೀತು. ಆದ್ದರಿಂದ ನನ್ನ ಮೂಲಕ ನೀನೇ ತಿರುಪೆ ಬೇಡುತ್ತಿರುವೆ ಎಂದು ವ್ಯಂಗ್ಯವಾಡುತ್ತಾರೆ.

ಬಲಿರಾಯನ ದಾಸ ಗುಣ ಕೇಳಿ ಮಾರುವೇಷದಲ್ಲಿ ಬಾಯಿಬಿಟ್ಟು ಮೂರು ಪಾದ ಭಿಕ್ಷೆ ಕೇಳಿದೆ. ತಾಪಸರು ಯಜ್ಞಕರ್ಮಾದಿಗಳು ಮಾಡುತಿರೆ ಶ್ರೀಪತಿ ಅನ್ಯ ತಿರಿದುಂಡು ಎಂದರೆ ಅವರು ನೀಡುವ ಹವಿಸ್ಸಿನಿಂದ ಕ್ಷುಧೆಯನ್ನು ಕಳೆದುಕೊಂಡೆ. ಹೀಗೆ ಯಾಚಕವೃತ್ತಿಯವನಾದ ನೀನು ನನ್ನ ಹೃತ್ಕಮಲದಲ್ಲಿ ನಿಂದು ಮನೆಮನೆಗೆ ತಿರಿದಾಡುವ ಕಾಯಕ ಮಾಡುತ್ತಿರುವನು ನೀನೇ ನಾನಲ್ಲ. ಇದರಲ್ಲಿ ಅನುಮಾನವಿಲ್ಲ ಎಂದಿದ್ದಾರೆ. ಹರಿದಾಸರ ವೈಯಕ್ತಿಕ ಅನುಭವಗಳು ಹೇಗೆ ನಿಂದಾಸ್ತುತಿಯಾಗಿ ಹರಿಸ್ಮರಣೆಗೆ ಕಾರಣವಾಗುತ್ತದೆ ಎಂಬುದನ್ನಿಲ್ಲಿ ಕಾಣಬಹುದು. ಮೂಲ ಕೀರ್ತನೆಯಲ್ಲಿ ಇರುವ ಸರಳ ಹೃದ್ಯತನವನ್ನು ಆಸ್ವಾದಿಸಲು ಯೋಗ್ಯವಾದ ನಿಂದಾಸ್ತುತಿ ಇದು ತಿರುದುಂಬುವ ನೀನು ತಿರುಮಲೇಶ[23] ಮರುಗಲ್ಯಾತಕೆ ಇನ್ನು ಮನಸಿನೊಳಗೆ ಪ್ರತಿದಿನವು –

ಜಯಮಂಗಳಂ ನಿತ್ಯ ಶುಭಮಂಗಳಂ

ತೊಳಸದಕ್ಕಿಯ ತಿಂಬ ಕಿಲುಬು ತಳಿಗೆಯಲುಂಬ
ಕೊಳಗದಲಿ ಹಣಗಳನು ಅಳೆದುಕೊಂಬ
ಇಲ್ಲ ಕಾಸು ಎಂದು ಸುಳ್ಳು ಮಾತಾಡಿದರೆ
ಎಲ್ಲವನು ಕಸುಗೊಂಬ ಕಳ್ಳದೊರೆಗೆ

ತನ್ನ ನೋಡೇನೆಂದು ಮುನ್ನೂರು ಗಾವುದ ಬರೆ
ತನ್ನ ಗುಡಿಯ ಪೊಕ್ಕ ಜನರಿಗೆಲ್ಲ
ಹೊನ್ನು ಹಣಗಳ ಕೊಂಡು ತನ್ನ ದರುಶನ ಕೊಡದೆ
ಬೆನ್ನೊಡೆಯ ಹೊಯಿಸುವ ಅನ್ಯಾಯಕಾರಿಗೆ

ಗಿಡ್ಡ ಹಾ(ರು)ವನಾಗಿ ಬಡ್ಡಿ ದಾನವ ಬೇಡಿ
ದುಡ್ಡು ಕಾಸುಗಳಿಗೆ ಕೈಯ ನೀಡಿ
ಅಡ್ಡಬಿದ್ದ ಜನರ ವಿದ್ದೂಡ್ಡೂರಗಳ ಕಳೆದು
ದೊಡ್ಡವರ ಮಾಳ್ಪ ಸಿರಿ ವಿಜಯವಿಠಲಗೆ

ದಶಾವತಾರ ನಿಂದಾಸ್ತುತಿಗಳು

"ಹರಿದಾಸರ ದಶಾವತಾರ ಸ್ತುತಿಗೆ ಹಿನ್ನೆಲೆ ಮಧ್ವಾಚಾರ್ಯರ ದ್ವಾದಶಸ್ತೋತ್ರದಲ್ಲಿರುವ ದಶಾವತಾರ ಸ್ತುತಿ. ರಾಮಾಯಣ ಭಾರತ ಭಾಗವತ ಪುರಾಣಗಳ ಸಂಪೂರ್ಣ ಹಿನ್ನೆಲೆ ಇದ್ದ ಹರಿದಾಸರು, ದಶಾವತಾರದ ಹಂದರದ ಸುತ್ತ ಸ್ತುತಿಮಾಲೆಯನ್ನು ನಿರ್ಮಿಸಿದರು. ಬೇರೆ ಬೇರೆಯುಗಗಳಲ್ಲಿ ಬೇರೆ ಬೇರೆ ಕಾಲಗಳಲ್ಲಿ ನಡೆದ ಅವತಾರಗಳನ್ನು ಕ್ರಮವಾಗಿ ಜೋಡಿಸಿ ಹಾಡುವ ಸ್ತುತಿಗೀತೆಯೇ ದಶಾವತಾರಸ್ತುತಿ ಆಯಿತು. ಪುರಂದರರಿಂದ ವಾದಿರಾಜ, ಕನಕದಾಸ ಇವರಿಂದ ಪರಂಪರಾಗತವಾಗಿ ಬಂದ ಈ ಸ್ತುತಿಯನ್ನು 19ನೇ ಶತಮಾನದ ಹರಿದಾಸರು ತಮ್ಮ ಕೀರ್ತನೆಗಳಲ್ಲಿ ಅಳವಡಿಸಿಕೊಂಡಿದ್ದಾರೆ. ದಶಾವತಾರ ಸ್ತುತಿ ಒಂದು ಸಂಪ್ರದಾಯವೇ ಆದರೂ ಬೇರೆ ಬೇರೆ ಮಾಧ್ಯಮಗಳಲ್ಲಿ ಅಭಿವ್ಯಕ್ತಿಸಿದ್ದು ಆ ಕಾಲದ ಹರಿದಾಸರ ವೈಶಿಷ್ಟ್ಯ. ಪ್ರಾರ್ಥನೆ, ಸ್ತುತಿ, ಉರುಟಣೆ ಪದ, ಲಾಲಿ, ಸೋಬಾನೆ, ಆರತಿಪದ, ಮಂಗಳ, ಸುಪ್ರಭಾತ, ಬಾಗಿಲ ತಡೆವ ಹಾಡು, ವೆಂಕಟೇಶ ಸ್ತುತಿ, ಕೃಷ್ಣ ಲೀಲೆ ಹೀಗೆ ಹಲವು ಸಂದರ್ಭಗಳಲ್ಲಿ ದಶಾವತಾರ ಸ್ತುತಿಯನ್ನು ಬಳಸಿಕೊಂಡರು. ಒಂದೊಂದು ನುಡಿಯಲ್ಲಿ ದಶಾವತಾರಗಳನ್ನು ಸೇರಿಸಿರುವ ಸ್ತುತಿ ಮಾಲಿಕೆ, ಒಂದೊಂದು ಅವತಾರಕ್ಕೂ ಒಂದೊಂದು ನುಡಿ ಇರುವ ಸ್ತುತಿಮಾಲಿಕೆ, ಇವಲ್ಲದೆ ನಿಂದಾಸ್ತುತಿ ಮತ್ತು ಸಂವಾದರೂಪದಲ್ಲಿ ದಶಾವತಾರದ ಸ್ತುತಿಯಿದೆ" ಎಂದು ದಶಾವತಾರಗಳ ಸ್ತುತಿಗಳ ಬಗ್ಗೆ ಡಾ. ಅನಂತಪದ್ಮನಾಭರಾವ್ ಅವರು ಸೊಗಸಾದ ಸಮೀಕ್ಷೆ ಮಾಡಿದ್ದಾರೆ. ತಮ್ಮ ಮಹಾಪ್ರಬಂಧದಲ್ಲಿ[24] ಈ ಪೈಕಿ ಇಲ್ಲಿ ದಶಾವತಾರಗಳನ್ನು ಕುರಿತ ಸ್ತುತಿಗಳನ್ನು ಕುರಿತು ಕೆಲವು ಕೀರ್ತನೆಗಳ ಹಿನ್ನೆಲೆಯಲ್ಲಿ ವಿಮರ್ಶೆ ಮಾಡಿದೆ.

'ಆರು ಬದುಕಿದರಯ್ಯ ಹರಿ ನಿನ್ನ ನಂಬಿ' ಎಂಬ ಕೀರ್ತನೆಯಲ್ಲಿ ಅರಿತು ತ್ರಿಪುರಾಸುರನ ಹೆಂಡಿರನು ಸೇರಿದೆ ಎಂದು ಎಸ್ಕೆ ರಾಮಚಂದ್ರರಾಯರು ತಮ್ಮ ಪುರಂದರದಾಸರ ಕೀರ್ತನೆ ಸಂಗ್ರಹದಲ್ಲಿ ಪಾಠ ಕೊಟ್ಟಿದ್ದಾರೆ. ಗೋಕುಲನಾಥರು ನರಕಾಸುರನ ಎಂದು ಪಾಠ ಕೊಟ್ಟಿದ್ದಾರೆ. ಬೆರೆದೆ ಎಂಬ ಪದದ ಹಿನ್ನೆಲೆಯಲ್ಲಿ ನಿಂದಾಸ್ತುತಿ ಹಿನ್ನೆಲೆಯಲ್ಲಿ ಎಸ್ಕೆ ರಾಮಚಂದ್ರರಾಯರು ಪಾಠ ಹೆಚ್ಚು ಉಚಿತವೆನಿಸುತ್ತದೆ. (ಇದರ ಬಗ್ಗೆ ಪೂರ್ವಕಥೆ ಹೀಗಿದೆ ನೋಡಿ, 19ನೇ ಶತಮಾನದ ಹರಿದಾಸ ಸಾಹಿತ್ಯ (ಮಹಾಪ್ರಬಂಧ) ಡಾ.ಅನಂತಪದ್ಮನಾಭರಾವ್ ಪು.71.) ಬೌದ್ಧಾವತಾರದ ಕಥೆಗೆ ಸಂಬಂಧಿಸಿದ್ದು ಈ ಪ್ರಸಂಗ ಎಂದು ಸೂಚಿಸುತ್ತಾರೆ ಎಸ್ಕೆ ರಾಮಚಂದ್ರರಾಯರು ವಿವರಿಸುವುದಿಲ್ಲ. ಈ ಬಗ್ಗೆ ಅನಂತಪದ್ಮನಾಭರಾಯರು ಕೊಟ್ಟ ವಿವರಣೆ ಸರ್ಮಪಕವಾಗಿದೆ ಸಮಂಜಸವಾಗಿದೆ. ಆ ವಿವರಣೆ ಹೀಗಿದೆ: "ದಶಾವತಾರದ ಸಾಂಪ್ರದಾಯಿಕ ಕಥೆಗಳಲ್ಲಿ ಬರುವ ಸಂಗತಿಗಳನ್ನೆಲ್ಲ ಹರಿದಾಸರು ಹಾಡಿದ್ದಾರೆ. ಆದರೆ ಬೌದ್ಧಾವತಾರದಲ್ಲಿ ಬರುವ ಬುದ್ಧ ಐತಿಹಾಸಿಕ ಬುದ್ಧನಲ್ಲ. ದಿಗಂಬರನಾದ ಬುದ್ಧ ಮಯಾಸುರವೆಂಬ ದೈತ್ಯ ಬ್ರಹ್ಮನಿಂದ ವರಗಳನ್ನು ಪಡೆದು ಭೂಮಿಯ ಮೇಲೆ ಉಕ್ಕಿನಿಂದಲೂ ಅಂತರಿಕ್ಷದಲ್ಲಿ ಬೆಳ್ಳಿಯಿಂದಲೂ ಅದರ

ಮೇಲೆ ಸುವರ್ಣದಿಂದಲೂ ನಗರಗಳನ್ನು ನಿರ್ಮಿಸಿದ ತಾರಕಾಸುರನ ಮಕ್ಕಳಾದ ವಿದ್ಯುನ್ಮಾಲಿ ಕಮಲಾಕ್ಷ ತಾರಾಕ್ಷ ಎಂಬುವವರಿಗೆ ಆ ಪುರಗಳಲ್ಲಿ ವಾಸ್ತವ್ಯ ಕಲ್ಪಿಸಿದ. ಧರ್ಮಚ್ಯುತರಾಗದೆ ಆಚಾರಹೀನರಾಗದೆ ಶಿವಪೂಜೆಯಲ್ಲಿ ಶ್ರದ್ಧೆ ಇರುವವರೆಗೂ ಅವರ ಪತ್ನಿಯರ ಪಾತಿವ್ರತ್ಯ ಸ್ಥಿರವಾಗಿ ಇರುವವರೆಗೂ ಈ ಅಸುರರಿಗೆ ಭಯವಿಲ್ಲ ಎಂದು ತಿಳಿಸಿದ. ಈ ರಾಕ್ಷಸರು ತ್ರಿಪುರಾಸುರರೆಂದು ಪ್ರಸಿದ್ಧರಾಗಿ ದೇವತೆಗಳಿಗೂ ದೇವಕಾರ್ಯಗಳಿಗೂ ತೊಂದರೆ ನೀಡಿದರು. ದೇವತೆಗಳ ಕೋರಿಕೆಯಂತೆ ಶಿವ ಇವರನ್ನು ಧ್ವಂಸ ಮಾಡಲು ಸಿದ್ಧನಾದ. ಶಿವನಿಗೆ ತ್ರಿಪುರಾಂತಕನೆಂಬ ಕೀರ್ತಿಯನ್ನು ತಂದುಕೊಡಲು ವಿಷ್ಣು ಬಾಲವೇಷದಿಂದ ತ್ರಿಪುರ ಸ್ತ್ರೀಯರನ್ನು ಮೋಹಿಸಿದ. ಅವರಿಗೆ ಉಪಪತಿಯಾದ, ಉಪಪತಿಯನ್ನು ಸ್ವೀಕರಿಸುವುದು ಅಧರ್ಮವಲ್ಲ ಎಂದು ಬುದ್ಧಿ ಹುಟ್ಟಿಸಿದ. ಅವರ ಪಾತಿವ್ರತ್ಯವನ್ನು ಭಂಗಗೊಳಿಸಿದ. ಈ ಬುದ್ಧನೇ ಶುದ್ಧೋಧನನ ಮಗನಾಗಿ ಹುಟ್ಟಿದ ಈ ಶುದ್ಧೋಧನನ ಮಗ ಐತಿಹಾಸಿಕ ಬುದ್ಧನಾದನು. ಪಾತಿವ್ರತ್ಯ ಕೆಡಿಸಿದ ಬುದ್ಧ ಪೌರಾಣಿಕ ಬುದ್ಧನಾದ. ಹರಿದಾಸರ ಕೃತಿಗಳಲ್ಲಿ ಇಬ್ಬರು ಬುದ್ಧರು ಕಂಡುಬರುತ್ತಾರೆ. ಇದು ತಪ್ಪಿಲ್ಲ ಎಂದು ಅನಂತಪದ್ಮನಾಭರಾವ್ ಹೇಳುತ್ತಾ "ವಾದಿರಾಜರು ಮಹಾಭಾರತ ತಾತ್ಪರ್ಯ ನಿರ್ಣಯಕ್ಕೆ ಬರೆದಿರುವ ಭಾವಪ್ರಕಾಶಿಕೆಯಲ್ಲಿ ಬುದ್ಧಾವತಾರ ಎರಡು ಸಲ ಆಗಿದೆ ಎಂದಿದ್ದಾರೆ" ಎನ್ನುತ್ತಾರೆ.

ಹೀಗೆ ದಶಾವತಾರದ ನಿಂದಾಸ್ತುತಿಗಳಲ್ಲಿ ಬರುವ ಪ್ರಸಂಗಗಳು ಐತಿಹಾಸಿಕವಾಗಿ ಪೌರಾಣಿಕವಾಗಿ ಚರ್ಚಿಸುವಂಥ ಅಂಶಗಳಿಂದ ಕೂಡಿದೆ. ಇದು ದಶಾವತಾರಗಳ ನಿರೂಪಣೆಯಲ್ಲಿ ವೈಶಿಷ್ಟ್ಯಗಳಲ್ಲಿ ಒಂದು.

ದಶಾವತಾರದ ನಿಂದಾಸ್ತುತಿಗಳ ಕೀರ್ತನೆಗಳಲ್ಲಿ ಭಗವಂತನ ಟೀಕೆಯನ್ನು ಲೌಕಿಕ ರೀತಿಯಲ್ಲಿ ನಿತ್ಯಜೀವನದ ವಿದ್ಯಮಾನಗಳ ರೂಪದಲ್ಲಿ ಉಲ್ಲೇಖಿಸಿ ಚಿತ್ರಿಸುವ ಪರಿ ಅಮೋಘವಾದುದು. ಇಂಥ ಹತ್ತಾರು ಕೀರ್ತನೆಗಳನ್ನು ವ್ಯಾಜಸ್ತುತಿ ರೂಪದಲ್ಲಿ ನೋಡಬಹುದು. ಇಲ್ಲಿ ಒಂದು ಪುರಂದರದಾಸರ ಕೀರ್ತನೆಯನ್ನು ಈ ಮಾದರಿಗಾಗಿ ಉದಾಹರಿಸಿದೆ[25].

ಏನ ಬೇಡಲಿ ನಿನ್ನ ಚಂಚಲ ಕಠಿಣನ
ಮೌನದಿಂದಲಿ ಮೋರೆ ಓರೆ ಮಾಡುವನ

ಕರುಳ ಹರಕನ ಬೇಡಲೇನು
ತಿರುದು ತಿಂಬುವನ ಕೊರಳಗೊಯ್ಯ
ಅರಣ್ಯ ತಿರುಗುವನ ತಿರುಗಿ ಬೆಣ್ಣೆ ಕದ್ದು ತಿಂಬುವನ

ವಾಸಶೂನ್ಯನ ಕೈಯಕತ್ತಿ ಬೀಸಿ ಸವರುವನ
ಕಾಸು ವೀಸವನೆಲ್ಲ ಮೀಸಲು ಮಾಡಿಟ್ಟು
ಕೇಸಕ್ಕೆ ಉಂಡುಂಡು ಉಪವಾಸ ಮಾಡುವನ

ಬೇಡಿದರೆ ನೀಡಿ ಅವರ ಮೋರೆ
ಬಿಡೆಯವನು ನೋಡಿ ಬಡವರ ಕರೆತಂದು
ಅಡಿಗೆ ಸೇರಿಸಿಕೊಂಡ
ಒಡೆಯ ಶ್ರೀ ಪುರಂದರವಿಠಲ ದೊರೆಯೆ

ಈ ಪದದ ಬಗ್ಗೆ ಆರ್.ಎಚ್. ಕುಲಕರ್ಣಿ ಅವರು ಸೊಗಸಾದ ವಿವರಣೆ ನೀಡಿದ್ದಾರೆ[26]. "ಈ ಪದದಲ್ಲಿ ದಾಸರು ಚಮತ್ಕಾರಿಕವಾಗಿ ಪರಮಾತ್ಮನ ಎಲ್ಲ ಅವತಾರಗಳನ್ನು ಎತ್ತಿ ತೋರಿದ್ದಾರೆ.

1. "ಸ್ವಾಮಿ ನಿನ್ನನ್ನು ನಾನು ಏನು ಬೇಡಲಿ?
   ನೀನೇ ಚಂಚಲ (ಮತ್ಸ್ಯಾವತಾರ)
2. ಅಲ್ಲದೆ ನೀನು ಬಹಳ ಕಠಿಣ (ಕೂರ್ಮ)
3. ಕೇಳಿದರೂ ಕೂಡ ಕೇಳದವನಂತೆ ನೀನು
   ಮೋರೆಯನ್ನು ಓರೆ ಮಾಡುವಿ (ವರಾಹ)
4. ನೀನು ಕರುಳಹರಕ (ನಾರಸಿಂಹ)
5. ನೀನು ತಿರಿದು ತಿಂಬುವವ (ವಾಮನ)
6. ನೀನು ಕೊರಳಗೊಯ್ಯ (ಪರಶುರಾಮ)
7. ನೀನೇ ಅರಣ್ಯದಲಿ ತಿರುಗುವವನು (ಶ್ರೀರಾಮ)
8. ಬೆಣ್ಣೆಯನ್ನು ಕದ್ದು ತಿಂಬುವನು ನೀನು (ಕೃಷ್ಣ)
9. ನೀನು ವಾಸಶೂನ್ಯನು (ಬುದ್ಧ)
10. ಕೈಗತ್ತಿ ಬೀಸಿ ಸವರುವವನು (ಕಲ್ಕಿ)

ಎಂದು ಹೀಗೆ ಹತ್ತು ಅವತಾರಗಳನ್ನು ಹೇಳುತ್ತಾ ಕಲಿಯುಗದಲ್ಲಿ ಅವತರಿಸಿ ಭೂವೈಕುಂಠವೆಂದು ಪ್ರಸಿದ್ಧವಾದ ತಿರುಮಲಗಿರಿಯಲ್ಲಿ ನಿಂತಿರುವ ಶ್ರೀ ವೆಂಕಟೇಶನನ್ನು ಪುರಂದರದಾಸರು ನಿಂದಾರೂಪದಲ್ಲಿ ಬಣ್ಣಿಸಿದ್ದಾರೆ.

ನೀನೇ ಎಲ್ಲರ ಸಂಪತ್ತನ್ನು ಕಾಣಿಕೆಯಾಗಿ ಸ್ವೀಕರಿಸಿ ಅದನ್ನು ಖರ್ಚು ಮಾಡದೆ ಹಾಗೆಯೇ ಕೂಡಿಟ್ಟು ಕೇಸಕ್ಕಿ ಅನ್ನವನ್ನೇ ಉಂಡು ಬದುಕುತ್ತಿರುವಿ. ಇಂಥ ನಿನ್ನನ್ನು ನಾನು ಏನು ಬೇಡಲಿ?

ಒಂದು ವೇಳೆ ಬೇಡಿದರೂ ಮೋರೆ ಭಿಡೆಯ ನೋಡಿ ನೀಡುವಿ. ಅವರವರ ಯೋಗ್ಯತೆಗೆ ಮೀರದಂತೆ ಫಲವನು ಕೊಡುವಿ. 'ಬಡವರನು ಮಾತ್ರ ಕರೆತಂದು ಅಡಿಗೆ ಸೇರಿಸಿಕೊಳ್ಳುವಿ' – ಈ ಮಾತಿನಲ್ಲಿ ಎರಡರ್ಥ ಅಡಗಿದೆ. ನೀನು ಶ್ರೀಮಂತ, ಬಡವನನ್ನು ಶೋಷಣೆ ಮಾಡುವುದು ಸುಲಭ ಅದಕ್ಕೆ ಅವರನ್ನು ಸೇರಿಸಿಕೊಳ್ಳುವಿ. ಅವರವರ ಯೋಗ್ಯತೆಗೆ ತಕ್ಕ ಫಲವನ್ನು ಎಂದರೆ ಬಡವರಿಗೆ ಕಡಿಮೆ ಪ್ರತಿಫಲ ಕೊಡಬಹುದಲ್ಲ ಎಂಬ ವ್ಯಂಗ್ಯವಿದೆ.

ಇನ್ನೊಂದರ್ಥ, ಕುಲಕರ್ಣಿ ಅವರು ಹೇಳುವಂತೆ "ಪರಮಾತ್ಮನು ಅನುಗ್ರಹಿಸಬೇಕಾದರೆ ಮೊದಲು ಭಕ್ತನ ಬಳಿ ಇದ್ದ ಸಂಪತ್ತನ್ನು ಕಸಿದುಕೊಳ್ಳುತ್ತಾನೆ. ಬಡವನನ್ನಾಗಿ ಮಾಡಿ ಪರೀಕ್ಷಿಸುತ್ತಾನೆ. ಅದರಲ್ಲಿ ಗೆದ್ದವರನ್ನು ಮಾತ್ರ ಅನುಗ್ರಹಿಸುತ್ತಾನೆ" ಎಂಬ ಭಾಗವತದ ಸಂದೇಶ ಇಲ್ಲಿದೆ.

ಹೀಗೆ ಹತ್ತಾರು ದಶಾವತಾರ ಕೀರ್ತನೆಗಳಲ್ಲಿ ನಿಂದಾಸ್ತುತಿ ಮೂಲಕ ಭಗವಂತನನ್ನು ದಾಸರು ವರ್ಣಿಸಿದ್ದಾರೆ. ಇಲ್ಲಿ ಕೆಲವು ಕೀರ್ತನೆಗಳನ್ನು ಉಲ್ಲೇಖಿಸಿದೆ.

1. ಹಿಡಕೋ ಬಿಡಬ್ಯಾಡ ರಂಗಯ್ಯನ ಪಾದ (ಪುರಂದರದಾಸರು)
2. ನಿನ್ನ ನಾನೇನೆಂದನೋ ರಂಗಯ್ಯ ರಂಗ (ಕನಕದಾಸರು)
3. ಕೊಟ್ಟು ಹೋಗೋ ಎನ್ನ ಸಾಲವ (ಪುರಂದರದಾಸರು)
4. ಏ ರಂಗಧಾಮ ರಂಗ ಏ ರಂಗಧಾಮ (ವಾದಿರಾಜರು)
5. ನೀನಾರೋ ನಿನ್ನ ಪೆಸರೇನೋ (ಮಹಿಪತಿದಾಸರು) ಇತ್ಯಾದಿ.

ಎಲ್ಲ ಹರಿದಾಸರು ದಶಾವತಾರ ಸ್ತುತಿಗಳನ್ನು ಮಾಡಿದ್ದರೂ ಅದರಲ್ಲಿ ನಿಂದಾಸ್ತುತಿರೂಪದಲ್ಲಿ ಮಾಡಿದ ಕೀರ್ತನೆಗಳು ಎಲ್ಲವೂ ಅಲ್ಲ ಎಂಬ ಅಂಶ ಗಮನಿಸಬೇಕು. ದಶಾವತಾರ ನಿಂದಾಸ್ತುತಿಗಳನ್ನು ಕೀರ್ತನೆ, ಉಗಾಭೋಗ, ಸುಳಾದಿಗಳಲ್ಲಿ ಹರಿದಾಸರು ಬರೆದಿರುವವರಾದರೂ "ಅತಿ ಹೆಚ್ಚಿನ ಸಂಖ್ಯೆಯಲ್ಲಿ ದಶಾವತಾರ ಸ್ತುತಿಗಳನ್ನು ಬರೆದಿರುವ ಹರಿದಾಸರೆಂದರೆ ಹರಪನಹಳ್ಳಿ ಭೀಮವ್ವ" ಎಂದು ಅನಂತಪದ್ಮನಾಭರಾವ್ ಗುರುತಿಸಿದ್ದಾರೆ[27].

"ಆಕೆ ದಶಾವತಾರದ ಸ್ತುತಿಯನ್ನು ಮಾಡುವ ಹಾಡು ಸ್ವತಂತ್ರವಾದ ಹಾಡಾಗಿರಬಹುದು ಅಥವಾ ಹಾಡಿನ ಒಂದು ಭಾಗವಾಗಿರಬಹುದು. ಹರಿಸ್ತುತಿ ಬಂದ ಕಡೆಯಲ್ಲೆಲ್ಲ ದಶಾವತಾರದ ಪ್ರಸ್ತಾಪ ಮಾಡುವುದು ಭೀಮವ್ವನ ಸಂಪ್ರದಾಯ ಗೋಪನಾರಿಯು ವಿಲಾಪದಲ್ಲಿ ದ್ರೌಪದಿ ಮೊರೆಯಲ್ಲಿ, ಉದಯರಾಗದಲ್ಲಿ, ಕೃಷ್ಣ ಸ್ತುತಿಯಲ್ಲಿ, ಕೃಷ್ಣಲೀಲೆಯಲ್ಲಿ, ನಿಂದಾಸ್ತುತಿಯಲ್ಲಿ, ಕೃಷ್ಣ ಸತ್ಯಭಾಮೆಯರ ಸರಸ–ಸಂಭಾಷಣೆಯಲ್ಲಿ, ಮಂಗಳದ ಹಾಡುಗಳಲ್ಲಿ ಹೀಗೆ ದಶಾವತಾರವನ್ನು ಅನೇಕ ಸಂದರ್ಭಗಳಲ್ಲಿ ನಿರೂಪಿಸಿದ್ದಾಳೆ. ಭೀಮವ್ವನ ದಶಾವತಾರದ ನಿಂದಾಸ್ತುತಿಗೆ ಒಂದು ನಿದರ್ಶನವನ್ನು ಇಲ್ಲಿ ಕೊಟ್ಟಿದೆ[28].

ನಾರುತ ಮೈಯ ನೀರೊಳಗಿರುವ ಮಂ
ದಾರವನ್ಹೊರುವ
ಕೋರೆಯಲಿ ಧರೆಯ ಮ್ಯಾಲಕೆ ತರುವ
ಕರೆಯೆ ಕಂಬದಿ ಬರುವ
ಮೋರ ಧರಿತ್ರಿ ವಿಕ್ರಮನಾಗಿ ತೋರುವ
ತಾಯಿ ಶಿರವ ತರಿವ
ನಾರುವಸ್ತ್ರ ಬಿಗಿದುಟ್ಟ ಭೀಮೇಶಕೃಷ್ಣನ
ನಾರೇರ ವ್ರತಭಂಗ ಮಾಡಿ ತುರಗವೇರಿ

ಇಲ್ಲಿ ಒಂದೇ ನುಡಿಯಲ್ಲಿ ದಶಾವತಾರವನ್ನು ನಿರೂಪಿಸಿರುವುದನ್ನು ಗಮನಿಸಬೇಕು. ದಶಾವತಾರ ಸ್ತುತಿಯನ್ನು ನಿಂದಾಸ್ತುತಿಯಾಗಿ ವರ್ಣಿಸುವಲ್ಲಿ ಹರಿದಾಸರು ಸಂವಾದದ ಹಾಡುಗಳಲ್ಲಿ ಸೊಗಸಾಗಿ ಹರಿಯ ದಶಾವತಾರವನ್ನು ಚಿತ್ರಿಸುವುದು ಒಂದು ವಿಶೇಷ. ಇದನ್ನು ಅನಂತಪದ್ಮನಾಭರಾವ್ ಅವರು ತಮ್ಮ ಪ್ರಬಂಧದಲ್ಲಿ ಮೊದಲ ಬಾರಿಗೆ ಗುರುತಿಸಿದ್ದಾರೆ. ಅದಕ್ಕೆ ಅವರು ಕೊಡುವ ನಿದರ್ಶನವೆಂದರೆ ಶೇಷಾಚಾರ್ಯರ (ಶ್ರೀನಿವಾಸ ಕಲ್ಯಾಣ, 1978) ಚಂದ್ರಿಕಾ ಪ್ರಕಾಶನ ಬೆಂಗಳೂರು, ಕೃತಿಯನ್ನು ಗುರುರಾಮವಿಠಲರ ಬಾಗಿಲು ತಡೆವ ಹಾಡನ್ನು (ಸೀತಾರಾಮರ ಸಂವಾದ) ಉದಾಹರಿಸಿದ್ದಾರೆ. ಶೇಷಾಚಾರ್ಯರ 28 ನುಡಿಗಳ ದೀರ್ಘಹಾಡಿನಲ್ಲಿ ಕೆಲವು ಚರಣಗಳು ಹೀಗಿವೆ.

ಏನೆಲೆ ಭಾಮಿನಿ ಬಾಗಿಲು ತೆಗೆಯೇ ನೀ
ಗಾನಪ್ರಿಯನು ಬಂದೆ ಕೋಗಿಲೆ ? ನಾನು
ಏನೆಲೆ ಏನೆಂತೆಂದೆ ಹೀನ ಮಾತಾಡಿದೆ
ನೀನಾರೈ ಕತ್ತಲಲಿ ಬರುವ ಎಲೋ
ತುಚ್ಛ ಸೋಮಕನ ಕೊಂದು ಸ್ವಚ್ಛ ವೇದವ ತಂದ
ಮಚ್ಚಾವತಾರ ಮಾನಿನಿ ನಾನು

ಮಚ್ಚ ನೀನಾದರೆ ಕುಚ್ಚಿದ ಜಲದೊಳು
ಸ್ವೇಚ್ಛೆಯಲಿ ತಿರುಗು ಹೋಗೈ ಸ್ವಾಮಿ
ಮಂದರಗಿರಿಯನು ಚೆಂದದಿಂದೆತ್ತಿದ
ಕುಂದರದನೆ ಕೂರ್ಮರೂಪನು
ನಾನು ಮಂದರ ಎತ್ತಿದವಗೆ ಇಂದು ಬಾಡಿಗೆ ಕೊಟ್ಟೆ
ಮುಂದಿನ ಕೆಲಸ ಪೇಳೈ । ಸ್ವಾಮಿ

.... ಹೀಗೆ ಸಾಗುತ್ತದೆ ಸಂವಾದ ಶ್ರೀನಿವಾಸ ತನ್ನ ಹಿರಿಮೆಯನ್ನು ಸಮರ್ಥಿಸಿಕೊಳ್ಳುವುದು ಪದ್ಮಾವತಿ ಆಕ್ಷೇಪಿಸುವುದು ಮುಂದುವರೆಯುತ್ತದೆ.

ಹೀಗೆಯೇ ಗುರುರಾಮವಿಠಲರು ಪ್ರಾಣೇಶದಾಸರ ನಿಂದಾಸ್ತುತಿಗಳಲ್ಲಿ ಸಂವಾದಮಾಲೆಯಲ್ಲಿ ದಶಾವತಾರದ ಸೊಗಸಿನ ನಿರೂಪಣೆ ಕಾಣಬಹುದು[29].

ಪರೋಕ್ಷ ನಿಂದಾಸ್ತುತಿಗಳು

ಹರಿದಾಸರ ಕೀರ್ತನೆಗಳಲ್ಲಿ ನೇರವಾಗಿ ನಿಂದೆ ಮಾಡಿದೆ. ರುಕ್ಮಿಣಿ, ಲಕ್ಷ್ಮೀದೇವಿ ಮೊದಲಾದವರನ್ನು ಉದ್ದೇಶಿಸಿ ಪ್ರಶ್ನೆ ಮಾಡುತ್ತಾ ಶ್ರೀಹರಿಯ ನಿಂದೆ ಮಾಡುವ ಸ್ತುತಿಗಳನ್ನು ಕಾಣುತ್ತೇವೆ. ಇದು ಹರಿದಾಸರು ಬಳಸಿರುವ ಒಂದು ಕಾವ್ಯತಂತ್ರವಾಗಿದೆ. ಉದಾಹರಣೆಗೆ

ಏನು ಮರುಳಾದ್ಯಮ್ಮ ಎಲೆ ರುಕ್ಮಿಣಿ
ಹೀನಕುಲಗೊಲ್ಲ ಶ್ರೀ ಗೋಪಾಲಕೃಷ್ಣಗೆ

ಎಂಬ ಕೀರ್ತನೆಯಲ್ಲಿ ಕೃಷ್ಣನ ಭಂಡಾಟಗಳನ್ನು ಚಿತ್ರಿಸುವ ಮೂಲಕ ಶ್ರೀಕೃಷ್ಣಚರಿತೆಯನ್ನೇ ಮುಂದಿಡುತ್ತಾರೆ[30].

"ಹಾಸಿಗಿಲ್ಲದೆ ಹಾವಿನ ಮೇಲೆ ಒರಗಿದ
ಹೇಸಿಕಿಲ್ಲದೆ ಕರಡಿಯ ಕೂಡಿದ
ಗ್ರಾಸಕಿಲ್ಲದೆ ತೊತ್ತಿನ ಮಗನ ಮನೆಯಲುಂಡ
ದೋಷಕಂಜದೆ ಮಾವನ ಶಿರ ತರಿದವಗೆ

ಕುಂಡಗೋಳಕರ ಮನೆಕುಲದೈವವೆನಿಸದವಗೆ
ಮುಂಡೆಬೋಳರ ಮನಕೆ ಮನೆದೈವನ
ಹಿಂಡುಗೊಲ್ಲರ ಮನೆಯ ಹಿರಿಯನೆಂದೆನಿಸುವನಾ
ಭಂಡಾಟದ ಗೊಲ್ಲ ಈ ಜಗದೊಳಗೆಲ್ಲ

ಒಬ್ಬರಲಿ ಹುಟ್ಟಿ ಮತ್ತೊಬ್ಬರಲಿ ಬೆಳೆದ
ಒಬ್ಬನಿಗೆ ಮಗನಲ್ಲ ಜಗದೊಳಗೆಲ್ಲ
ಅಬ್ಬರದ ದೈವ ಶ್ರೀ ಪುರಂದರವಿಠಲನ
ಉಬ್ಬುಬ್ಬಿ ಮದುವ್ಯಾದೆ ಉತ್ಸಾಹದಿಂದ

ಇದೇ ಬಗೆಯ ನಿಂದಾಸ್ತುತಿಗಳನ್ನು ಒಲಿದೆ ಯಾತಕಮ್ಮ ಲಕ್ಷುಮಿ ವಾಸುದೇವನಿಗೆ (ಶ್ರೀಪಾದರಾಜರ ಕೀರ್ತನೆ) ಕೊಡಬಹುದೆ ಮಗಳ – ಸಮುದ್ರರಾಜ ಕೊಡಬಹುದೆ ಮಗಳ (ಪುರಂದರದಾಸರು) ಒಲಿದೆ ಯಾತಕಮ್ಮ ಲಕುಮಿ ವಾಸುದೇವಂಗೆ (ಗುರುಗೋಪಾಲದಾಸರು) ಮೊದಲಾದ ಕೀರ್ತನೆಗಳಲ್ಲಿ ಕಾಣಬಹುದು.

ಶಿವಪರ ಕೀರ್ತನೆಗಳಲ್ಲಿ ನಿಂದಾಸ್ತುತಿ

ಹರಿದಾಸರು ವಿಷ್ಣುಭಕ್ತರಾದರೂ ಶಿವದ್ವೇಷಿಗಳಲ್ಲ. ಶಿವನನ್ನು ರುದ್ರನೆಂದು ಆರಾಧಿಸುತ್ತಾರೆ. ಆದರೆ ಶರಣಸಾಹಿತ್ಯದಲ್ಲಿ ಶಿವಭಕ್ತಿ ನಿರೂಪಣೆಯನ್ನು ಮಾಡುವ ವಚನಕಾರರು ವಿಷ್ಣುವನ್ನು ಕುರಿತು ಸ್ತುತಿಸುವುದಿಲ್ಲ. ಈ ವಿಚಾರದಲ್ಲಿ ಹರಿದಾಸರು ಉದಾರರು ಎಂದು ಹೇಳಬೇಕು. ನಿಂದಾಸ್ತುತಿಗಳಲ್ಲಿ ಶಿವನನ್ನು, ಗಿರಿಜೆಯನ್ನು ಕುರಿತು ಉದ್ದೇಶಿಸಿದ ಕೀರ್ತನೆಗಳನ್ನು ಗಮನಿಸಬಹುದು.

ಗುರುಗೋಪಾಲದಾಸರು ಶಿವನ ಗುಣಗಳನ್ನು ದೋಷಗಳಾಗಿ ವಿವರಿಸಿ ಪಾರ್ವತಿಯನ್ನು ಇಂಥ ವ್ಯಕ್ತಿಗೇಕೆ ಒಲಿದೆ ಎಂದು ಪ್ರಶ್ನಿಸುವ ಈ ಕೀರ್ತನೆಯನ್ನು ಗಮನಿಸಬಹುದು.

ಒಲಿದೆ ಯಾತಕಮ್ಮ ಗಿರಿಜೆ ವಾಮದೇವಂಗೆ

ಕುಸುಮಗಂಧಿ ಕೋಮಲಾಂಗಿ ಶಶಿಕಲಾಬ್ಜವದನೆ ನೀನು
ಅಸಮನೇತ್ರ ಅಸುರವೈರಿ ಭಸುಮಲೇಪನು
ವಸುಮತೀಂದ್ರ ವಂದ್ಯೆ ನೀನು ಮಸಣಮಾರಿ ಒಡೆಯ ಅವನು
ಎಸೆವೊ ರುಂಡಮಾಲನಾದ ಪಶುಪಸದ್ಯೋಜಾತನಿಗೆ

ಒಲೆವೊ ಪೀತಾಂಬರೆಯು ನೀನು ಹುಲಿಯ ಕರಿಯ ಚರ್ಮದವನು
ಲಲಿತಕಂಬು ಕಂಠಿ ನೀನು ಗರಳ ಕೊರಳಾನು
ಲಲಿತ ಕುಮುದ ಸದನ ನೀನು ನೆಲೆ ಸ್ಮಶಾನವಾಸಿ ಅವನು
ಒಲವಿನಿಂದಾ ತೀರದು ಮೆರೆದಾ ಚೆಲುವು ವಾಮದೇವನಿಗೆ

ಮುಗ್ಧ ನಾರಿಮಣಿಯು ನೀನು ಉಗ್ರಮೂರುತಿ ಉರಗಧರನು
ಅಧಿರಾತನೆಯೆ ನೀನು ಅಮಾತ್ಯಪಿತನು ಉಗ್ರದಂಷ್ಟ್ರ ಉರಗಮಾಲಾ
ಖಡ್ಗಶೂಲ ಶಂಖ ಢಾಲ ಭಾರ್ಗವೇಶಾ ಭಯವಿನಾಶ
ಅಗ್ನಿನೇತ್ರ ಘೋರನಿಗೆ

ಬೆಚ್ಚಿ ಬೆದರೋ ಅಬಲೆ ನೀನು ಕಿಚ್ಚುಗಣ್ಣಾ ಘೋರನವನು
ಭಕ್ತರಿಷ್ಟವಾಗಿ ನೀನು ಬಲು ಬಡವನವನು
ಶಿಸ್ತಿನ ಶೃಂಗಾರಿ ನೀನು ಹುಚ್ಚನಂತೆ ತಿರಿವನವನು
ಉತ್ತಮಾಂಗಿ ಒಲಿವರೇನೆ ಮೃತ್ಯುವೈರಿ ತತ್ಪುರುಷಗೆ

ಮಾರ ಮೋಹನಾಂಗಿ ನೀನು ಮಾರ ಭಸ್ಮಲೇಪನವನು
ಸಾರಸಾಕ್ಷಿ ಸರ್ಪವೇಣಿ ಚಾರುಮಂಗಳೇ
ವೀರ ವೆಂಕಟೇಶನ ಸಹೋದರಿ ಸೌಂದರ್ಯ ಶೀಲೆ
ಮೂರು ಪುರವ ಗೆಲಿದ ಮಾರ ವೈರಿಯಾದೀಶಾನನಿಗೆ

ಈಶ್ವರನ ವೇಷಭೂಷಣಗಳನ್ನು ಘೋರರೂಪವನ್ನು ಸ್ಮಶಾನವಾಸವನ್ನು ಮೂರನೇ ಕಣ್ಣನ್ನು ನಿಂದೆಗೆ ಬಳಸಿರುವುದನ್ನು ಕಾಣಬಹುದು. ಆದರೆ ಇವು ನಿಜಕ್ಕೂ ಹರನ ವಿಶೇಷ ಸಾರುವ ಗುಣಪೂರ್ಣ ಸಂಗತಿಗಳಾಗಿವೆ.

ಶಿವನನ್ನು 'ಗುಮ್ಮ'ನಾಗಿ ಮಾಡಿ ಹೆದರಿಸುವ ಧಾಟಿಯಲ್ಲಿ ನಿಂದಾಸ್ತುತಿಯನ್ನು ಪುರಂದರದಾಸರು ಮಾಡಿರುವ ಕೀರ್ತನೆಯಲ್ಲಿ ಮೊದಲನೆ ಚರಣ ಮುಂಡಿಗೆಯಂತಿದ್ದರೆ ಎರಡು ಮೂರು ಚರಣದಲ್ಲಿ ಅವನ ಆಗಮನಾದ ರೀತಿಯನ್ನು ನಿರೂಪಿಸುವುದರ ಮೂಲಕ ನಿಂದಾಸ್ತುತಿ ಮಾಡಲಾಗಿದೆ. ಗುಮ್ಮ ಮರುಳ ಭೂತ ಎಂದೆಲ್ಲಾ ಹೆದರಿಸುವ ರೀತಿಯಲ್ಲಿ ವರ್ಣಿಸಿರುವುದನ್ನು ಇಲ್ಲಿ ಗಮನಿಸಬೇಕು.

ಸುಮ್ಮನಿರು ಸುಮ್ಮನಿರು ಬೇಡಿಕೊಂಬೆ
ಈ ಮಹಿಯೊಳತಿಶಯನ ಗುಮ್ಮ ಬಂದಿದೆಕೋ

ಐದು ಮುಖ ಮತ್ತೆ ಮೂರೈದು ಕಣ್ಣುಗಳಿಂದ
ಐದು ಮುಖದೊಳಗ್ನಿ ಕಿಡಿ ಉದುರಿಸಿ
ಐದೆರಡು ತೋಳುಗಳ ನೀಡಿ ಒಲಿದಾಡಿಸುತ
ಐದು ಬಾಣನ ಗೆದ್ದ ಗುಮ್ಮ ಬಂದಿದೆಕೋ

ಬಾಲಚಂದ್ರನ ಪೊತ್ತುಕೊಂಡು ತ್ರಿಶೂಲದ ಮೇಲೆ
ಹೆಣಗಳ ಚುಚ್ಚಿ ಒಲೆದಾಡುತ
ಕಾಲಭೈರವನ ಕಾವಲನಿರಿಸಿ ಮರುಳುಗಳ
ಓಲಗದಿ ತಲೆಬಾಗಿಲಲಿ ಬಂದನಿದಕೋ

ಮುದಿ ಎತ್ತನೇರಿ ಮೈಯೊಳು ಬೂದಿಯನು ಪೂಸಿ
ಮದನಾರಿ ಎಂಬಂಥ ಬಲು ಭೂತವು
ಹೃದಯದಲಿ ನಿನ್ನ ನೋಡುವೆನೆಂಬ ಧ್ಯಾನದಲಿ
ಒದಗಿ ಬಂದೈದಾನೆ ಪುರಂದರವಿಠಲ

ಮುಂಡಿಗೆ ರೂಪದ ನಿಂದಾಸ್ತುತಿಗಳು

ಹರಿದಾಸರು ಸರಳ ನಿರೂಪಣೆಗೆ ಚೇತೋಹಾರಿ ನಿದರ್ಶನಗಳಿಗೆ ರಾಮಾಯಣ ಭಾರತ, ಭಾಗವತ ಕಾವ್ಯಗಳ ಆಳ ಪರಿಚಯಕ್ಕೆ ಹೆಸರಾದಂತೆ. ಪಾಂಡಿತ್ಯಕ್ಕೆ ಶಾಸ್ತ್ರ ಪ್ರವೀಣತೆಗೂ ಹೆಸರಾಗಿದ್ದಾರೆ. ಕನಕದಾಸರ ಮುಂಡಿಗೆಗಳು ಇದಕ್ಕೊಂದು ನಿದರ್ಶನ.

ಮುಂಡಿಗೆ ರೂಪದ ನಿಂದಾಸ್ತುತಿಗಳನ್ನು ಹರಿದಾಸರ ಕೀರ್ತನೆಗಳಲ್ಲಿ ಕಾಣಬಹುದು. ಗುರುಗೋಪಾಲವಿಠಲರ ನಿಂದಾಸ್ತುತಿಯ ಕೆಲವು ಚರಣಗಳನ್ನು ಉದಾಹರಣೆಗಾಗಿ ಕೊಡಬಹುದು[31].

ಮಗಳನು ಮದುವ್ಯಾದಿ ಮಗಳ ಅತ್ತೆಯ ಕೂಡಿ

ಮಗಳ ಗಂಡಗೆ ಮಾವ ಅಳಿಯನಾದಿ
ಮಗಳ ವೈರಿಯ ಪಿತನ ಹಗೆಯಿ ಭೂಷಣವೈರಿ
ಹೆಗಲ ಮೇಲೆ ಏರಿ ಜಗದಿ ಚರಿಪ

ಈ ಚರಣಕ್ಕೆ ಅವರು ನೀಡಿರುವ ವಿವರಣೆ ಹೀಗಿದೆ. "ಇದು ಹರಿಯ ಚಾರಿತ್ರ್ಯವನ್ನು ಕುರಿತ ಅವನ ಮತ್ತು ಅವನ ಸಂಬಂಧಗಳನ್ನು ಕುರಿತ ಒಂದು ನಿಂದಾಸ್ತುತಿ. ತನ್ನ ಸತಿಯಾದ ಭೂದೇವಿಯ ಮಗಳಾದ ಸೀತೆಯನ್ನು ರಾಮಾವತಾರದಲ್ಲಿ ಮದುವೆಯಾದನು. ತನ್ನ ಪಾದೋದ್ಭವೆ ಆದ ಮಗಳಿಗೆ ಸಮಳಾದ ಗಂಗೆಯ ಪತಿ ವರುಣನಿಗೆ ಇವನು ಮಾವ. ಆ ವರುಣನ ಮಗಳಾದ ಸಾಗರಸುತೆ ಲಕ್ಷ್ಮಿಯನ್ನೆ ಮದುವೆಯಾಗಿ ಅವನಿಗೆ ಅಳಿಯನಾದ. ದಾಕ್ಷಾಯಿಣಿಯ ಪರಿಯ ವೈರಿಯಾದ ದಕ್ಷಬ್ರಹ್ಮನ ತಂದೆ ಬ್ರಹ್ಮ. ಬ್ರಹ್ಮನ ಐದನೇ ತಲೆಯನ್ನು ತೆಗೆದು ಅವನಿಗೆ ವೈರಿಯಾದವನು ರುದ್ರ.

ರುದ್ರನ ಆಭರಣ ಸರ್ಪ. ಸರ್ಪನ ವೈರಿ ಗರುಡ. ಗರುಡನ ಹೆಗಲ ಮೇಲೆ ಏರಿ ಜಗವೆಲ್ಲಾ ಓಡಾಡುವ ವಿಷ್ಣು ನಮ್ಮ ರಕ್ಷಿಸಲಿ" ಎಂದು ದಾಸರ ಪ್ರಾರ್ಥನೆ.

ಇಂಥ ಹಲವಾರು ನಿಂದಾಸ್ತುತಿಗಳನ್ನು ಕನಕದಾಸರು ಪ್ರಾಣೇಶದಾಸರು ಮೊದಲಾದ ಹಲವಾರು ದಾಸರ ಸ್ತುತಿಗಳಲ್ಲಿ ಮುಂಡಿಗೆ ಕಾಣುತ್ತೇವೆ. ಇದೊಂದು ವಿಶೇಷ ಸಂಗತಿ ಆಗಿದೆ. ಹರಿದಾಸರ ದಾಸಸಾಹಿತ್ಯವನ್ನು ಸಮೀಕ್ಷಿಸುತ್ತ ಹೋದಂತೆಲ್ಲಾ ಈ ರೀತಿಯಾಗಿ. ಸಖ್ಯಭಾವದ ಭಕ್ತ-ಭಗವಂತ ಸಂಬಂಧದ, ರಾಮಾಯಣ ಭಾರತ ಭಾಗವತ ಪುರಾಣಗಳ ಕಥೆಗಳ ಹಿನ್ನೆಲೆಯ, ಮುಂಡಿಗೆ ರೂಪದ ಶಿವಸ್ತುತಿಗಳಲ್ಲಿ ದಶಾವತಾರ ಸ್ತುತಿಗಳಲ್ಲಿ – ಹೀಗೆ ನಿರೂಪಣೆಯಲ್ಲಿ ನಾನಾ ವಿಧದಲ್ಲಿ ವ್ಯಾಜಸ್ತುತಿಯನ್ನು ಗಮನಿಸಿ ವಿಶ್ಲೇಷಿಸಬಹುದು. ಈ ಸ್ತುತಿಗಳನ್ನು ಕಂಡಾಗಲೆಲ್ಲ ಎದ್ದು ಕಾಣುವ ಅಂಶವೆಂದರೆ ಹರಿದಾಸರ ಪಾಂಡಿತ್ಯ, ಪುರಾಣ, ಕಾವ್ಯಶಾಸ್ತ್ರಗಳಲ್ಲಿ ಅವರಿಗಿರುವ ವಿಸ್ತಾರ ಜ್ಞಾನ ಮತ್ತು ಸಮಕಾಲೀನ ಜೀವನದ ಅನುಭವಗಳ ಹಿನ್ನೆಲೆಯಲ್ಲಿ ವಾಸ್ತವ ಸಂಗತಿಗಳು. ಲೌಕಿಕ ನಿರೂಪಣೆ ಮೂಲಕ ನಿಂದಾಸ್ತುತಿ ಮಾಡಿರುವ ಕೌಶಲ ಕಾಣುತ್ತೇವೆ. ಆದರೆ ಸ್ತುತಿಯ ಮೂಲಕ ನಿಂದೆ ಮಾಡುವ ವ್ಯಾಜಸ್ತುತಿಗಳು ಅತ್ಯಪರೂಪವಾಗಿದೆ. ಇಲ್ಲವೇ ಇಲ್ಲ ಎಂದರೂ ತಪ್ಪಾಗದು.

ಈ ಎಲ್ಲಾ ನಿಂದಾಸ್ತುತಿಗಳಲ್ಲಿ ವಿವಿಧ ಬಗೆಯ ಶಬ್ದಾಲಂಕಾರ ಅರ್ಥಾಲಂಕಾರಗಳು ಕಂಡುಬರುತ್ತವೆ ಎಂಬಂಶ ಮರೆಯಬಾರದು. ಎಲ್ಲಾ ವ್ಯಾಜಸ್ತುತಿಯಲ್ಲಿ ಭಗವಂತನ ಗುಣವರ್ಣನೆ ಗುರಿ ಆಗಿದ್ದು, ದೋಷನಿರೂಪಣೆ ಒಂದು ಕಾವ್ಯತಂತ್ರವಾಗಿದೆ, ನಿರೂಪಣಾ ಕೌಶಲ್ಯವಾಗಿ ಹರಿದಾಸರ ಭಕ್ತಿ ನಿಷ್ಠೆಗಳಿಗೆ ಸಾಕ್ಷಿ ಆಗಿದೆ.

ಹರಿದಾಸ ಸಾಹಿತ್ಯದಲ್ಲಿ ಕಾಣುವಲ್ಲಿ ವೈವಿಧ್ಯಮಯ ವ್ಯಾಜಸ್ತುತಿಗಳನ್ನು ಉಳಿದ ಕಾವ್ಯ ಪ್ರಕಾರಗಳಲ್ಲಿ ಜೈನ, ವೀರಶೈವ, ವೈಷ್ಣವ ಕಾವ್ಯಗಳಲ್ಲಿ ಕಾಣಲಾರೆವು ಎಂದರೆ ತಪ್ಪಾಗದು.

– – –

ಅಧ್ಯಾಯ ನಾಲ್ಕು

ಅಡಿಟಿಪ್ಪಣಿಗಳು

1. ಕನ್ನಡ ಆಲಂಕಾರಿಕ ಗ್ರಂಥಗಳ ಸಮೀಕ್ಷೆ, ಡಾ. ಕೆ. ಕೃಷ್ಣಮೂರ್ತಿ "ಕನ್ನಡದಲ್ಲಿ ಅಲಂಕಾರ ಗ್ರಂಥಗಳು ಲೇಖನ ಮತ್ತು ಕನ್ನಡದಲ್ಲಿ ಕಾವ್ಯಮೀಮಾಂಸೆ, ಲೇಖನಗಳನ್ನು ನೋಡಿ. ಆಕರಗ್ರಂಥ ಕನ್ನಡದಲ್ಲಿ ಕಾವ್ಯತತ್ವ, ಡಾ. ಕೆ. ಕೃಷ್ಣಮೂರ್ತಿ, ಶಾರದಾ ಮಂದಿರ, ಮೈಸೂರು, 1964, ಪು.1–71.
2. ಅಲಂಕಾರತತ್ವ, ಎಂ.ಎಂ.ಹೆಗಡೆ, ಸಮಾಜ ಪುಸ್ತಕಾಲಯ, ಧಾರವಾಡ, 2001
3. ದೊಡ್ಡಬೆಲೆ ನಾರಾಯಣಶಾಸ್ತ್ರಿಗಳ ಲಕ್ಷ್ಮೀಶನ ಜೈಮಿನಿ ಭಾರತ ಟೀಕೆ, ಕುಮಾರವ್ಯಾಸ ಭಾರತ ಕುರಿತು ಬರೆದ/ಟೀಕಾಗ್ರಂಥಗಳನ್ನು ನೋಡಬಹುದು. ಬೆಳ್ಳಾವೆ ನರಹರಿಶಾಸ್ತ್ರಿ, ಶೇಷಾಯ್ಯಂಗಾರ್ ಮೊದಲಾದವರು, ಆರ್.ಗಣೇಶ್ ಅವರ ಅಲಂಕಾರ ಶಾಸ್ತ್ರ ಗ್ರಂಥ ಮತ್ತು ಅವರ ಕುಮಾರವ್ಯಾಸಭಾರತದ ಪ್ರಸಾವನೆಗಳನ್ನು ಗಮನಿಸಬಹುದು.
4. ಹರಿದಾಸರ ನಿಂದಾಸ್ತುತಿಗಳು: ಡಾ. ಕೆ. ಗೋಕುಲನಾಥ್, ಸಿಂಧುಶಯನ ಪ್ರಕಾಶನ, ಬೆಂಗಳೂರು, 1987, ಪು.3–4 ಮುನ್ನುಡಿ.
5. ತಂಬೂರಿ ಮೀಟಿದವ (ಮಹಾಪ್ರಬಂಧ) ಡಾ। ಎಚ್.ಎನ್.ಮುರಳೀಧರ, ನಿಂದಾಸ್ತುತಿಗಳು (ಪು.193–198), ಅಂಕಿತ ಪ್ರಕಾಶನ, 2005.
6. ಬೇರು ಕಾಂಡ ಚಿಗುರು, ಕೆ.ವಿ.ನಾರಾಯಣ, ಪು1. 174.
7. ಕನ್ನಡ ಸಾಹಿತ್ಯ ಸಂಗಾತಿ, ಪು.217, ಕುರ್ತಕೋಟಿ.
8. ಪರದೇಶಿ ನೀನು ಸ್ವದೇಶಿ ನಾನು, ವಿಜಯದಾಸರ ಕೀರ್ತನೆಗಳು ಸಮಗ್ರದಾಸಸಾಹಿತ್ಯ ಸಂಪುಟ 9–1.
9. ತಂಬೂರಿ ಮೀಟಿದವ (ಮಹಾಪ್ರಬಂಧ) ಡಾ। ಎಚ್.ಎನ್. ಮುರಳೀಧರ, ನಿಂದಾಸ್ತುತಿಗಳು, ಪು.193, ಅಂಕಿತ ಪ್ರಕಾಶನ, 2005.
10. ಪುರಂದರದಾಸ ಸಾಹಿತ್ಯ ಮಾಲೆ – ಕೀರ್ತನ ದರ್ಶನ–4 ಎಸ್ಕೆ ರಾಮಚಂದ್ರರಾವ್, ಉಗಾಭೋಗ 63, 1985.

11. ತಂಬೂರಿ ಮೀಟಿದವ (ಮಹಾಪ್ರಬಂಧ) ಡಾ। ಎಚ್.ಎನ್.ಮುರಳೀಧರ, ನಿಂದಾಸ್ತುತಿಗಳು, ಪು.195, ಅಂಕಿತ ಪ್ರಕಾಶನ, 2005.

12. ಪುರಂದರದಾಸ ಸಾಹಿತ್ಯ ಮಾಲೆ – ಕೀರ್ತನ ದರ್ಶನ–4 ಎಸ್ಕೆ ರಾಮಚಂದ್ರರಾವ್, ಉಗಾಭೋಗ 88.

13. ತಂಬೂರಿ ಮೀಟಿದವ (ಮಹಾಪ್ರಬಂಧ) ಡಾ। ಎಚ್.ಎನ್.ಮುರಳೀಧರ, ನಿಂದಾಸ್ತುತಿಗಳು, ಪು.195, ಅಂಕಿತ ಪ್ರಕಾಶನ, 2005.

14. ಅದೇ.

15. ಶ್ರೀನಿವಾಸ ಹಾವನೂರ: ದಾಸಸಾಹಿತ್ಯ ಸಮ್ಮೇಳನ–5, (2008 ಮಂತ್ರಾಲಯ) ಪು.12, ಅಧ್ಯಕ್ಷ ಭಾಷಣ.

16. ತಂಬೂರಿ ಮೀಟಿದವ (ಮಹಾಪ್ರಬಂಧ) ಡಾ। ಎಚ್.ಎನ್.ಮುರಳೀಧರ, ನಿಂದಾಸ್ತುತಿಗಳು, ಪು.196, ಅಂಕಿತ ಪ್ರಕಾಶನ, 2005.

17. ಅದೇ.

18. ಪುರಂದರದಾಸ ಸಾಹಿತ್ಯ ಮಾಲೆ – ಅಧ್ಯಾತ್ಮ ದರ್ಶನ–3 ಎಸ್ಕೆ ರಾಮಚಂದ್ರರಾವ್, ಕೀರ್ತನೆ 122, ಪು.280.

19. ಅದೇ.

20. ಪುರಾಣ ಭಾರತ ಕೋಶ: ಪಂಡಿತ ಐರೋಡಿ ಯಜ್ಞನಾರಾಯಣ ಉಡುಪ, ಪು.445–ಭೃಗು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 1997.

21. ಹರಿದಾಸರ ನಿಂದಾಸ್ತುತಿಗಳು: ಡಾ. ಕೆ. ಗೋಕುಲನಾಥ್, ಸಿಂಧುಶಯನ ಪ್ರಕಾಶನ, ಬೆಂಗಳೂರು, 1987, ಪು.24, ಕೀ.29.

22. ಹರಿದಾಸರ ನಿಂದಾಸ್ತುತಿಗಳು: ಡಾ. ಕೆ. ಗೋಕುಲನಾಥ್, ಸಿಂಧುಶಯನ ಪ್ರಕಾಶನ, ಬೆಂಗಳೂರು, 1987, ಪು.35, ಕೀ.37. ಈ ಮಂಗಳದ ಹಾಡು, ವಿಜಯದಾಸರು ತಿರುಪತಿಗೆ ಹೋದಾಗ, ಕೋಲುಕಾರರು ಒಳಗೆ ಬಿಡದಾಗ ಎಲ್ಲ ಕಾರ್ಯಕ್ರಮಗಳಿಗೆ ಮಂಗಳ ಹಾಡಿದ ರೀತಿಯಲ್ಲಿ ಎಂದು ಜಯಮಂಗಳ ಹಾಡುಗಳನ್ನು ಹಾಡಿದ್ದಾರೆ.

    (1) ಜಯಮಂಗಳಂ ನಿತ್ಯ ಶುಭಮಂಗಳಂ

    ತೊಳಸದಕ್ಕಿಯ ತಿಂಬ ಕಿಲುಬು ತಳಿಗೆಯಲುಂಬ ಎಂಬ ಪ್ರಸಿದ್ಧ ಕೀರ್ತನೆ

(2) ಜಯಮಂಗಳಂ ನಿತ್ಯ ಶುಭಮಂಗಳಂ
ಮಂಗಳಂ ಹತ್ತಾವತಾರದ ದೇವಗೆ

ವಿಜಯದಾಸರ ಕೀರ್ತನೆಗಳು, ಸಮಗ್ರದಾಸಸಾಹಿತ್ಯ ಸಂಪುಟ 9–2,

ಸಂ.ಜಿ.ಅಶ್ವತ್ಥನಾರಾಯಣ, ಕೀರ್ತನೆ 525 ಮತ್ತು 526, 2003.

23. ಹತ್ತೊಂಬತ್ತನೆಯ ಶತಮಾನದ ಹರಿದಾಸ ಸಾಹಿತ್ಯ ಡಾ. ಅನಂತಪದ್ಮನಾಭರಾವ್, ಸಿವಿಜಿ ಪಬ್ಲಿಕೇಶನ್, ಬೆಂಗಳೂರು, ಪು.71, 2002.

24. ಪುರಂದರ ಪರಿಮಳ, ಆರ್.ಎಚ್. ಕುಲಕರ್ಣಿ, ಪ್ರತಿಭಾಗ್ರಂಥಮಾಲೆ ಧಾರವಾಡ, 1986, ಪು.135.

25. ಅದೇ,

26. ಹತ್ತೊಂಬತ್ತನೆಯ ಶತಮಾನದ ಹರಿದಾಸ ಸಾಹಿತ್ಯ ಡಾ. ಅನಂತಪದ್ಮನಾಭರಾವ್, ಸಿವಿಜಿ ಪಬ್ಲಿಕೇಶನ್, ಬೆಂಗಳೂರು, ಪು.74, 2002.

27. ಹರಪನಹಳ್ಳಿ ಭೀಮವ್ವನ ಹಾಡುಗಳು, ಟಿ.ಎಸ್. ನಾಗರತ್ನ, ಮೈ.ವಿ.ವಿ., ಪು.197.

28. ಜನಪ್ರಿಯ ದಾಸರ ಪದಗಳು–ಪ್ರಾಣೇಶದಾಸರು, ಪು.127.

    ಗುರುರಾಮವಿಠಲರ ಕೀರ್ತನೆಗಳು, ಭಾಗ–1, ವಿಕಟವಿನೋದಿನಿ ಪ್ರೆಸ್, ಬೆಂಗಳೂರು.

29. ಪುರಂದರ ಪರಿಮಳ, ಆರ್.ಎಚ್. ಕುಲಕರ್ಣಿ, ಪ್ರತಿಭಾಗ್ರಂಥಮಾಲೆ ಧಾರವಾಡ, 1986, ಪು.132.

30. ಹತ್ತೊಂಬತ್ತನೆಯ ಶತಮಾನದ ಹರಿದಾಸ ಸಾಹಿತ್ಯ ಡಾ. ಅನಂತಪದ್ಮನಾಭರಾವ್, ಸಿವಿಜಿ ಪಬ್ಲಿಕೇಶನ್, ಬೆಂಗಳೂರು, ಪು.185, 2002.

– – –

ಅಧ್ಯಾಯ ಐದು

ಸಮಾರೋಪ

ಅಧ್ಯಾಯ ಐದು

ಸಮಾರೋಪ

ಕನ್ನಡ ಸಾಹಿತ್ಯದಲ್ಲಿ 20ನೇ ಶತಮಾನದಲ್ಲಿ ಜೀವಂತವಾಗಿರುವ ಸಾಹಿತ್ಯ ಪ್ರಕಾರಗಳಲ್ಲಿ ವಚನಸಾಹಿತ್ಯ, ಕೀರ್ತನಸಾಹಿತ್ಯ ಪ್ರಮುಖವಾದುದು. ಈ ಎರಡು ಸಾಹಿತ್ಯ ವಿಶ್ವಸಾಹಿತ್ಯಕ್ಕೆ ಕನ್ನಡಿಗರು ನೀಡಿರುವ ಅನುಪಮ ಕೊಡುಗೆಗಳಾಗಿವೆ[1]. ವಚನ ಸಾಹಿತ್ಯ ಮತ್ತು ಕೀರ್ತನ ಸಾಹಿತ್ಯವನ್ನು ಕುರಿತು ಸಾಕಷ್ಟು ಸಂಶೋಧನ ಕೃತಿಗಳು ಮಹಾಪ್ರಬಂಧಗಳು ವಿಮರ್ಶಾತ್ಮಕ ಲೇಖನಗಳು, ಪರಿಚಯಾತ್ಮಕ ಗ್ರಂಥಗಳು ಬಂದಿದ್ದರೂ ವಚನಸಾಹಿತ್ಯದಲ್ಲಿ ಆದಷ್ಟು ಕೆಲಸ ದಾಸಸಾಹಿತ್ಯದಲ್ಲಿ ಆಗಿಲ್ಲ ಎಂಬುದು ಯಾರೇ ಆದರೂ ಒಪ್ಪಬೇಕಾದ ಮಾತು. ಆದಾಗ್ಯೂ ದಾಸಸಾಹಿತ್ಯದಲ್ಲಿ 20ನೇ ಶತಮಾನದ ಉತ್ತರಾರ್ಧದಲ್ಲಿ ಸಾಕಷ್ಟು ಕೃಷಿ ನಡೆದು ಹತ್ತಾರು ಮಹಾಪ್ರಬಂಧಗಳು ನೂರಾರು ಸಂಶೋಧನೆ ಗ್ರಂಥಗಳು ಬಂದಿರುವುದು ಸತ್ಯ[1]. ಮೊದಲಿಗಿಂತ ಈಗ ಹೆಚ್ಚು ಮಂದಿ ವಿದ್ವಾಂಸರು ಈಕಡೆ ಗಮನವೀಯುತ್ತಿರುವುದು ಕಂಡುಬರುತ್ತಿದೆ. ಆದರೂ ಸಹ ದಾಸಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ಸಾಕಷ್ಟು ಅಧ್ಯಯನ ನಡೆಯಬೇಕಾಗಿದೆ. ಕೇವಲ ಪ್ರಯತ್ನರೂಪವಾಗಿ ಪರಿಚಯರೂಪವಾಗಿ ಸಾಂದರ್ಭಿಕವಾಗಿ ಅಧ್ಯಯನ ನಡೆದ ಅನೇಕ ವಿಷಯಗಳಿವೆ. ಆ ಪೈಕಿ ದಾಸಸಾಹಿತ್ಯದಲ್ಲಿ ಕಂಡುಬರುವ ಅಲಂಕಾರಗಳ ವಿಷಯವೂ ಒಂದಾಗಿದೆ. ಈ ಬಗ್ಗೆ ಕನ್ನಡದಲ್ಲಿ ಒಂದು ಪ್ರತ್ಯೇಕ ಅಧ್ಯಯನ ನಡೆದಿಲ್ಲ. ಅದರಲ್ಲೂ ದಾಸಸಾಹಿತ್ಯದಲ್ಲಿ ವಿಶಿಷ್ಟವಾದ ವ್ಯಾಜಸ್ತುತಿ ಅರ್ಥಾತ್ ನಿಂದಾಸ್ತುತಿ ಬಗ್ಗೆ ವಿಶೇಷ ಅಧ್ಯಯನ ನಡೆದಿಲ್ಲ. ಈ ಪೈಕಿ ದಾಸಸಾಹಿತ್ಯವು ಶ್ರೀಪಾದರಾಜರ ಸುತ್ತ್ಯಪ್ರಯತ್ನದಿಂದ ಹರಿದಾಸಸಾಹಿತ್ಯ ಉಗಮವಾಯಿತು. ಅದೇ ಈ ಗೇಯ ಮಾಧ್ಯಮದ ವಿವಿಧ ಪ್ರಕಾರಗಳನ್ನು ರಚಿಸಿ ಮುಂದಿನವರಿಗೆ ಮೇಲ್ಪಂಕ್ತಿ ಹಾಕಿಕೊಳ್ಳಲು ಅನಂತರ ಈ ಕೈಂಕರ್ಯವನ್ನು ಶ್ರೀ ವ್ಯಾಸರಾಯರು ಶ್ರೀ ವಾದಿರಾಜರು ಮುಂತಾದ ಯತಿವರ್ಯರು, ಪುರಂದರ, ಕನಕದಾಸ ಮುಂತಾದ ಹರಿದಾಸರು ಸರ್ವತೋಮುಖವಾಗಿ ಬೆಳೆಸಿದರು[2]. ಇದನ್ನು ಗಮನಿಸಿ ಈ ನಿಬಂಧದಲ್ಲಿ ಮೊದಲ ಬಾರಿಗೆ ಅನೇಕ ಅಂಶಗಳನ್ನು ನಾನಾದೃಷ್ಟಿಕೋನಗಳಿಂದ ಗಮನಿಸಿ ಅಧ್ಯಯನ ಮಾಡಲಾಗಿದೆ.

ಮೊದಲನೆಯದಾಗಿ ದಾಸಸಾಹಿತ್ಯದಲ್ಲಿ ವ್ಯಾಜಸ್ತುತಿಯನ್ನು ಪ್ರಸ್ತಾಪಿಸುವ ಎಲ್ಲ ಗ್ರಂಥಗಳನ್ನು ಸಮೀಕ್ಷಿಸಿ ವ್ಯಾಜಸ್ತುತಿ ಬಗ್ಗೆ ಹೇಳಿರುವ ಸಂಗತಿಗಳನ್ನು ಗಮನಿಸಲಾಗಿದೆ. ಅದಕ್ಕೆ ಆಯಾ ಅಧ್ಯಾಯಗಳ ಅಡಿಟಿಪ್ಪಣಿಗಳನ್ನು ಗಮನಿಸಿದರೆ ಈ ಅಂಶ ವಿದಿತವಾಗುತ್ತದೆ.

ಎರಡನೆಯದಾಗಿ ಅಲಂಕಾರಶಾಸ್ತ್ರದ ಗ್ರಂಥಗಳು ಎರಡು ಬಗೆ ಇವೆ. ಸಂಸ್ಕೃತ ಅಲಂಕಾರಿಕರು ಬರೆದಿರುವ ಗ್ರಂಥಗಳು ಕನ್ನಡ ಅಲಂಕಾರಿಕರು ರಚಿಸಿರುವ ಗ್ರಂಥಗಳು. ಈ ಎರಡೂ ಬಗೆಯ ಗ್ರಂಥಗಳಲ್ಲಿ ಪ್ರಸ್ತಾಪಿಸಿರುವ ಶಬ್ದಾಲಂಕಾರ ಅರ್ಥಾಲಂಕಾರಗಳನ್ನು ಗಮನಿಸಿ ಅದರಲ್ಲಿ ವ್ಯಾಜಸ್ತುತಿ ಅಲಂಕಾರವನ್ನು ಕುರಿತು ಆಲಂಕಾರಿಕರು ಏನು ಹೇಳಿದ್ದಾರೆ ಎಂಬುದನ್ನು ವಿಸ್ತೃತವಾಗಿ ವಿಮರ್ಶಾತ್ಮಕವಾಗಿ ಚರ್ಚಿಸಲಾಗಿದೆ. ಹರಿದಾಸ ಸಾಹಿತ್ಯದ ಹಿನ್ನೆಲೆಯಲ್ಲಿ ಈ ಅಂಶ ಗಮನಿಸದೆ ಹರಿದಾಸರ ಸಾಹಿತ್ಯದಲ್ಲಿ ಎಷ್ಟು ಬಗೆ ಅಲಂಕಾರಗಳು ಕಂಡುಬರುತ್ತವೆ ಎಂಬುದನ್ನು ಪ್ರಾತಿನಿಧಿಕವಾಗಿ ಗಮನಿಸಲಾಗಿದೆ.

ಮೂರನೆಯದಾಗಿ, ವ್ಯಾಜಸ್ತುತಿ ಅಲಂಕಾರದ ಲಕ್ಷಣಗಳೇನು, ಅವುಗಳನ್ನು ಸಂಸ್ಕೃತ-ಕನ್ನಡ ಆಲಂಕಾರಿಕರು ವ್ಯಾಖ್ಯಾನಿಸುವುದರಲ್ಲಿ ತೋರಿರುವ ವೈವಿಧ್ಯಗಳೇನು ಮತ್ತು ಅಲಂಕಾರಗಳನ್ನು ಹೇಗೆ ವರ್ಗೀಕರಿಸಿದ್ದಾರೆ. ಅದರಲ್ಲಿ ವ್ಯಾಜಸ್ತುತಿ ಸ್ಥಾನವೇನು ಎಂಬುದನ್ನು ಸಮೀಕ್ಷಿಸಲಾಗಿದೆ.

ನಾನಾ ಬಗೆಯ ಶಬ್ದಾಲಂಕಾರ ಅರ್ಥಾಲಂಕಾರಗಳು ದಾಸಸಾಹಿತ್ಯದಲ್ಲಿ ಹೇಗೆ ಕಂಡುಬರುತ್ತವೆ ಎಂಬುದಕ್ಕೆ ದಾಸಸಾಹಿತ್ಯದಿಂದಲೇ ನಿದರ್ಶನಗಳನ್ನು ನೀಡಲಾಗಿದೆ. ಇದಕ್ಕಾಗಿ ಸಮಗ್ರ ದಾಸಸಾಹಿತ್ಯವನ್ನು ಗಮನಿಸಲಾಗಿದೆ. ನಡುಗನ್ನಡ ಸಾಹಿತ್ಯದಲ್ಲಿ ಕನ್ನಡ ಕಾವ್ಯಗಳಲ್ಲಿ ಬಂದಿರುವ ವ್ಯಾಜಸ್ತುತಿಗಳಿಗೂ ಹರಿದಾಸರ ಕೀರ್ತನೆಗಳಲ್ಲಿ ಕಂಡುಬರುವ ವ್ಯಾಜಸ್ತುತಿಗಳಿಗೂ ಇರುವ ವ್ಯತ್ಯಾಸಗಳನ್ನು ಗುರುತಿಸಲಾಗಿದೆ.

ಹೊಸಗನ್ನಡದಲ್ಲೂ ವ್ಯಾಜಸ್ತುತಿ ಕಂಡುಬರುವುದನ್ನು ಉಲ್ಲೇಖಿಸಲಾಗಿದೆ[3]. ದಾಸಸಾಹಿತ್ಯದಲ್ಲಿ ನವರಸಗಳಲ್ಲಿ ಪಂಚವಿಧ ಭಾವಗಳಲ್ಲಿ ಮುಖ್ಯವಾಗಿ ಸಖ್ಯಭಾವದಲ್ಲಿ ವ್ಯಾಜಸ್ತುತಿ ಹೇಗೆ ನಿರೂಪಿತವಾಗಿದೆ ಎಂಬುದನ್ನು ಸಮೀಕ್ಷಿಸಿದೆ.

ಇನ್ನು ಹರಿದಾಸ ಸಾಹಿತ್ಯದಲ್ಲಿ ವ್ಯಾಜಸ್ತುತಿ ಅಲಂಕಾರ ಇತರ ಅಲಂಕಾರಗಳಿಗಿಂತ ಅತ್ಯಧೀಕ ಸಂಖ್ಯೆಯಲ್ಲಿ ಹೇಗೆ ಕಾಣಿಸಿಕೊಂಡಿದೆ, ಎಷ್ಟು ವೈವಿಧ್ಯ ಮುಂತಾಗಿ ಕಾಣಿಸಿದೆ ಎಂಬುದನ್ನು ವಿವರವಾಗಿ ವಿಮರ್ಶಿಸಲಾಗಿದೆ. ಇದು ಈ ನಿಬಂಧದ ಮುಖ್ಯ ಭಾಗವೂ ಆಗಿದೆ. ಶ್ರೀಪಾದರಾಜರಿಂದ ಗುರುಗೋವಿಂದವಿಠಲರವರೆಗೆ ಸುಮಾರು 500 ವರ್ಷಗಳ ಅವಧಿಯ ಸಾವಿರಾರು ಕೀರ್ತನೆಗಳನ್ನು ಗಮನಿಸಿ ವ್ಯಾಜಸ್ತುತಿಯ ಮುಖ್ಯ ಕೀರ್ತನೆಗಳನ್ನು ವಿಮರ್ಶೆಗೆ ಒಳಪಡಿಸಲಾಗಿದೆ. ಸಮಗ್ರ ದಾಸಸಾಹಿತ್ಯದ ಎಲ್ಲ ವ್ಯಾಜಸ್ತುತಿಯ ಕೀರ್ತನೆಗಳನ್ನು ಈ ಪ್ರಬಂಧದ ಪುಟ ಮಿತಿ ಮೀರುವ ಕಾರಣ ಪ್ರಸ್ತಾಪಿಸಿಲ್ಲ ಪ್ರಾತಿನಿಧಿಕವಾಗಿ ಕೆಲವೇ ವ್ಯಾಜಸ್ತುತಿಗಳನ್ನು ಆಯ್ದು ವಿಮರ್ಶಿಸಲಾಗಿದೆ.

ಆ ಮೂಲಕ ವ್ಯಾಜಸ್ತುತಿ ಸಮಗ್ರ ಸ್ವರೂಪ, ವೈವಿಧ್ಯ ವೈಶಿಷ್ಟ್ಯಗಳನ್ನು ನಿರೂಪಿಸಿ ವಿವೇಚಿಸಲಾಗಿದೆ.

ಇದುವರೆಗೆ ವಿದ್ವಾಂಸರು ಗಮನಿಸಿರುವ ವ್ಯಾಜಸ್ತುತಿಗಳ ಜೊತೆಗೆ ಹೊಸದಾಗಿ ಹತ್ತಾರು ವ್ಯಾಜಸ್ತುತಿಗಳನ್ನು ಗುರುತಿಸಲಾಗಿದೆ. ಉದಾಹರಣೆಗೆ ಗೋಕುಲನಾಥರು ಸಂಗ್ರಹಿಸಿ ಪ್ರಕಟಿಸಿರುವ ನಿಂದಾಸ್ತುತಿಗಳು ಗ್ರಂಥದಲ್ಲಿ 50 ವ್ಯಾಜಸ್ತುತಿಗಳಿವೆ[4]. ಅದಲ್ಲದೆ ಇನ್ನೂ ಹತ್ತಾರು ಇರುವುದನ್ನು ಈ ನಿಬಂಧದಲ್ಲಿ ಸೂಚಿಸಲಾಗಿದೆ.

ವ್ಯಾಜಸ್ತುತಿಗಳನ್ನು ವ್ಯಾಖ್ಯಾನಿಸುವುದರಲ್ಲಿ ಆಯಾ ಕೀರ್ತನೆಗಳಲ್ಲಿ ಬರುವ ಪೂರ್ವ ಕಥೆಗಳನ್ನು ವಿವರಿಸಲಾಗಿದೆ. ಪಾಠಾಂತರಗಳನ್ನು ಚರ್ಚಿಸಲಾಗಿದೆ. ವ್ಯಾಜಸ್ತುತಿಗಳನ್ನು ಮೊದಲಬಾರಿಗೆ ಹೊಸ ರೀತಿಯಲ್ಲಿ ವರ್ಗೀಕರಿಸಿ ಅಧ್ಯಯನ ಮಾಡಲಾಗಿದೆ. ಭಕ್ತ–ಭಗವಂತನನ್ನು ಕುರಿತ ವ್ಯಾಜಸ್ತುತಿಗಳು, ದಶಾವತಾರ ವ್ಯಾಜಸ್ತುತಿಗಳು, ಮುಂಡಿಗೆ ರೂಪ ವ್ಯಾಜಸ್ತುತಿಗಳು, ಹರಿದಾಸರ ಬದುಕಿಗೆ ಸಂಬಂಧಿಸಿದ ವ್ಯಾಜಸ್ತುತಿಗಳು, ಭಾರತ ಭಾಗವತ ರಾಮಾಯಣದ ವ್ಯಾಜಸ್ತುತಿಗಳು, ತೀರ್ಥಕ್ಷೇತ್ರ ಕುರಿತ ವ್ಯಾಜಸ್ತುತಿಗಳು, ಶಿವಪರ ನಿಂದಾಸ್ತುತಿಗಳು ಇತ್ಯಾದಿ ಶೀರ್ಷಿಕೆಗಳಲ್ಲಿ ವ್ಯಾಜಸ್ತುತಿಯ ಎಲ್ಲ ಬಗೆಯ ವಿಷಯ ವೈವಿಧ್ಯವನ್ನು ಗುರುತಿಸಲಾಗಿದೆ.

ಒಟ್ಟಿನಲ್ಲಿ ಕನ್ನಡದಲ್ಲಿ ಮೊದಲ ಬಾರಿಗೆ ಅರ್ಥಾಲಂಕಾರ ಒಂದನ್ನು ಎಂದರೆ ವ್ಯಾಜಸ್ತುತಿ ಅಲಂಕಾರವೊಂದನ್ನು ಕುರಿತು ಹರಿದಾಸ ಸಾಹಿತ್ಯದಲ್ಲಿ ಈ ಅಲಂಕಾರ ಹೇಗೆ ನಿರೂಪಿತವಾಗಿದೆ ಎಂಬುದರ ಸಮಷ್ಟಿ ಅಧ್ಯಯನ ಮಾಡಿದ ನಿಬಂಧ ಇದಾಗಿದೆ. ದಾಸಸಾಹಿತ್ಯದ ಇತಿಹಾಸದಲ್ಲಿ ಇಷ್ಟು ವಿವರವಾದ ಅಧ್ಯಯನವನ್ನು ವ್ಯಾಜಸ್ತುತಿ ಅಲಂಕಾರವನ್ನು ಕುರಿತು ಮಾಡಿರುವ ಮೊದಲ ಪ್ರಯತ್ನ ಇದು ಎಂದರೆ ತಪ್ಪಾಗಲಾರದು.

– – –

ಅಧ್ಯಾಯ ಐದು

ಅಡಿಟಿಪ್ಪಣಿಗಳು

1. ಕನ್ನಡ ಶಾರದೆಯ ಎರಡು ಕಣ್ಣುಗಳು (ಅಪ್ರಕಟಿತ ಲೇಖನ) ಪ್ರೊ. ಜಿ. ಅಶ್ವತ್ಥನಾರಾಯಣ
2. ಹರಿದಾಸ ಸಾಹಿತ್ಯಸಾರ – ಜಿ.ವರದರಾಜರಾವ್, ಪು.7, ಮೈ.ವಿ.ವಿ.
3. ಹರಿದಾಸರ ನಿಂದಾಸ್ತುತಿಗಳು: ಕೆ. ಗೋಕುಲನಾಥ, ಸಿಂಧುಶಯನ ಪ್ರಕಾಶನ, 1987, ಪು.4
4. ಅಲಂಕಾರತತ್ವ– ಎಂ.ಎಂ. ಹೆಗಡೆ, ಸಮಾಜ ಪುಸ್ತಕಾಲಯ, ನೋಡಿ.

– – –

ಅನುಬಂಧಗಳು

ಆಕರಗ್ರಂಥಸೂಚಿ

ಆಕರಗ್ರಂಥಸೂಚಿ

ಅ. ಅಲಂಕಾರ ಗ್ರಂಥಗಳು	ಆ. ವಿಮರ್ಶಾ ಗ್ರಂಥಗಳು
ಇ. ಕೀರ್ತನ ಸಂಗ್ರಹಗಳು	ಈ. ಪತ್ರಿಕಾಲೇಖನಗಳು

ಅ. ಅಲಂಕಾರಗ್ರಂಥಗಳು

ಕನ್ನಡ ಕೈಪಿಡಿ	ಮೈ.ವಿ.ವಿ., 1927.
ಕೀರ್ತಿ ರಘುರಾವ್	ದಾಸಸಾಹಿತ್ಯದಲ್ಲಿ ಕಾವ್ಯಪ್ರತಿಭೆ, ದ್ವೈತ ವೇದಾಂತ ಅಧ್ಯಯನ ಸಂಶೋಧನ ಪ್ರತಿಷ್ಠಾನ, ಬೆಂಗಳೂರು.
ಕೃಷ್ಣ ಎ.ಆರ್. ಮತ್ತು ಕೆ.ವರದಾಚಾರ್ಯರು	ಅಲಂಕಾರಶಾಸ್ತ್ರ ಕೈಪಿಡಿ, ಭಾಗ–3, 'ಮೈ.ವಿ.ವಿ., 1985–86.
ಕೃಷ್ಣಮೂರ್ತಿ ಕೆ. ಡಾ।	ಆನಂದವರ್ಧನನ ಕಾವ್ಯಮೀಮಾಂಸೆ, ತ.ಸು.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು, 1951.
ಕೃಷ್ಣಮೂರ್ತಿ ಕೆ. ಡಾ।	ಕನ್ನಡ ಕಾವ್ಯ ಮೀಮಾಂಸೆ
ಕೃಷ್ಣಮೂರ್ತಿ ಕೆ. ಡಾ।	ಕನ್ನಡ ಕಾವ್ಯಪ್ರಕಾಶ
ಕೃಷ್ಣಮೂರ್ತಿ ಕೆ. ಡಾ। (ಸಂ.)	ಕನ್ನಡ ಕಾವ್ಯಾಲಂಕಾರ, ಶಾರದ ಮಂದಿರ, ಮೈಸೂರು, 1955.
ಕೃಷ್ಣಮೂರ್ತಿ ಕೆ. ಡಾ।	ಕನ್ನಡ ಕಾವ್ಯಾಲಂಕಾರ, ಶಾರದ ಮಂದಿರ, ಮೈಸೂರು, 1955–67, ಸಂ.ಶಂಕರನಾರಾಯಣರಾವ್.
ಕೃಷ್ಣಮೂರ್ತಿ ಕೆ. ಡಾ।	ಕನ್ನಡ ಧ್ವನ್ಯಾಲೋಕ ಮತ್ತು ಲೋಚನಸಾರ, ಶಾರದ ಮಂದಿರ, ಮೈಸೂರು, 1961
ಕೃಷ್ಣಮೂರ್ತಿ ಕೆ. ಡಾ। (ಸಂ.)	ಕವಿರಾಜಮಾರ್ಗಂ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, 1983.

ಕೃಷ್ಣಮೂರ್ತಿ ಕೆ. ಡಾ।	ಕಾವ್ಯಾಲಂಕಾರ ಸೂತ್ರ-ವೃತ್ತಿ, ಶಾರದ ಮಂದಿರ, ಮೈಸೂರು, 1967.
ಕೃಷ್ಣಮೂರ್ತಿ ಕೆ. ಡಾ।	ರಸೋಲ್ಲಾಸ.
ಗೀತಾಚಾರ್ಯ ನಾ.	ಹರಿದಾಸ ಸಾಹಿತ್ಯದ ಮೂರು ದಾರಿಗಳು, ಪ್ರಶಾಂತ್, ಎಂಟರ್‌ಪ್ರೈಸಸ್, ಬೆಂಗಳೂರು 2004.
ಗೋಕುಲನಾಥ ಕೆ. ಡಾ। (ಸಂ)	ಹರಿದಾಸರ ನಿಂದಾಸ್ತುತಿಗಳು, ಸಿಂಧುಶಯನ ಪ್ರಕಾಶನ, ಬೆಂಗಳೂರು, 1987.
ಜಗನ್ನಾಥ ಎಸ್. (ಸಂ.)	ಅಲಂಕಾರಪಾಠ, ಸಂಸ್ಕೃತ ಮಹಾವಿದ್ಯಾಲಯ, ಮಲ್ಲೇಶ್ವರಂ, ಬೆಂ. 1995.
ತಿಪ್ಪೇರುದ್ರಸ್ವಾಮಿ ಹೆಚ್.	ತೌಲನಿಕ ಕಾವ್ಯಮೀಮಾಂಸೆ
ನಂದಿಮಠ ಶಿ.ಚೆ.,	ಕುವಲಯಾನಂದ, ಪ್ರ: ಕ.ವಿ.ವಿ. 1970,
ನರಸಿಂಹಶಾಸ್ತ್ರಿ ಕೊಣನೂರು, ವಿದ್ವಾನ್ & ಜಿ.ಆರ್. ಶ್ರೀನಿವಾಸ ಅಯ್ಯಂಗಾರ್	ಅಪ್ರತಿಮ ವೀರಚರಿತೆ (ಮು.) ಶಂಕರ ಮುದ್ರಣಾಲಯ, ಬೆಂಗಳೂರು, 1972.
ನಾರಾಯಣ ಕೆ.ವಿ. ಡಾ।	ಧ್ವನ್ಯಾಲೋಕ-ಒಂದು ಅಧ್ಯಯನ
ನಾವಡ ಎ.ವಿ.	ದಾಸಮಾರ್ಗ, ಮಂತ್ರಾಲಯ ಮಠ, 2004.
ಪಂಚಮುಖಿ ಆರ್.ಎಸ್.	ಹರಿದಾಸಸಾಹಿತ್ಯ, ಕ.ಸಾ.ಪ., ಬೆಂಗಳೂರು, 1952.
ಪಾದೇಕಲ್ಲು ನರಸಿಂಹಭಟ್ಟ	ಅಭಿನವಗುಪ್ತ
ಪುಟ್ಟಪ್ಪ ಕೆ.ವಿ.	ಕನ್ನಡ ಕೈಪಿಡಿ, ಮೈಸೂರು ವಿ.ವಿ. (ಪ್ರ.)
ಪ್ರಧಾನ ಗುರುದತ್	ರಸಸಿದ್ಧಾಂತ
ಬಸವನಾಳ ಶಿ.ಶಿ. & ಕೇಪು ಶಂಕರನಾರಾಯಣ (ಸಂ)	ನಾಗವರ್ಮ ಕವಿಕೃತ-ಕಾವ್ಯಾವಲೋಕನಂ ಕಾಂತೇಶ, ಶ್ರೀನಿವಾಸ ಕಮಲಾಪೂರ, ಕರ್ನಾಟಕ ವಿದ್ಯಾವಿರ್ಧಕ ಸಂಘ, ಧಾರವಾಡ, 1939.

ಬಸವಲಿಂಗಯ್ಯ ಎಂ.ಎಸ್. ನಾಗವರ್ಮ ಕಾವ್ಯಾವಲೋಕನಂ, ಮೈಸೂರು, 1939.

ಮಹಾದೇವಪ್ಪ, ಸಿ. ಪ್ರೊ (ಸಂ.) ಉದಯಾದಿತ್ಯಾಲಂಕಾರಂ, ನವಭಾರತ ಎಂಟರ್‌ಪ್ರೈಸಸ್, 1996.

ರಂಗಸ್ವಾಮಿ ಅಯ್ಯಂಗಾರ್ ಎಚ್.ಆರ್. ಮತ್ತು ಜಿ.ಆರ್. ಶ್ರೀನಿವಾಸ ಅಯ್ಯಂಗಾರ್ (ಸಂ.ಪ್ರ.) ಅಪ್ರತಿಮ ವೀರಚರಿತ್ರೆ, ಶಂಕರ ಮುದ್ರಣಾಲಯ, ಬೆಂಗಳೂರು, 1972.

ರಾಮಚಂದ್ರರಾವ್ ಎಸ್ಕೆ ಪುರಂದರದಾಸ ಸಾಹಿತ್ಯ ಮಾಲೆ, ಜೀವನ ದರ್ಶನ–1, 1985.

ರಾಮಚಂದ್ರರಾವ್ ಎಸ್ಕೆ ಪುರಂದರದಾಸ ಸಾಹಿತ್ಯ ಮಾಲೆ, ಅಧ್ಯಾತ್ಮ ದರ್ಶನ–2, 1985.

ರಾಮಚಂದ್ರರಾವ್ ಎಸ್ಕೆ ಪುರಂದರದಾಸ ಸಾಹಿತ್ಯ ಮಾಲೆ, ಸಮಾಜ ದರ್ಶನ–3, 1985.

ರಾಮಚಂದ್ರರಾವ್ ಎಸ್ಕೆ ಪುರಂದರದಾಸ ಸಾಹಿತ್ಯ ಮಾಲೆ, ಕೀರ್ತನ ದರ್ಶನ–4, ಉಗಾಭೋಗ 63, 1985.

ವಿಷ್ಣುಮೂರ್ತಿಭಟ್ಟ ಜಿ. ವಿದ್ವಾನ್ (ಲೇ. & ಸಂ) ಚಂದ್ರಾಲೋಕಃ, ಮಂಗಳೂರು ಪ್ರಿಂಟರ್, ಮೈಸೂರು, 1968.

ಶತಾವಧಾನಿ ಗಣೇಶ ಅಲಂಕಾರಶಾಸ್ತ್ರ, ಭಾರತೀಯ ವಿದ್ಯಾಭವನ, 2007.

ಶಿವರಾಮಯ್ಯ ಬಿ.ಕೆ. ಅಲಂಕಾರಶಾಸ್ತ್ರ, ಮೈಸೂರು ವಿ.ವಿ.

ಶೇಷಾಚಾರ್ಯ ಕೌಲಗಿ (ಅನು.) ಅಲಂಕಾರ ಶಾಸ್ತ್ರ, ಪರಿಮಳ ಗ್ರಂಥ ಪ್ರಕಾಶನ ಮಂದಿರ, ಮೈಸೂರು, 1948.

ಶ್ರೀಕಂಠಯ್ಯ ತೀ.ನಂ. ಭಾರತೀಯ ಕಾವ್ಯಮೀಮಾಂಸೆ, ಕನ್ನಡ ಸಂಸ್ಕೃತಿ ಇಲಾಖೆ ಪ್ರಕಾಶನ, 1953.

ಶ್ರೀನಿವಾಸಾಚಾರ್ಯ ಮಾನಕರಿ ಶ್ರೀಹರಿದಾಸ ವಿದ್ಯೆ, ಬಿ.ಎಸ್.ಅನಿಲ್ ಕುಮಾರ್, ಬಳ್ಳಾರಿ, 2004.

ಸಿದ್ಧಪ್ಪಾರಾಧ್ಯ, ಟಿ.ಜಿ. (ಅನು.) ಕನ್ನಡ ರಸಗಂಗಾಧರ, ಚನ್ನಬಸವೇಶ್ವರ ಗ್ರಂಥಮಾಲೆ, ವಿಶ್ವೇಶ್ವರಪುರ, ಬೆಂ. 1965.

ಸೀತಾರಾಮಯ್ಯ ಎಂ.ವಿ.	ಉದಯಾದಿತ್ಯಾಲಂಕಾರಂ, ಡಿ.ವಿ.ಕೆ. ಮೂರ್ತಿ, ಮೈಸೂರು, 1970.
ಸೀತಾರಾಮಯ್ಯ ಎಂ.ವಿ. (ಸಂ)	ಕವಿರಾಜಮಾರ್ಗಂ, ಕರ್ನಾಟಕ ಸಂಘ ಸರ್ಕಾರಿ ಕಲಾ ಕಾಲೇಜು, ಬೆಂಗಳೂರು, 1967–68.
ಸೀತಾರಾಮಯ್ಯ ವಿ. (ಸಂ.)	ಎರಡನೆಯ ನಾಗವರ್ಮ, ಐ.ಬಿ.ಎಚ್. ಪ್ರಕಾಶನ.
ಹಿರೇಮಠ ಎ.ಎಲ್. ಪ್ರೊ। & ತೋಘಖಾನೆ ಎಸ್.ಬಿ. (ಸಂ.)	ಮಮ್ಮಟನ ಕಾವ್ಯಪ್ರಕಾಶ (ಉಲ್ಲಾಸ 1,2,3) ಪ್ರಕಾಶ, ಎಸ್.ಎಸ್. ಒಡೆಯರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
ಹೆಗಡೆ ಎಂ.ಎಂ. ಪ್ರೊ।	ಅಲಂಕಾರ ತತ್ತ್ವ, ಸಮಾಜ ಪುಸ್ತಕಾಲಯ, ಧಾರವಾಡ, 2001.

– – – –

ಆ. ವಿಮರ್ಶಾ ಗ್ರಂಥಗಳು

ಅಕ್ಕಮಹಾದೇವಿ	ಪುರಂದರದಾಸರ ಮತ್ತು ಅನ್ನಮಾಚಾರ್ಯರ ಕೀರ್ತನೆಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು ವಿ.ವಿ., 1987.
ಅನಂತಪದ್ಮನಾಭರಾವ್	19ನೇ ಶತಮಾನದ ಹರಿದಾಸಸಾಹಿತ್ಯ, ಬೆಂಗಳೂರು ವಿ.ವಿ., 1991.
ಅಶ್ವತ್ಥನಾರಾಯಣ ಜಿ. ಪ್ರೊ।	ಸಮಗ್ರದಾಸಸಾಹಿತ್ಯ ಸಂಪುಟ–9, ಭಾಗ 1&2, 2003.
ಕುಲಕರ್ಣಿ, ಕೆ.ಎಚ್. ಡಾ।	ಮಹಿಪತಿದಾಸರ ಹಾಡುಗಳು, ಗುಲ್ಬರ್ಗ ವಿ.ವಿ., 1989.
ಕುಲಕರ್ಣಿ, ಆರ್.ಎಚ್.	ಪುರಂದರ ಪರಿಮಳ, ಪ್ರತಿಭಾ ಗ್ರಂಥಮಾಲೆ, ಧಾರವಾಡ, 1986.
ಕೃಷ್ಣರಾವ್, ಕೆ.ಎಂ. ಡಾ।	ಜಗನ್ನಾಥದಾಸರು, ಉಷಾ ಸಾಹಿತ್ಯಮಾಲೆ, 1956.
ಗುರುವೇದವ್ಯಾಸರು ಹಂಡೆ, ವೇ।	ಶ್ರೀ ಕನಕದಾಸರು (ವಿಮರ್ಶಾತ್ಮಕ), ರಾಮಕೃಷ್ಣ ಕೇಕುಡರು, ಬೆಂಗಳೂರು, 1963
ಗುಡಿ, ಆರ್.ಜಿ.	ದಾಸಸಾಹಿತ್ಯ: ಒಂದು ಸೈದ್ಧಾಂತಿಕ ಅಧ್ಯಯನ ಕರ್ನಾಟಕ ವಿ.ವಿ. 1993, ಶ್ರೀನಿಧಿ ಪ್ರಕಾಶನ, ಅಥಣಿ, 1994.
ಗೋಕುಲನಾಥ, ಕೆ. ಡಾ।	ಶ್ರೀ ವಿಜಯದಾಸರು ಮತ್ತು ಅವರ ಕೃತಿಗಳು, ಸಿಂಧುಶಯನ ಪ್ರಕಾಶನ, 1978.
ಗೋನವಾರ ರಾಮದಾಸರು	ಸ್ವಾಮಿರಾವ್ ಕುಲಕರ್ಣಿ, ಡಾ। ಗುಲ್ಬರ್ಗ ವಿ.ವಿ.
ಚುಳ್ಳುಲಾಲ್	ಪುರಂದರದಾಸರು ಮತ್ತು ಸೂರದಾಸರು: ಒಂದು ತೌಲನಿಕ ಅಧ್ಯಯನ, ಗುಲ್ಬರ್ಗ ವಿ.ವಿ., 1990.

ಜಯಲಕ್ಷ್ಮಿ ಮಂಗಳಮೂರ್ತಿ, ಡಾ।	ಗುಲ್ಬರ್ಗಾ ವಿಭಾಗದ ಆಧುನಿಕ ಹರಿದಾಸರು ಗುಲ್ಬರ್ಗ ವಿ.ವಿ., 1996
ಜಯಲಕ್ಷ್ಮಿ ಮಂಗಳಮೂರ್ತಿ, ಡಾ।	ಹೈದ್ರಾಬಾದ್ ಕರ್ನಾಟಕದ ಆಧುನಿಕ ದಾಸಸಾಹಿತ್ಯ, ಗುಲ್ಬರ್ಗ ವಿ.ವಿ.
ತಿಪ್ಪೇರುದ್ರಸ್ವಾಮಿ ಎಚ್. ಡಾ।	ತೌಲನಿಕ ಕಾವ್ಯಮೀಮಾಂಸೆ, ಡಿ.ವಿ.ಕೆ.ಮೂರ್ತಿ, ಮೈಸೂರು, 1985
ನಂದಕುಮಾರ	ಕೃಷ್ಣ ಸಂಸ್ಕೃತಿ: ಪುರಂದರ-ಕನಕರ ಕೊಡುಗೆ
ನಾಗರತ್ನ ಟಿ.ಎಸ್. ಡಾ।	ಹರಿದಾಸ ಸಾಹಿತ್ಯದಲ್ಲಿ ಭಕ್ತಿಯ ಸ್ವರೂಪ ಮೈಸೂರು ವಿ.ವಿ., 1975
ನಾಯಕ, ಟಿ.ವಿ.	ತುಕಾರಾಮ ಮತ್ತು ಪುರಂದರದಾಸರ ತೌಲನಿಕ ಅಧ್ಯಯನ
ನಾರಾಯಣಾಚಾರ್ಯ ಧೂಳಖೇಡ	ಹರಿಕಥಾಮೃತಸಾರ ಮತ್ತು ಭಾಗವತ ಧರ್ಮ, ಕರ್ನಾಟಕ ವಿ.ವಿ., 1987.
ಪವನಕುಮಾರ (ಗಂಗಾವತಿ)	ತಂದೆವಿಜಯರಾಯ, ಗುಲ್ಬರ್ಗ ವಿ.ವಿ.
ಪಾಟೀಲ, ಎ.ಟಿ. ಡಾ।	ಪ್ರಸನ್ನವೆಂಕಟದಾಸರು ಮತ್ತು ಅವರ ಕೃತಿಗಳು, ಮಿಂಚಿನಬಳ್ಳಿ, 1956.
ಪುರೋಹಿತ, ಎಸ್.ಎಸ್. ಡಾ।	ಕನಕದಾಸರು ಮತ್ತು ಅವರ ಕೃತಿಗಳು, ಕರ್ನಾಟಕ ವಿ.ವಿ. 1970.
ಬಸವರಾಜ ಸಬರದ, ಡಾ।	ಬಸವೇಶ್ವರ ಮತ್ತು ಪುರಂದರದಾಸ: ಒಂದು ಸಾಹಿತ್ಯಿಕ ಅಧ್ಯಯನ, ಗುಲ್ಬರ್ಗ ವಿ.ವಿ., 1982.
ಮಧುಮತಿ ದೇಶಪಾಂಡೆ	ಮೋಹನದಾಸರು ಜೀವನ ಮತ್ತು ಕೃತಿದರ್ಶನ
ಮಾಲಿನಿ ಆರ್.	ಹರಿದಾಸ ಸಾಹಿತ್ಯದ ಕಾವ್ಯ ಸ್ವರೂಪ
ಮುಗಳಿ ರಂ.ಶ್ರೀ.	ಕನ್ನಡ ಸಾಹಿತ್ಯ ಚರಿತ್ರೆ, ಉಷಾ ಸಾಹಿತ್ಯ ಮಾಲೆ, ಮೈಸೂರು, 1978.
ಮುರಳೀಧರ ಹೆಚ್.ಎನ್. ಡಾ।	ತುಂಬೂರಿ ಮೀಟಿದವ, ಅಂಕಿತ ಪುಸ್ತಕ, ಬೆಂಗಳೂರು, 2005.
ರಮಾ ಕಲ್ಲೂರ, ಡಾ।	ಗೋರೆಬಾಳ ಹನುಮಂತ-ರಾಯರ ಜೀವನ ಮತ್ತು ಸಾಧನೆ, ಗುಲ್ಬರ್ಗ ವಿ.ವಿ., 2007

ರಾಜಶ್ರೀ ಇಲ್ಲೂರಕರ ಡಾ।	ಹರಿದಾಸರು ರಚಿಸಿದ ಬಯಲಾಟಗಳು, ಗುಲ್ಬರ್ಗ ವಿ.ವಿ.
ರಾಮಶೇಷನ್, ಎನ್.ಕೆ. ಡಾ।	ಕನ್ನಡದಲ್ಲಿ ಹರಿದಾಸ ಚಳುವಳಿ, (ತಿರುಪತಿ ತಿರುಮಲ ಪ್ರಕಟಿತ) ಬೆಂಗಳೂರು, 1981.
ಲೋಕೂರ, ಎಚ್.ಜಿ.	ವಾದಿರಾಜರ ಕನ್ನಡ ಕೃತಿಗಳ ಸಮಾಲೋಚನೆ, ಕರ್ನಾಟಕ ವಿ.ವಿ., 1987
ವರದರಾಜರಾವ್ ಜಿ.	ಹರಿದಾಸ ಸಾಹಿತ್ಯಸಾರ, ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ. 1987.
ವಾಸುದೇವ ಅಗ್ನಿಹೋತ್ರಿ, ಡಾ।	ಪುರಂದರದಾಸರು ಮತ್ತು ಭಾಗವತ, ಉಸ್ಮಾನಿಯ ವಿ.ವಿ., 1980.
ವಿಜಯೀಂದ್ರಾಚಾರ್ಯ ಬೆ.ನಾ.	ದಾಸಭಾರತಿ, ಶ್ರೀಹರಿಭಜನಾ ಸಂಸತ್, ಉಡುಪಿ, 2000.
ವೇದವ್ಯಾಸಾಚಾರ್ಯ ಎಚ್.ಕೆ. ಡಾ।	ಕರ್ನಾಟಕದ ಹರಿದಾಸರು ವಿಮರ್ಶಾತ್ಮಕ ಅಧ್ಯಯನ, ಪರಿಮಳ ಸಂಶೋಧನೆ, 1965.
ಶಿವರುದ್ರಪ್ಪ ಜಿ.ಎಸ್.	ಕಾವ್ಯಾರ್ಥ ಚಿಂತನ, ಶಾರದಾ ಪ್ರಕಾಶನ, ಬೆಂ., 1983.
ಶೀಲಾದಾಸ್, ಡಾ।	ದಾಸಸಾಹಿತ್ಯದಲ್ಲಿ ಸುಳಾದಿಗಳ ಸ್ಥಾನ, ಗುಲ್ಬರ್ಗ ವಿ.ವಿ.
ಶ್ರೀನಿವಾಸ, ಪಾ.ಶ. ಡಾ।	ಶರಣ ಮತ್ತು ದಾಸಸಾಹಿತ್ಯ ತೌಲನಿಕ ಅಧ್ಯಯನ
ಶ್ರೀನಿವಾಸಾಚಾರ್ಯ ಮಾನಕರಿ	ಹರಿದಾಸ ಸಾಹಿತ್ಯ ಮತ್ತು ಶ್ರೀಮದ್ಭಾಗವತ ಋಣ ಮತ್ತು ವೃದ್ಧಿ
ಸೀತಾ ಗುಡೂರ	ಅಸ್ಕಿಹಾಳ ಗೋವಿಂದದಾಸರು, ಗುಲ್ಬರ್ಗ ವಿ.ವಿ., 2007.
ಸುಧಾಕರ್ ಪ್ರೊ।	ಕನಕದಾಸರ ಕೀರ್ತನೆಗಳು, ಸಂಪುಟ–5, ಭಾಗ 1–2, ಕನ್ನಡ ಸಂಸ್ಕೃತಿ ನಿರ್ದೇಶನಾಲಯ, ಬೆಂ., 2003.

ಸುನಂದಮ್ಮ ಆರ್. ಡಾ।	ದಾಸಸಾಹಿತ್ಯದಲ್ಲಿ ಜಾನಪದೀಯ ಅಂಶಗಳು (ತಿ.ತಿ.ದೇವಸ್ಥಾನಗಳ ಧನಸಹಾಯದಿಂದ ಪ್ರಕಟಿತ)
ಸುಮನ ಯಜುರ್ವೇದಿ	ಪ್ರಾಣೇಶದಾಸರ ಜೀವನ ಮತ್ತು ಕೃತಿಗಳು.
ಹರಿದಾಸಭಟ್ ಕು.ಶಿ.	ದಾಸಪ್ರಭೆ ಲೇಖನಗಳು, ಶ್ರೀ ಪುರಂದರದಾಸ ಚತುರ್ಥ ಶತಮಾನೋತ್ಸವ ಸಮಿತಿ, ಉಡುಪಿ, 1963.
ಹಿರೇಮಠ್ ಎಸ್.ಎಂ. ಡಾ। & ಹಿರೇಮಠ್ ವಿ.ಬಿ. ಪ್ರೊ।	ಭಾರತೀಯ ಕಾವ್ಯತತ್ವ ಚಿಂತನೆ, ವಿದ್ಯಾನಿಧಿ ಪ್ರಕಾಶನ, ಗದಗ, 1991.
	ಸಾಹಿತ್ಯ ವಿಹಾರ ದತ್ತಿ ಉಪನ್ಯಾಸ ಸಂಕಲನ, ಕ.ಸಾ.ಪ. ಬೆಂಗಳೂರು, 1977.

– – – –

ಇ. ಕೀರ್ತನಾ ಸಂಗ್ರಹಗಳು

1. ಶ್ರೀ ವ್ಯಾಸರಾಯರ ಕೀರ್ತನೆಗಳು	ಸಮಗ್ರ ದಾಸಸಾಹಿತ್ಯ ಸಂ.–1
2. ಶ್ರೀಪಾದರಾಯರ ಕೀರ್ತನೆಗಳು	ಸಮಗ್ರ ದಾಸಸಾಹಿತ್ಯ ಸಂ.–1
3. ಶ್ರೀ ವಾದಿರಾಜರ ಕೀರ್ತನೆಗಳು	ಸಮಗ್ರ ದಾಸಸಾಹಿತ್ಯ ಸಂ.–2
4. ಪುರಂದರದಾಸ ಕೀರ್ತನೆಗಳು	ಸಮಗ್ರ ದಾಸಸಾಹಿತ್ಯ ಸಂ.3–1, 2 & 4
5. ಕನಕದಾಸರ ಕೀರ್ತನೆಗಳು	ಸಮಗ್ರ ದಾಸಸಾಹಿತ್ಯ ಸಂ.–5–1, 2
6. ಕಾಖಂಡಕಿ ಮಹಿಪತಿರಾಯರ ಕೀರ್ತನೆಗಳು	ಸಮಗ್ರ ದಾಸಸಾಹಿತ್ಯ ಸಂ.–6–1, 2
7. ಗಲಗಲಿ ಅವ್ವನವರ ಕೀರ್ತನೆಗಳು	ಸಮಗ್ರ ದಾಸಸಾಹಿತ್ಯ ಸಂ.–7
8. ಪ್ರಸನ್ನವೆಂಕಟದಾಸರ ಕೀರ್ತನೆಗಳು	ಸಮಗ್ರ ದಾಸಸಾಹಿತ್ಯ ಸಂ.–8
9. ವಿಜಯದಾಸರ ಕೀರ್ತನೆಗಳು	ಸಮಗ್ರ ದಾಸಸಾಹಿತ್ಯ ಸಂ.–9–1, 2 ಮತ್ತು 10–1, 2, 3 ಮತ್ತು 4
10. ಕಾಖಂಡಕಿ ಕೃಷ್ಣದಾಸರ ಕೀರ್ತನೆಗಳು	ಸಮಗ್ರ ದಾಸಸಾಹಿತ್ಯ ಸಂ.11–1, 2
11. ಕನಕದಾಸರ ಕೀರ್ತನಗಳು	ಮಿಂಚುಬಳ್ಳಿ ಸಮಾಜ ಪುಸ್ತಕಾಲಯ, ಧಾರವಾಡ, 1965.
12. ಸಿರಿಗಂಗಾಜನಕ ಕೀರ್ತನ ಕುಸುಮಾಂಜಲಿ	ಡಾ। ಟಿ.ಎನ್. ನಾಗರತ್ನ, ಶ್ರೀ ಶಕ್ತಿ ಎಲೆಕ್ಟ್ರಿಕ್ ಪ್ರೆಸ್, ಮೈಸೂರು, 2002.
13. ಮಾಧ್ವಭಜನ ಮಂಜರಿ	ಮೆ॥ ಶ್ರೀನಿವಾಸಾಚಾರ್ಯ, ಹೊಂಬಾಳಿ & ಸನ್, ಗದಗ, 1994.
14. ಭಜನಮಾಲಾ (ಸಂ & ಪ್ರ)	ಶ್ರೀ ದಾಸಸಾಹಿತ್ಯ ಪ್ರಚಾರ ಸಮಿತಿ, ವಿಜಾಪುರ 1983.
15. ಭಕ್ತಿವಾಹಿನೀ	ದಿವಂಗತ ಶ್ರೀಮತಿ ಬೆಳ್ಳೆ ಸೀತಾರತ್ನಾಬಾಯಿ, ಪುತ್ತೂರು,

16. ಭಕ್ತಿಕುಸುಮ	ಶ್ರೀಮತಿ ಶಾರದಮ್ಮ, ವನಿತಾಸೇವಾ ಮಂದಿರ, ಬೆಂಗಳೂರು.
17. ಕೀರ್ತನ ಮಂಜರಿ	ಪ್ರೊ ವಿ.ಎ. ಜೋಶಿ, ಸಮಾಜ ಪುಸ್ತಕಾಲಯ, ಧಾರವಾಡ, 1985.
18. ಹರಿದಾಸರು ವರ್ಣಿಸಿದ ದಶಾವತಾರ	ಪ್ರಹ್ಲಾದಾಚಾರ್ಯ ಕೃ. ಸರಸ್ವತಿ ಕಲಾ ಶ್ರೀ ಶಕ್ತಿ ಎಲೆಕ್ಟ್ರಿಕ್ ಪ್ರೆಸ್, ರಾಯಚೂರು, 2000.
19. ಭಜನ ಮಂಜರಿ	ವೇದವಾರಿಧಿ, ಕೆ.ಎಲ್. ಪುಷ್ಕರಾಚಾರ್ಯ, ಶ್ರೀ ನಾರಾಯಣಾಚಾರ್, ಪೂಜಾ ಭಂಡಾರ, ಬೆಂ.
20. ಶ್ರೀ ವರದೇಶವಿಠಲದಾಸರ ಕೀರ್ತನೆಗಳು	ಬಿ.ಎಸ್. ಅನಿಲಕುಮಾರ್, ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ, ಮಂತ್ರಾಲಯ, 2004.
21. ಶ್ರೀ ಸುಂದರವಿಠಲದಾಸರ ಕೀರ್ತನೆಗಳು	ಮೇಲಿನಂತೆ.
22. ಗುರುಶಾಮಸುಂದರವಿಠಲರ ಕೀರ್ತನೆಗಳು	ಪವನ್ ಕುಮಾರ್, ಜಿ. (ಸಂ.) ಮೇಲಿನಂತೆ.
23. ಹೆಳವನಕಟ್ಟಿ ಗಿರಿಯಮ್ಮನ ಹಾಡುಗಳು	ಕಾವ್ಯಪ್ರೇಮಿ (ಸಂ) ಸಮಾಜ ಪುಸ್ತಕಾಲಯ, ಧಾರವಾಡ, 1986.
24. ದೇವತಾ ಕೀರ್ತನಾವಳಿ	ಬಿ.ವೆಂಕಟರಾವ್, ಭಾರತ್ ಪ್ರೆಸ್, ಉಡುಪಿ. 1970.
25. ಅಂಕಿತ ಮಾಲೆ	ಲೇ.ಹರಿದಾಸ ಕುಲತಿಲಕ ದಿ॥ ಗುರುಗೋವಿಂದದಾಸರು. ಶ್ರೀ. ಗುರುಕೃಪಾ ಗ್ರಂಥಮಾಲೆ, ಮೈಸೂರು. 1996.
26. ಶ್ರೀ ಹರಿದಾಸ ಕೀರ್ತನ ಮಂಜರಿ	ಬಿ.ಕೆ. ಶ್ರೀಮತಿ ರಾವ್, ಶ್ರೀಗುರುಪ್ರಿಯ ಪ್ರಕಾಶನ, ಮಂಗಳೂರು, 2007.

– – – –

ಈ. ಪತ್ರಿಕಾ ಲೇಖನಗಳು

1.	ರಂಗವಿಠಲ	ಶ್ರೀಪಾದರಾಜರ ಮಠ, ಬೆಂಗಳೂರು
2.	ಶ್ರೀಸುಧಾ	ಶ್ರೀ ಉತ್ತರಾದಿ ಮಠ, ಬೆಂಗಳೂರು.
3.	ಶ್ರೀ ಗುರುಸಾರ್ವಭೌಮ	ಶ್ರೀ ರಾಘವೇಂದ್ರಮಠ, ಮಂತ್ರಾಲಯ.
4.	ತತ್ವವಾದ	ಅಖಿಲ ಭಾರತ ಮಾಧ್ವಮಹಾಮಂಡಲ
5.	ವಿಜಯ ಸಂಪದ	ಶ್ರೀ ರಾಘವೇಂದ್ರಮಠ, ಮಂತ್ರಾಲಯ.
6.	ಹರಿದಾಸವಾಹಿನಿ	ಶ್ರೀ ರಾಘವೇಂದ್ರಮಠ, ಮಂತ್ರಾಲಯ.
7.	ಶ್ರೀಮುಖ್ಯಪ್ರಾಣ	ಶ್ರೀಮತಿ. ಕೆ. ಉಷಾ. ಬೆಂಗಳೂರು
8.	ಸುಗುಣ ಮಾಲಾ	ಉಡುಪಿ.